ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 11 ಮಾರ್ಚ್ 10-16, 1997 ಬೆಲೆ ರೂ. 2.00

ಮಾತಿನ ಮಂಟಪ ಸಾಕು - ಕೃತಿ ಬೇಕು

ಮೀಸಲಾತಿ ಮಸೂದೆ ಅಂಗೀಕಾರಕ್ಕೆ ಮಹಿಳಾ ಸಂಘಟನೆಗಳ ಆಗ್ರಹ

ಸಮಾನತೆಗಾಗಿ ಹೋರಾಟದಲ್ಲಿ ಮಹಿಳಾ ಆಂದೋಲನ ಮುನ್ನಡೆಯನ್ನು ನೆನಪಿಸುವ ಅಂತರ್ರಾಷ್ಟ್ರೀಯ ಮಹಿಳಾ ದಿನವನ್ನು ಈ ಬಾರಿ ಭಾರತದಾದ್ಯಂತ ರಾಜಕೀಯ ಸಮಾನತೆಗಾಗಿ ನಡೆಸುವ ಹೋರಾಟದ ದಿನವಾಗಿ ಮಹಿಳೆಯರು ಆಚರಿಸಿದ್ದಾರೆ. ಇದು ಸಂಸತ್ತಿನಲ್ಲಿ, ವಿಧಾನಸಭೆಗಳಲ್ಲಿ ಇನ್ನೂ ಕೆಲವು ಮಹಿಳೆಯರು ಸ್ಥಾನ ಗಿಟ್ಟಿಸುವ ಅವಕಾಶದ ಪ್ರಶ್ನೆಯಲ್ಲ, ಆಡಳಿತದ ನೀತಿ-ನಿಯಮಾವಳಿಗಳನ್ನು ನಿರ್ಧರಿಸುವಲ್ಲಿ, ನೀತಿ ನಿರ್ಧಾರಣೆಯ ಪ್ರಕ್ರಿಯೆಯಲ್ಲಿ ಪ್ರಭಾವ ಬೀರುವಲ್ಲಿ ಮಹಿಳೆಯರ ಪಾತ್ರವಿರಬೇಕು ಎಂಬ ತತ್ವದ ಪ್ರಶ್ನೆ. ಆದ್ದರಿಂದ 33 ಶೇಕಡಾ ಮೀಸಲಾತಿ ನೀಡುವ ಸಂವಿಧಾನದ 81ನೇ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸುವಲ್ಲಿ ಎಡಪಕ್ಷಗಳನ್ನು ಬಿಟ್ಟು ಬೇರೆಲ್ಲಾ ರಾಜಕೀಯ ಪಕ್ಷಗಳು ಹಿಂದೇಟು ಹಾಕುತ್ತಿರುವುದನ್ನು ಏಳು ರಾಷ್ಟ್ರೀಯ ಮಹಿಳಾ ಸಂಘಟನೆಗಳು ಬಲವಾಗಿ ಪ್ರತಿಭಟಿಸಿವೆ.

ಈ ವರ್ಷದ 'ಅಂತರ್ರಾಷ್ಟ್ರೀಯ ಮಹಿಳಾ ದಿನಾಚರಣೆ'ಯ ಮುನ್ನಾದಿನ ರಾಷ್ಟ್ರಪತಿಗಳನ್ನು ಭೇಟಿ ಮಾಡಿದ ಈ ಏಳು ಸಂಘಟನೆಗಳ ಮುಂದಾಳುಗಳು ರಾಷ್ಟ್ರಪತಿಗಳು ಮಹಿಳೆಯರ ಪರವಾಗಿ ಮಧ್ಯಪ್ರವೇಶಿಸಿ ಸರಕಾರ ಈ ಮಸೂದೆಯನ್ನು ಸಂಸತ್ತಿನ ಮುಂದೆ ಅಂಗೀಕಾರಕ್ಕೆ ತರುವಂತೆ ಸಲಹೆ ನೀಡಬೇಕೆಂದು ಆಗ್ರಹಪಡಿಸಿವೆ.

ಎಲ್ಲಾ ರಾಜಕೀಯ ಪಕ್ಷಗಳು ಹಿಂದಿನ ಚುನಾವಣೆಗಳಲ್ಲಿ ಮಹಿಳಾ ಮೀಸಲಾತಿಯ ಭರವಸೆ ನೀಡಿದ್ದರೂ ಕಳೆದ ಸೆಪ್ಟೆಂಬರ್‌ನ ಸಂಸತ್ತಿನ ಮುಂದೆ ಬಂದ ಈ ಮಸೂದೆ ಇನ್ನೂ ಅಂಗೀಕಾರವಾಗಿಲ್ಲ. ಇದನ್ನು ರಾಷ್ಟ್ರಪತಿಗಳ ಗಮನಕ್ಕೆ ತಂದಿರುವ ಮಹಿಳಾ ಸಂಘಟನೆಗಳು ಅವರಿಗೆ ಸಲ್ಲಿಸಿದ ಒಂದು ಮನವಿ ಪತ್ರದಲ್ಲಿ "ಸಂಸತ್ತಿನ ಎರಡೂ ಸದನಗಳ ಜಂಟಿ ಆಯ್ಕೆ ಸಮಿತಿ ಸಕಾರಾತ್ಮಕ ಶಿಫಾರಸು ನೀಡಿದ್ದರೂ ಸರಕಾರ ಇನ್ನೂ ಇದನ್ನು ಅಂಗೀಕಾರಕ್ಕೆ ಮಂಡಿಸದಿರುವುದು ಗಂಭೀರ ಆತಂಕಕಾರಿ ಸಂಗತಿ ಎಂದಿವೆ.

"ರಾಜಕೀಯ ಪಕ್ಷಗಳ ಗೋಸುಂಬೆತನ ಕಂಡು ನಮಗೆ ಸಾಕಾಗಿ ಬಿಟ್ಟಿದೆ. ಸಂಸತ್ತಿನಲ್ಲಿ ಆ ಮಸೂದೆಯನ್ನು ತರಲಿ: ಆಗ ಎಲ್ಲಾ ರಾಜಕೀಯ ಪಕ್ಷಗಳ ನಿಜ ಬಣ್ಣ ತಿಳಿಯುತ್ತದೆ" ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ(ಎಐಡಿಡಬ್ಲ್ಯುಎ)ದ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ನಂತರ ಸುದ್ದಿಗಾರರೊಂದಿಗೆ. ಮಾತನಾಡುತ್ತಾ ಹೇಳಿದ್ದಾರೆ.

"ಮಾತಿನ ಮಂಟಪ ಸಾಕು- ಮತದಾನ ನಡೆಯಲಿ. ಮಹಿಳೆಯರನ್ನು ಪುಸಲಾಯಿಸುವ ರಾಜಕೀಯ ಪಕ್ಷಗಳ ಪ್ರಯತ್ನಕ್ಕೆ ನಾವು ಅವಕಾಶ ಕೊಡುವುದಿಲ್ಲ" ಎಂದು ಅವರು ಖಾರವಾಗಿ ಹೇಳಿದರು.

"ಮೀಸಲಾತಿಯನ್ನು 15-20 ಶೇ.ಕ್ಕಿಳಿಸುವ ಪ್ರಸ್ತಾವವಿದೆ ಎಂದು ನಮಗೆ ತಿಳಿದು ಬಂದಿದೆ. ಮಹಿಳೆಯರಿಗೆ ಇದಕ್ಕಿಂತ ಹೆಚ್ಚು ಅವಮಾನಕಾರಿಯಾದುದು ಏನಿದೆ? ಇದರರ್ಥ 33 ಶೇ. ಕೋಟಾವನ್ನು ಭರ್ತಿ ಮಾಡಲು ಸಾಕಷ್ಟು ಸಮರ್ಥ ಮಹಿಳೆಯರು

ಪುಟ 8 ನೋಡಿ

ಹೆಜ್ಜಾಲ ಪೋಲೀಸ್ ದುರಾಕ್ರಮಣದಲ್ಲಿ ಮಡಿದವರ

ಹುತಾತ್ಮ ಜ್ಯೋತಿಯೊಂದಿಗೆ ರೈತ-ಕಾರ್ಮಿಕರ ಕಾಲ್ನಡಿಗೆ ಜಾಥಾ

ಫೆಬ್ರವರಿ 3ರಂದು ಬೆಂಗಳೂರಿನ ಸಮೀಪವಿರುವ ಹೆಜ್ಜಾಲದಲ್ಲಿ ವಳ್ಳಿಯಪ್ಪ ಮಿಲ್‌ನ ಕಾರ್ಮಿಕರ ಮೇಲೆ ಎಲ್ಲೆಂದರಲ್ಲಿ ಗುಂಡು ಹಾರಿಸಿ ಹೊಸಕಿ ಹಾಕಿದ ರಾಕ್ಷಸೀ ಕೃತ್ಯ ನಡೆಸಿದ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು, ಈ ಘಟನೆಯ ನ್ಯಾಯಾಂಗ ತನಿಖೆ ನಡೆಸಬೇಕು, ಸತ್ತ ಮೂವರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡಬೇಕು, ಗಾಯಗೊಂಡ ಇಪ್ಪತ್ತೂರು ಕುಟುಂಬಗಳಿಗೆ ತಲಾ 50 ಸಾವಿರ ಪರಿಹಾರ ಧನ ದೊರಕಬೇಕು, ಗಾಯಗೊಂಡವರಿಗೆ ಆಸ್ಪತ್ರೆಯಲ್ಲಿ ಸರಿಯಾದ ರೀತಿಯಲ್ಲಿ ಉಚಿತ ಚಿಕಿತ್ಸೆ ದೊರಕಬೇಕು ಎಂದು ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ ಸರಕಾರವನ್ನು ಆಗ್ರಹಪಡಿಸಿದ್ದವು. ಆದರೆ ಸರಕಾರ ಸತ್ತವರ ಕುಟುಂಬಗಳಿಗೆ ಒಂದು ಲಕ್ಷ ರೂ. ಕೊಟ್ಟಿದ್ದನ್ನು ಬಿಟ್ಟರೆ ಬೇರಾವ ಕ್ರಮ ಕೈಗೊಳ್ಳಲೂ ಮೀನ-ಮೇಷ ಎಣಿಸುತ್ತಿದೆ. ಇದನ್ನು ಪ್ರತಿಭಟಿಸಲು ಹಾಗೂ ಸರಕಾರ ವಿಳಂಬವಿಲ್ಲದೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲು, ಹುತಾತ್ಮರಾಗಿರುವ ಸೀತಮ್ಮ ನಾಗರಾಜ ಹಾಗೂ ಕೃಷ್ಣಪ್ಪನವರ ಬಲಿದಾನಕ್ಕೆ ಗೌರವ ಸೂಚಿಸಲು ಹುತಾತ್ಮ ಕೃಷ್ಣಪ್ಪನವರ ಮೇಡನಹಳ್ಳಿಯಿಂದ, ಮಂಚನಾಯಕನಹಳ್ಳಿಯಿಂದ, ಹೆಜ್ಜಾಲ ಗೇಟಿನಿಂದ ಹುತಾತ್ಮ ಜ್ಯೋತಿಯೊಂದಿಗೆ ಕಾಲ್ನಡಿಗೆ ಜಾಥಾ ನಡೆಸಲು ಸಿಐಟಿಯು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಬೆಂಗಳೂರು ಜಿಲ್ಲಾ ಸಮಿತಿಗಳು ನಿರ್ಧರಿಸಿವೆ. ಈ ಎರಡು ಸಂಘಟನೆಗಳ ಜಿಲ್ಲಾ ಸಮಿತಿಗಳ ಕಾರ್ಯದರ್ಶಿಗಳಾದ ಮೀನಾಕ್ಷಿ ಸುಂದರಂ ಮತ್ತು ವೆಂಕಟಾಚಲಯ್ಯನವರ ನೇತೃತ್ವದಲ್ಲಿ ಕುಂಬಳಗೋಡು, ಕೆಂಗೇರಿ, ನಾಯಂಡಹಳ್ಳಿಯಿಂದ ಹಾದು ಸಿಐಟಿಯುವಿನ 7ನೇ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭ ನಡೆಯಲಿರುವ ಬೆಂಗಳೂರಿನ ಪುರಭವನಕ್ಕೆ ಬರಲಿರುವ ಈ ಹುತಾತ್ಮ ಜ್ಯೋತಿಯ ಕಾಲ್ನಡಿಗೆ ಜಾಥಾದಲ್ಲಿ ಆ ಹಳ್ಳಿಗಳ ನೂರಾರು ಗ್ರಾಮಸ್ಥರು, ಕಾರ್ಮಿಕರು ಭಾಗವಹಿಸಲಿದ್ದಾರೆ. ಮಾರ್ಚ್ 12ರಂದು ಬೆಳಿಗ್ಗೆ ಮೇಡನಹಳ್ಳಿಯಿಂದ ಹೊರಡುವ ಈ ಹುತಾತ್ಮ ಜ್ಯೋತಿ ಜಾಥಾ ಮಾರ್ಚ್ 13ರ ಬೆಳಿಗ್ಗೆ ಬೆಂಗಳೂರಿನ ಪುರಭವನವನ್ನು ತಲುಪಿದಾಗ ಸಿಐಟಿಯು ಸಮ್ಮೇಳನಕ್ಕೆ ಆಗಮಿಸಲಿರುವ ಕರ್ನಾಟಕದ ಕಾರ್ಮಿಕರ ಪ್ರತಿನಿಧಿಗಳು ಹಾಗೂ ಇತರರು ಅದನ್ನು ಎದುರುಗೊಳ್ಳುವರು.

ಬಸ್ ದರಗಳಲಿ ಅಭೂತಪೂರ್ವ ಏರಿಕೆ

ರಾಜ್ಯದ ಎಲ್ಲೆಡೆ ಪ್ರತಿಭಟನೆ

ಮಾರ್ಚ್ 1ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಪ್ರಯಾಣ ದರಗಳನ್ನು ತೀವ್ರವಾಗಿ ಹೆಚ್ಚಿಸಿದೆ. ಸುಮಾರು ಶೇ. 35ರಷ್ಟು ಎಂದು ಅದೇ ಹೇಳಿಕೊಂಡಿದೆ. ಆದರೆ ವಾಸ್ತವವಾಗಿ ಅದು ಇನ್ನೂ ಹೆಚ್ಚಿದೆ. ನಗರ ಸಾರಿಗೆಯಲ್ಲಿ ಏರಿಕೆ 50% ದಿಂದ 150%ರಷ್ಟು ಏರಿಕೆಯಾಗಿದೆ ಎಂಬ ದೂರುಗಳು ವ್ಯಾಪಕವಾಗಿ ಬರುತ್ತಿವೆ. ಈ ಹಿಂದೆ 1993ರಲ್ಲಿ ದರ ಏರಿಕೆ ಶೇ. 18ರಷ್ಟಿತ್ತು. ಹಲವೆಡೆ ವಿವಿಧ ಜನವಿಭಾಗಗಳು ಈ ವಿಪರೀತ ಏರಿಕೆಯನ್ನು ಪ್ರತಿಭಟಿಸಿವೆ. 1991ರಿಂದ ಕೆಎಸ್‌ಆರ್‌ಟಿಸಿ ನಷ್ಟ ಮಾಡುತ್ತಿದ್ದು ಮಾರ್ಚ್ 31, 1996ರವರೆಗೆ ಸಂಚಿತ ನಷ್ಟ 483 ಕೋಟಿ ರೂ.ಗಳಾಗುತ್ತಂತೆ. ಈ ವರ್ಷ 88 ಕೋಟಿ ರೂ. ನಷ್ಟವಾಗಿದ್ದು ಮುಂದಿನ ವರ್ಷ ಇದು 168 ಕೋಟಿ ರೂ.ಗಳಿಗೆ ಏರಲಿದ್ದು, ಈ ಬೆಲೆ ಏರಿಕೆಯಿಂದ 173.7 ಕೋಟಿ ರೂ.ಗಳಷ್ಟು ಹೆಚ್ಚಿನ ಆದಾಯ ಬಂದು ಇದನ್ನು ಸರಿ ಹೊಂದಿಸಬಹುದು, ಆದ್ದರಿಂದ ಜನಗಳು ಪ್ರತಿಭಟಿಸಿದರೂ ದರ ಏರಿಕೆಯನ್ನು ಇಳಿಸುವುದಿಲ್ಲ ಎಂದು ಸಾರಿಗೆ ಮಂತ್ರಿಗಳು ಹೇಳಿದ್ದಾರೆ. ಹಿಂದೆ ಮುಖ್ಯಮಂತ್ರಿಗಳು ಜನಗಳ ಪ್ರತಿಭಟನೆಯ ಬಗ್ಗೆ ಇದೇ ರೀತಿಯ ಮಾತನ್ನಾಡಿದ್ದರು. ಪ್ರಜಾಪ್ರಭುತ್ವವೆಂದರೆ ಜನಗಳು ತಮ್ಮ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಮಾತ್ರ, ಆ ಪ್ರತಿನಿಧಿಗಳ ಕೆಲಸ-ಕಾರ್ಯಗಳನ್ನು ಪ್ರಶ್ನಿಸುವ ಹಕ್ಕು ಇಲ್ಲ ಎಂದು ಇವರು ಭಾವಿಸಿದ್ದಾರೆಯೇ? ಅಥವಾ ಐ.ಎಂ.ಎಫ್.-ವಿಶ್ವ ಬ್ಯಾಂಕ್ ಹೇರಿದ "ಉದಾರೀಕರಣ" ಮಾರ್ಗವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳುತ್ತಿರುವ ಇವರುಗಳಿಗೆ ಇಂತಹ ವಿಚಾರಗಳ ಬಗ್ಗೆ ಯೋಚಿಸುವ ಸಾಮರ್ಥ್ಯವೇ ಉಡುಗಿಹೋಗಿದೆಯೇ ಎಂದು ಪ್ರಜಾಪ್ರಭುತ್ವವಾದಿಗಳಿಗೆಲ್ಲಾ ಬಲವಾದ ಸಂದೇಹ ಬರುವಂತಾಗಿದೆ.

ಅತ್ತ ದಿಲ್ಲಿಯಲ್ಲಿ ಐ.ಎಂ.ಎಫ್-ವಿಶ್ವ ಬ್ಯಾಂಕ್ ದೊರೆಗಳು, ದೇಶದ ದೊಡ್ಡ-ದೊಡ್ಡ ಉದ್ಯಮಿಗಳು ಕೇಂದ್ರ ಬಜೆಟ್ಟನ್ನು ಹಾಡಿ ಹೊಗಳುವ ಸುದ್ದಿಗಳೊಂದಿಗೆ ಈ ತೀವ್ರ ದರ ಏರಿಕೆಯ ಸುದ್ದಿಯನ್ನು ಕರ್ನಾಟಕದ ಜನ ಕೇಳಬೇಕಾಗಿರುವುದು ಕಾಕತಾಳೀಯವಲ್ಲ. ಈ ಎರಡರ ಹಿಂದೆ ಇರುವ ತತ್ವ ಒಂದೇ - ಅದೇ ಐಎಂಎಫ್-ವಿಶ್ವ ಬ್ಯಾಂಕ್ ಉಪದೇಶಿಸಿದ 'ಉದಾರೀಕರಣ' ತತ್ವ ಎಂಬುದನ್ನು ದುಡಿಯುವ ಜನಗಳು ಅರಿಯಬೇಕಾಗಿದೆ. ಆದ್ದರಿಂದಲೇ ಈ ವಿಪರೀತ ದರ ಏರಿಕೆಯನ್ನು ಖಂಡಿಸುವ ಬಿಜೆಪಿ ದಿಲ್ಲಿಯಲ್ಲಿ ವಿದ್ಯುತ್ ದರವನ್ನು ಶೇ. 60ರಷ್ಟು ಏರಿಸುತ್ತದೆ. ಆದ್ದರಿಂದ ದುಡಿಯುವ ಜನ ಈ "ಉದಾರೀಕರಣ"ದ ತತ್ವದ ವಿರುದ್ಧ ತಾವು ಈಗಾಗಲೇ ಆರಂಭಿಸಿರುವ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕಾಗಿದೆ.

ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಹೋರಾಡಿ ಜಯ ಗಳಿಸಿದ ನೆನಪನ್ನು ತರುವ ಅಂತರ್ರಾಷ್ಟ್ರೀಯ ಮಹಿಳಾ ದಿನ(ಮಾರ್ಚ್ 8)ವನ್ನು ಈ ವರ್ಷ ದೇಶದಾದ್ಯಂತ ಮಹಿಳೆಯರು ರಾಜಕೀಯ ಸಮಾನತೆಗಾಗಿ ನಡೆಸುವ ಹೋರಾಟದ ದಿನವನ್ನಾಗಿ ಆಚರಿಸಿದ್ದಾರೆ. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ. 33 ಮೀಸಲಾತಿ ಕುರಿತಾದ ಸಂವಿಧಾನ ತಿದ್ದುಪಡಿ ಮಸೂದೆಯನ್ನು ಇನ್ನಷ್ಟು ಮೀನ-ಮೇಷ ಎಣಿಸದೆ ಅಂಗೀಕರಿಸಬೇಕು ಎಂದು ಒತ್ತಾಯಿಸಿದ್ದಾರೆ. ಎಡ ಪಕ್ಷಗಳು ಬಿಟ್ಟು ಇತರೆಲ್ಲಾ ರಾಜಕೀಯ ಪಕ್ಷಗಳು ಪ್ರದರ್ಶಿಸಿರುವ ಗೋಸುಂಬೆತನವನ್ನು ಖಂಡಿಸಿದ್ದಾರೆ.

ಸಿಪಿಐ(ಎಂ) ಖಂಡನೆ

ರಾಜ್ಯ ಸರಕಾರ ಜನಸಾಮಾನ್ಯರ ಮೇಲೆ ಹೇರಿದ ಈ ಇನ್ನೊಂದು ಭಾರೀ ಹೊರೆಯನ್ನು ಸಿಪಿಐ(ಎಂ) ಖಂಡಿಸಿದೆ. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ಈ ಕ್ರಮವನ್ನು ಪ್ರತಿಭಟಿಸಿ ಹಾಗೂ ವಿಪರೀತ ದರ ಏರಿಕೆಯನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ಮಾರ್ಚ್ 5ರಂದು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ರಸ್ತೆ ತಡೆ ನಡೆಸಿತು. ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಮಹಿಳೆಯರೂ ಸೇರಿದಂತೆ ಹಲವಾರು ಕಾರ್ಯಕರ್ತರು, ಕಾರ್ಮಿಕರನ್ನು ಪೋಲೀಸರು ಬಂಧಿಸಿದರು. ಹಿರಿಯ ಸಿಪಿಐ(ಎಂ) ಮುಂದಾಳು ಎಸ್.ಸೂರ್ಯನಾರಾಯಣ ರಾವ್, ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಆರ್.ಶ್ರೀನಿವಾಸ್ ಮತ್ತಿತರರು ಬೆಲೆಯೇರಿಕೆಯನ್ನು ಹಿಂತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸಿದರು. ಬೆಲೆಯೇರಿಕೆಯ ಹಿಂದಿರುವ ಧೋರಣೆಗಳ ಬಗ್ಗೆ ಜನರನ್ನು ಎಚ್ಚರಿಸಿದರು.

ರೈತ ಸಂಘದ ಖಂಡನೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ದರಗಳನ್ನು ಶೇ. 35ರಷ್ಟು ಏರಿಸಿರುವ ರಾಜ್ಯ ಸರಕಾರದ ಕ್ರಮವನ್ನು ಕರ್ನಾಟಕ ಪ್ರಾಂತ ರೈತ ಸಂಘ(ಎಐಕೆಎಸ್) ಕೋಲಾರ ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿದೆ ಮತ್ತು ಈ ದುಬಾರಿ ಏರಿಕೆಯನ್ನು ವಾಪಸ್ಸು ಪಡೆಯಬೇಕೆಂದು ಆಗ್ರಹಿಸಿದೆ.

ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಮಿತಿ ಮೀರಿರುವ ವ್ಯಾಪಕ ಭ್ರಷ್ಟಾಚಾರವನ್ನು ತಡೆಗಟ್ಟಲು ಕಠಿಣ ಕ್ರಮಗಳನ್ನು ಕೈಗೊಳ್ಳಲು ಅಸಮರ್ಥವಾಗಿರುವ ಸರಕಾರ ತನ್ನ ಭ್ರಷ್ಟತೆ ಹಾಗೂ ಅಸಮರ್ಥತೆಗೆ ಜನ ಸಾಮಾನ್ಯರಿಗೆ ದಂಡ ವಿಧಿಸುವ ಈ ಜನವಿರೋಧಿ ನೀತಿಯನ್ನು ಕೂಡಲೇ ವಾಪಸ್ಸು ಪಡೆಯಬೇಕೆಂದು, ಈ ನಿಟ್ಟಿನಲ್ಲಿ ರೈತ ಕೂಲಿಕಾರರ ಬಂಧುಗಳು ಇತರ ಜನಸಂಘಟನೆಗಳ ಜೊತೆ ಸೇರಿ ಹೋರಾಟಕ್ಕೆ ಮುಂದಾಗಬೇಕೆಂದು ರೈತ ಸಂಘದ ಜಿಲ್ಲಾ ಸಮಿತಿ ವಿನಂತಿಸಿದೆ. ಸಾರಿಗೆ ಸಂಸ್ಥೆ ಸಚಿವರಾದ ಸಿಂಧ್ಯಾರವರು ತಾನು ಈ ಕ್ಷೇತ್ರದಲ್ಲಿ ಅತ್ಯಂತ ಕ್ರಾಂತಿಕಾರಿ ಬದಲಾವಣೆ ತರಲು ಶ್ರಮಿಸುತ್ತಿರುವುದಾಗಿ ಪುಂಗಿ ಬಿಡುತ್ತಾ, ಇಡೀ ಸಾರಿಗೆ ವ್ಯವಸ್ಥೆಯನ್ನು ಖಾಸಗೀಕರಣಗೊಳಿಸಲು ಅಗತ್ಯವಿರುವ ಧೋರಣೆಗಳನ್ನು ಅನುಸರಿಸುತ್ತಾ, ಇದರ ಭಾಗವಾಗಿಯೇ ಅತಿ ದುಬಾರಿಯಾಗಿ ದರಗಳನ್ನು ಏರಿಸಿ ಜನ ಅನಿವಾರ್ಯವಾಗಿ ಖಾಸಗಿ ಬಸ್‌ಗಳಲ್ಲಿ ಪ್ರಯಾಣ ಮಾಡುವ ಸ್ಥಿತಿಗೆ ದೂಡಿ, ಸಾರಿಗೆ ಸಂಸ್ಥೆ ಇನ್ನಷ್ಟು ನಷ್ಟದಲ್ಲಿ ಇದೆ ಎಂದು ಹೇಳುತ್ತಾ ಖಾಸಗೀಕರಣದ ಕ್ರಿಯೆಯನ್ನು ಸುಲಭಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ, ಈ ನೀತಿಯನ್ನು ಕೈಬಿಟ್ಟು ಜನಪರ ಕ್ರಮಗಳಿಗೆ ಮುಂದಾಗಬೇಕು ಎಂದು ರೈತ ಸಂಘ ಹೇಳಿದೆ.



ಜವಳಿ ಕಾರ್ಮಿಕರ ಮೇಲೆ ಲಾಠಿ ಪ್ರಹಾರ, ಬಂಧನ

ನವದೆಹಲಿಯಲ್ಲಿ ಪ್ರಧಾನಿ ನಿವಾಸದ ಮುಂದೆ ಧರಣಿ ನಡೆಸಲು ತೆರಳುತ್ತಿದ್ದ ರಾಷ್ಟ್ರೀಯ ಜವಳಿ ನಿಗಮದ(ಎನ್‌ಟಿಸಿ) ಸಾವಿರಾರು ಕಾರ್ಮಿಕರ ಮೇಲೆ ಲಾಠಿ ಪ್ರಹಾರ ನಡೆಸಲಾಗಿದೆ ಹಾಗೂ ಅನೇಕ ಕಾರ್ಮಿಕರನ್ನು ಬಂಧಿಸಲಾಗಿದೆ.

1994ರಲ್ಲಿ ಆದ ವಿಶೇಷ ತ್ರಿಪಕ್ಷೀಯ ಒಪ್ಪಂದವನ್ನು ಜಾರಿಗೊಳಿಸುವಂತೆ ಒತ್ತಾಯಿಸಲು ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಗಿತ್ತು. ಎನ್‌ಟಿಸಿ ಗಿರಣಿಗಳನ್ನು ಪುನರಾರಂಭಿಸಬೇಕು ಎನ್ನುವುದು ತ್ರಿಪಕ್ಷೀಯ ಒಪ್ಪಂದದ ಪ್ರಮುಖ ಅಂಶವಾಗಿದೆ.

ಪ್ರಧಾನಿ ಎಚ್.ಡಿ.ದೇವೇಗೌಡ ಪದೇ ಪದೇ ಭರವಸೆ ನೀಡಿದ್ದರೂ ಈ ಒಪ್ಪಂದ ಅನುಷ್ಠಾನಕ್ಕೆ ಬಂದಿಲ್ಲ. ಇದಕ್ಕೆ ಬದಲು ಎನ್‌ಟಿಸಿ ಮಿಲ್‌ಗಳಲ್ಲಿ ಉತ್ಪಾದನೆಯನ್ನು ಮತ್ತು ವೇತನ ನೀಡಿಕೆಯನ್ನು ನಿಲ್ಲಿಸಲಾಗಿದೆ. ಇದನ್ನು ಪ್ರತಿಭಟಿಸಲು ಫೆಬ್ರವರಿ 25 ರ ಹೋರಾಟಕ್ಕೆ ಇಂಟಕ್, ಐಟಕ್, ಸಿಐಟಿಯು, ಎಚ್‌ಎಂಎಸ್, ಬಿಎಂಎಸ್ ಮತ್ತು ಯುಟಿಯುಸಿಗಳನ್ನೊಳಗೊಂಡ ಜವಳಿ ಕಾರ್ಮಿಕರ ಜಂಟಿ ಕ್ರಿಯಾ ಸಮಿತಿ ಕರೆ ನೀಡಿತ್ತು.

ಧರಣಿ ಸ್ಥಳದತ್ತ ಸಾಗುತ್ತಿದ್ದ 2000 ಕ್ಕೂ ಹೆಚ್ಚಿನ ಕಾರ್ಮಿಕರನ್ನು ಭಾರೀ ಸಂಖ್ಯೆಯಲ್ಲಿದ್ದ ಪೋಲೀಸರು ಸಿಐಟಿಯು ಕೇಂದ್ರ ಕಚೇರಿ ಬಳಿ ತಾಲಕತೋರ ರಸ್ತೆಯಲ್ಲಿ ತಡೆದರು. ಪೋಲೀಸರ ಲಾಠಿ ಪ್ರಹಾರದಲ್ಲಿ ಮಹಿಳೆಯರ ಸಹಿತ ಅನೇಕರು ಗಾಯಗೊಂಡರು. ಕಾರ್ಮಿಕರು ರಸ್ತೆಗಳಲ್ಲೇ ಧರಣಿ ಕುಳಿತರು. ಸಂಸತ್ ಭವನದತ್ತ ಸಾಗುವ ಮಾರ್ಗಗಳಲ್ಲಿ ನಾಲ್ಕು ಗಂಟೆಗೂ ಹೆಚ್ಚು ಕಾಲ ಸಂಚಾರ ಸ್ಥಗಿತಗೊಂಡಿತು.

ಕಾರ್ಮಿಕರ ಇನ್ನೊಂದು ಗುಂಪನ್ನು ಉದ್ಯೋಗ್ ಭವನದ ಬಳಿ ತಡೆಯಲಾಯಿತು. ಆದರೂ ಕಾರ್ಮಿಕರು ಉದ್ಯೋಗ ಭವನವನ್ನು ಪ್ರವೇಶಿಸಿ ಸಭೆ ನಡೆಸಿದರು. ಅವರನ್ನೆಲ್ಲ ಪೋಲೀಸರು ಬಂಧಿಸಿದರು. ಬಹುತೇಕವಾಗಿ ಪಶ್ಚಿಮ ಬಂಗಾಳದಿಂದ ಬಂದಿದ್ದ ಕೆಲವು ಕಾರ್ಮಿಕರನ್ನು ರಫಿ ಮಾರ್ಗದಲ್ಲಿ ಬಂಧಿಸಿ ವ್ಯಾನುಗಳಲ್ಲಿ ಕರೆದೊಯ್ಯಲಾಯಿತು. ಲಖನೌ ಮತ್ತಿತರ ಕಡೆಗಳಿಂದ ಬಂದಿದ್ದ ಕಾರ್ಮಿಕರನ್ನು ನವದೆಹಲಿ ರೈಲ್ವೇ ನಿಲ್ದಾಣದಲ್ಲಿ ಬಂಧಿಸಿ ಅವರಲ್ಲಿದ್ದ ಬಾವುಟ, ಬ್ಯಾನುರುಗಳನ್ನು ಪೋಲೀಸರು ಕಿತ್ತುಕೊಂಡರು, ಗೊತ್ತು ಗುರಿಯಿಲ್ಲ ಜಾಗಕ್ಕೆ ಅವರನ್ನು ಕರೆದೊಯ್ಯಲಾಯಿತು.

ಪೋಲೀಸರ ದೌರ್ಜನ್ಯವನ್ನು ಲೆಕ್ಕಿಸದೆ ದುಡಿಯುವ ವರ್ಗ ಹೋರಾಟವನ್ನು ಮುಂದುವರಿಸುವ ದೃಢ ಸಂಕಲ್ಪ ಮಾಡಿದ್ದಾರೆ.

ಎನ್‌ಟಿಸಿ ಕಾರ್ಮಿಕರ ಮೇಲೆ ಪೋಲೀಸ್ ದೌರ್ಜನ್ಯ ನಡೆದ ವಿಷಯ ತಿಳಿದು ಅನೇಕ ಸಂಸತ್ ಸದಸ್ಯರು ಧಾವಿಸಿಬಂದರು. ಅವರನ್ನುದ್ದೇಶಿಸಿ ಮಾತನಾಡಿದರು. ಬಸುದೇವ ಆಚಾರ್ಯ, ಅಸೀಂ ಬಾಯಿ, ಚಿತ್ತಬಸು, ಪ್ರಮಾತೇಶ ಮುಖರ್ಜಿ, ಮೆಹಬೂಬ ಝ್ಹದಿ, ಜೀವನ್ ರಾಯ್, ದೀಪಂಕರ್ ಮುಖರ್ಜಿ, ಅಜಯ್ ಮುಖೋಪಾಧ್ಯಾಯ ಮೊದಲಾದವರು ಅವರಲ್ಲಿದ್ದರು.

ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರೂ ಹೋರಾಟ ನಿರತರನ್ನುದ್ದೇಶಿಸಿ ಮಾತನಾಡಿದರು.

ಲೋಕಸಭೆ ಮತ್ತು ರಾಜ್ಯ ಸಭೆಗಳಲ್ಲಿ ಕೂಡ ಅನೇಕ ಸದಸ್ಯರು ಈ ವಿಷಯವನ್ನು ಪ್ರಸ್ತಾವಿಸಿದರು.

ಸಂಯುಕ್ತ ರಂಗ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ(ಸಿಎಂಪಿ) ಕಾರ್ಮಿಕ ಪರ ನೀತಿಯನ್ನು ಅಳವಡಿಸಿಕೊಂಡಿದ್ದರೂ ಆದರ ಸರಕಾರದ ಧೋರಣೆ ದುಡಿಯುವ ವರ್ಗದವರ ವಿಚಾರದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಸರಕಾರಗಳಿಗಿಂತ ಭಿನ್ನವಾಗಿಲ್ಲ ಎನ್ನುವುದನ್ನು ಜವಳಿ ಕಾರ್ಮಿಕರ ಮೇಲೆ ನಡೆದ ಪೋಲೀಸ್ ದೌರ್ಜನ್ಯ ಸಾಬೀತು ಪಡಿಸಿದೆ.

ಮಾರ್ಚ್ 12: 'ಕಲ್ಲಿದ್ದಲು ಖಾಸಗೀಕರಣವನ್ನು ವಿರೋಧಿಸಿ' ಸಿಐಟಿಯು ಕರೆ

ಕಲ್ಲಿದ್ದಲು ಉದ್ದಿಮೆಯನ್ನು ಖಾಸಗೀಕರಿಸುವ, ಕಲ್ಲಿದ್ದಲಿನ ಮೇಲಿನ ಬೆಲೆ ಹತೋಟಿ ತೆಗೆಯುವ ಸರಕಾರದ ನಿರ್ಧಾರವನ್ನು ಸಿಐಟಿಯು ಬಲವಾಗಿ ಖಂಡಿಸಿದೆ. ಈ ಕ್ರಮದಿಂದ ಕೊನೆಗೆ "ಕಲ್ಲಿದ್ದಲು ಗಣಿಗಳ ಮಾಫಿಯಾಗಳ ಬಲ ಹೆಚ್ಚುತ್ತದಷ್ಟೇ ಹಾಗೂ ಕಲ್ಲಿದ್ದಲಿನ ಬೆಲೆ ಏರುತ್ತಿದೆ, ಅದರಿಂದಾಗಿ ಕೊನೆಗೆ ವಿದ್ಯುತ್ ದರಗಳೂ ಏರುತ್ತದೆ ಎಚ್ಚರಿಸಿದೆ.

"ಕೋಲ್ ಇಂಡಿಯಾ" ಸಂಸ್ಥೆಯನ್ನು ಪುನರ್‌ರಚಿಸುವ, ಕಲ್ಲಿದ್ದಲು ಉದ್ದಿಮೆಗೆ ವಿಶ್ವಬ್ಯಾಂಕಿನಿಂದ ಒಂದು ಶತಕೋಟಿ ಡಾಲರುಗಳ ಸಾಲದ ಬಗ್ಗೆ ಮಾತುಕತೆ ನಡೆಸುತ್ತಿರುವಾಗ ಸರಕಾರದ ಈ ನಿರ್ಣಯ ಸಂಘಟನೆಗಳಿಗೆ ಮನವಿ ಮಾಡಿದೆ. ಕೈಗೊಂಡಿರುವುದು ಭಾರತ ಸರಕಾರ ವಿಶ್ವಬ್ಯಾಂಕ್, ಐಎಂಎಫ್ ಒತ್ತಡಗಳಿಗೆ ಮಣಿದಿದೆ ಎಂಬುದುರ ಸ್ಪಷ್ಟ ಸಂಕೇತ ಎಂದು ಸಿಐಟಿಯು ಟೀಕಿಸಿದೆ.

ಪ್ರಧಾನ ವಲಯವನ್ನು ಖಾಸಗೀಕರಿಸುವುದಿಲ್ಲ ಎಂಬ ತನ್ನ ವಚನವನ್ನು ಸಂಯುಕ್ತ ರಂಗ ಸರಕಾರ ಹೀಗೆ ಬಹಿರಂಗವಾಗಿಯೇ ಉಲ್ಲಂಘಿಸಿದೆ ಎಂದಿರುವ ಸಿಐಟಿಯು ಈ ವಚನಭಂಗ ಹಾಗೂ ರಾಷ್ಟ್ರ - ವಿರೋಧಿ ಕ್ರಮದ ವಿರುದ್ಧ ದೇಶಾದ್ಯಂತ ಪ್ರತಿಭಟನಾ ಮತ ಪ್ರದರ್ಶನಗಳನ್ನು ನಡೆಸಬೇಕು ಎಂದು ಕಲ್ಲಿದ್ದಲು ಕಾರ್ಮಿಕರಿಗೆ ಕರೆ ನೀಡಿದೆ.

ಸಂಯುಕ್ತ ರಂಗ ಸರಕಾರದ ಈ ಕರಾಳ ಕ್ರಮದ ವಿರುದ್ಧ ಬಲವಾದ ಪ್ರತಿಭಟನೆಯ ದನಿಯನ್ನು ಎತ್ತಲು ಸಾಧ್ಯವಾಗುವಂತೆ ದೇಶದ ಏಳೂವರೆ ಲಕ್ಷ ಕಲ್ಲಿದ್ದಲು ಕಾರ್ಮಿಕರ ಮುಷ್ಕರಕ್ಕೆ ಒಂದು ಎಲ್ಲರಿಗೂ ಒಪ್ಪಿಗೆಯಾಗುವ ದಿನಾಂಕವನ್ನು ವಿಳಂಬವಿಲ್ಲದೆ ಗೊತ್ತು ಪಡಿಸಬೇಕು ಎಂದು ಸಿಐಟಿಯುನ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಮನವಿ ಮಾಡಿದೆ.

STATEMENT OF THE OWNERSHIP ETC. OF THE WEEKLY NEWSPAPER "AIKYARANGA"

Form IV

(see Rule 8)

1. Place of Publication	:	12, 18th Cross, S.R.Nagar, Bangalore - 560 027
2. Periodicity of Publication	:	Weekly
3. Printer's Name	:	P.Ramachandra Rao
(Whether Citizen of India? If Foreigner, State the Country of Origin)	:	Indian
Address	:	12, 18th Cross, S.R.Nagar, Bangalore-560 027
4. Publisher's Name	:	P.Ramachandra Rao
(Whether Citizen of India? If Foreigner, State the Country of Origin)	:	Indian
Address	:	12, 18th Cross, S.R.Nagar, Bangalore-560 027
5. Editor's Name	:	P.Ramachandra Rao
(Whether Citizen of India? If Foreigner, State the Country of Origin)	:	Indian
Address	:	12, 18th Cross, S.R.Nagar, Bangalore-560 027
6. Name and addresses of individuals who own the Newspaper and partners or shareholders holding more than one percent of the total capital.	:	Karnataka State Committee Communist Party of India (Marxist) 12, 18th Cross, S.R.Nagar, Bangalore - 560 027

I, P.Ramachandra Rao, hereby declare that the particulars given above are true to the best of my knowledge and belief.

Sd/-

P.Ramachandra Rao

Date : 28.2.1997

Publisher

ಕೈಗಾರಿಕೆ ಬೇಡವೇ?

'ಐಕ್ಯರಂಗ ಬಳಗ'ದ ಚರ್ಚೆ

ದಕ್ಷಿಣ ಕನ್ನಡ ಜಿಲ್ಲೆಯ ಪರಿಸರ ಉಳಿಸಲು ವಿವಿಧ ಸಂಘಟನೆಗಳು ಜೊತೆಗೂಡಿ ದಕ್ಷಿಣ ಕನ್ನಡ ಜಿಲ್ಲಾ ಪರಿಸರಾಸಕ್ತ ಒಕ್ಕೂಟವನ್ನು ರಚಿಸಿಕೊಂಡು ದಕ್ಷಿಣ ಕನ್ನಡ ಉಳಿಸಿ ಹಕ್ಕೊತ್ತಾಯ ಜಾಥಾ ನಡೆಸಿತು. ಇದೇ ಸಂದರ್ಭದಲ್ಲಿ ಸಿಐಟಿಯುವಿನ ಜಿಲ್ಲಾ ಸಮ್ಮೇಳನದಲ್ಲಿ ದೇಶದ ಅಭಿವೃದ್ಧಿಯಾಗಬೇಕಾದರೆ ಕೈಗಾರಿಕೆಗಳು ಬೆಳೆಯಬೇಕು. ಪರಿಸರದ ಹೆಸರಿನಲ್ಲಿ ಎಲ್ಲಾ ಕೈಗಾರಿಕೆಗಳಿಗೂ ತಡೆ ಒಡ್ಡುತ್ತಿರುವುದನ್ನು ಸಮ್ಮೇಳನ ಟೀಕಿಸಿತು.

ಈ ಎರಡು ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಭಾರತೀಯ ಜೀವ ವಿಮಾ ನಿಗಮದ ಕಾರ್ನಾಡ್ ಸದಾಶಿವರಾಯರ ರಸ್ತೆಯ ಶಾಖೆಯಲ್ಲಿ ಆರಂಭವಾಗಿರುವ 'ಐಕ್ಯರಂಗ ಓದುಗರ ಬಳಗ' ಚರ್ಚೆಯನ್ನು ಹಮ್ಮಿಕೊಂಡಿತ್ತು.

ಸಿಐಟಿಯು ಸಮ್ಮೇಳನದ ಅಭಿಪ್ರಾಯ, ಬೃಹತ್ ಕೈಗಾರಿಕೆಗಳಿಂದ ಆಗುವ ಅಪಾಯ, ಪರಿಸರ ಉಳಿಸಿಯೂ ಕೈಗಾರಿಕೆ ಸ್ಥಾಪನೆ, ಶುದ್ಧ ಪರಿಸರವಾದಿಗಳ ಅಪಾಯಕಾರಿ ಧೋರಣೆಯನ್ನು ಚರ್ಚಿಸಲಾಯಿತು.

ಬಳಗದ ಸಂಚಾಲಕ ನಾಗೇಶ್ ಕುಮಾರ್, ರಾಘವೇಂದ್ರ ರಾವ್, ಅಶೋಕ, ವರದರಾಜ್, ಅರುಣ್ ಕುಮಾರ್, ಮೋಹನ್ ದಾಸ್, ವಿಶ್ವನಾಥರೈ ಅವರು ಚರ್ಚೆಯಲ್ಲಿ ಭಾಗವಹಿಸಿದ್ದರು.

'ಉದ್ಯೋಗ ನೀಡುವ ಕೈಗಾರಿಕೆಗೆ ವಿರೋಧ ಸಲ್ಲ'

ಪರಿಸರವನ್ನು ನಾಶ ಮಾಡದ, ಸಾಕಷ್ಟು ಉದ್ಯೋಗ ಅವಕಾಶವನ್ನು ನೀಡುವ ಕೈಗಾರಿಕೆಗಳ ಸ್ಥಾಪನೆಗೆ ವಿರೋಧ ಬೇಡ ಎಂದು ಪತ್ರಕರ್ತ ಚಿದಂಬರ ಬೈಕಂಪಾಡಿ ಅವರು ಅಭಿಪ್ರಾಯ ಪಟ್ಟರು.

ಸಮಾನ ಮನಸ್ಕ ಸಂಘಟನೆಗಳು ರೂಪಿಸಿರುವ 'ನಿರಂತರ' ಗೋಡೆ ಪತ್ರಿಕೆ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಾದದಲ್ಲಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ಪರಿಸರ ಪ್ರಶ್ನೆ ದಕ್ಷಿಣ ಕನ್ನಡದಲ್ಲಿ ಸಾಕಷ್ಟು ಗೊಂದಲವನ್ನು ಹುಟ್ಟು ಹಾಕಿದೆ. ಪರಿಸರ ಹಾಳಾಗುತ್ತದೆ ಎಂಬ ಒಂದೇ ಕಾರಣಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ಬೇಡ ಎನ್ನುವುದು ತಪ್ಪು. ಹೆಚ್ಚುಪರಿಸರ ನಾಶವಾಗದ, ಆದರೆ ಸಾಕಷ್ಟು ಉದ್ಯೋಗವನ್ನು ನೀಡುವ ಕೈಗಾರಿಕೆಗಳು ಬಂದರೆತಪ್ಪಿಲ್ಲಎಂದರು.

ಯಾವುದೇ ಕೈಗಾರಿಕೆ ಸ್ಥಾಪನೆಯ ವಿಷಯದಲ್ಲಿ ಪಾರದರ್ಶಕತೆ ಇರಬೇಕು. ಕೈಗಾರಿಕೆಯ ಸ್ಥಾಪನೆಯಾಗುವಾಗ ಸರಕಾರ, ಜನತೆ, ಕೈಗಾರಿಕೋದ್ಯಮಿಗಳ ನಡುವೆ ಸಂವಾದ ನಡೆಯಬೇಕು. ಇಲ್ಲದಿದ್ದಲ್ಲಿ ಗುಮಾನಿಗಳು ಮೂಡಿ ಕೈಗಾರಿಕೆಗಳಿಗೆ ಪ್ರತಿಭಟನೆ ಬರುತ್ತದೆ. ಕೈಗಾರಿಕೆಯ ಸ್ಥಾಪನೆಯ ವಿಷಯದಲ್ಲಿ ಜನರ ಅಭಿಪ್ರಾಯಕ್ಕೆ ಮನ್ನಣೆ ಇರಬೇಕು ಎಂದರು.

ಕನ್ನಡ ಪತ್ರಿಕೋದ್ಯಮದಲ್ಲಿ ತನಿಖಾ ವರದಿಗಳು ಕಾಣೆಯಾಗುತ್ತಿವೆ. ಆ ಸ್ಥಳವನ್ನು ಅಭಿವೃದ್ಧಿಶೀಲ ಪತ್ರಿಕೋದ್ಯಮ ತುಂಬಿದೆ. ವಿಶ್ವವಿದ್ಯಾಲಯಗಳು ಸಮಾಜದ ಬಗ್ಗೆ ಕಳಕಳಿಯುಳ್ಳ ಪರ್ತಕರ್ತರನ್ನು ತಯಾರು ಮಾಡುವ ಬದಲು ಕಾರ್ಖಾನೆಗಳಂತೆ ವರ್ತಿಸುತ್ತಿದೆ. ಅನುಭವ, ಆಸಕ್ತಿ ಇಂದು ಪತ್ರಿಕೋದ್ಯಮಕ್ಕೆ ಗೌಣವಾಗಿದೆ ಎಂದರು.

ಸಮಾಜದಲ್ಲಿ ಸಣ್ಣ ಪತ್ರಿಕೆಗಳು ಹಾಗೂ ಸಂಜೆ ಪತ್ರಿಕೆಗಳ ಪಾತ್ರವನ್ನು ವಿಶ್ಲೇಷಿಸಿದ ಬೈಕಂಪಾಡಿ ಅವರು ಹೆಚ್ಚು ಪತ್ರಿಕೆಗಳು ಆರಂಭವಾದಷ್ಟೂ ಸಮಾಜದ ಮೇಲೆ ಬೆಳಕು ಚೆಲ್ಲುವ ಕೆಲಸ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ತನಿಖಾ ವರದಿಗಳು ಆರಂಭವಾದರೆ ಪತ್ರಿಕೋದ್ಯಮ ಹರಿತವಾಗುತ್ತದೆ ಎಂದರು.

ಪತ್ರಿಕೆಗಳು ಈಗ ಹೆಚ್ಚು ವಾಣಿಜ್ಯೀಕರಣಗೊಳ್ಳುತ್ತಿವೆ. ಹೀಗಾಗಿ ಪತ್ರಿಕೆಗಳ ಆಸಕ್ತಿಗಳಲ್ಲೂ ಮಾರ್ಪಾಟಾಗುತ್ತಿವೆ. ಪತ್ರಿಕೆ ಹಾಗೂ ಓದುಗ ಇಬ್ಬರೂ ಯಾವುದೇತಪ್ಪಿನಲ್ಲಿಸಮಭಾಗಿಗಳು, ಪತ್ರಿಕೆಗಳುದಾರಿತಪ್ಪಿದಾಗಓದುಗ ಅದನ್ನು ವಿಮರ್ಶಿಸದಿದ್ದರೆ ಇಬ್ಬರೂ ತಪ್ಪಿತಸ್ಥರೇ ಎಂದು ಅವರು ಅಭಿಪ್ರಾಯಪಟ್ಟರು.

ಸಂವಾದದಲ್ಲಿ ನಾಗೇಶ್ ಕುಮಾರ್, ತಾರಾನಾಥ್, ಶರತ್‌ಕುಮಾರ್, ಬಾಲಕೃಷ್ಣ ಅಡೆಂಜ, ಬಿ.ಎಂ.ಮಾಧವ, ರಾಮದಾಸ್, ನೆಲ್ಸನ್ ರೋಚ್ ಅವರು ಭಾಗವಹಿಸಿದ್ದರು.

- 'ನಿರಂತರ' ಸಂವಾದ

ಏನಿದು ಪರಿಸರ ಹೋರಾಟ?

ದಕ್ಷಿಣ ಕನ್ನಡದ ಪರಿಸರ ಉಳಿಸುವ ಬಗ್ಗೆ ಭಾರೀ ಹೇಳಿಕೆ ನೀಡುತ್ತಿದ್ದ ಪರಿಸರವಾದಿಗಳ ಬಣ್ಣ ಈಗ ಬಯಲಾಗಿದೆ. ಜನ ತಮ್ಮ ಜೊತೆ ಇಲ್ಲ ಎಂಬುದರ ಅರಿವಾಗಿದೆ. ಈ ಮಧ್ಯೆ ಇಲ್ಲಿ ನಡೆದ ಸಿಐಟಿಯು ಜಿಲ್ಲಾ ಸಮ್ಮೇಳನ ಪರಿಸರವಾದಿಗಳು, ಮಠಾಧೀಶರ ಬಣ್ಣವನ್ನು ಬಯಲು ಮಾಡಿತು. ದೇಶದ ಅಭಿವೃದ್ಧಿಗೆ ಕೈಗಾರಿಕೆ ಅಗತ್ಯ ಎಂಬುದನ್ನು ಸಾರಿತು. ಪರಿಸರವಾದಿಗಳ ಪರಿಸರ ನಾಟಕದ ಬಗ್ಗೆ 'ಟೀಕೆ ಬರೆದ ವರದಿ ಇಲ್ಲಿದೆ.

ಫೆ-19 ರಂದು ಜರುಗಿದ ಪರಿಸರ ಹಕ್ಕೊತ್ತಾಯ ಜಾಥಾದ, ಜಿಲ್ಲೆಯಲ್ಲಿ ಪರಿಸರ ವಾದದ ದಿಕ್ಕಿಲ್ಲದ ಹೋರಾಟದ ಪ್ರವರ್ತಕರೆನಿಸಿರುವ ಎರಡು ಸಂಘಟನೆಗಳಿಗೂ ಹೇರಳವಾಗಿ ಫಾರಿನ್ ಫಂಡ್(ವಿದೇಶಿ ನಿಧಿ) ಬರುತ್ತದೆ ಎಂಬ ಗುಮಾನಿ ಇದೆ. ಮುಖ್ಯವಾಗಿ ಡೆನ್ಮಾರ್ಕ್, ಸ್ವಿಜರ್‌ಲ್ಯಾಂಡ್‌ನಿಂದ.

1 ಲಕ್ಷ, ಕನಿಷ್ಟವೆಂದರೂ 75 ಸಾವಿರ ಜನ ಸೇರಿಸಿ ಹಕ್ಕೊತ್ತಾಯ ಜಾಥಾ ನಡೆಸುತ್ತೇವೆ ಎಂದು ಅಬ್ಬರದ ಪ್ರಚಾರ ನಡೆಸಿ ಕೇವಲ 5 ಸಾವಿರ ಮಂದಿಯನ್ನು ಸೇರಿಸಿ ನಗೆ ಪಾಟಲಿಗೀಡಾದ ಪರಿಸರ ಒಕ್ಕೂಟವು ವಿದೇಶಿ ಹಣದಿಂದ ಜನರ ವಿವೇಕವನ್ನು ಬುಟ್ಟಿಗೆ ಹಾಕಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡು ಇದೀಗ ಹೊಸ ದಾರಿ, ವೇಷದ ಹುಡುಕಾಟದಲ್ಲಿದೆ.

ಜಾಥಾದ ವೇದಿಕೆಯನ್ನು ಅವಕಾಶವಾದಿಗಳು ಚೆನ್ನಾಗಿಯೇ ಬಳಸಿಕೊಂಡು ಮತ್ತೆ ಆದಿ ಮಾನವನ ಯುಗಕ್ಕೆ ಸಾಗಲು ಕರೆಕೊಟ್ಟರು, ಸ್ವಾಮಿಗಳು ಕಟ್ಟಪ್ಪಣೆ ಕೊಡಿಸಿದರು. ಮಣಿಪಾಲದ ಪೈಗಳ ಆಸ್ಥಾನ ವಿದೂಷಕರಾಗುತ್ತಿರುವ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿಯ ದಿವ್ಯ ಜ್ಞಾನದ ಪ್ರಕಾರ ಈ ಚಳುವಳಿಗೆ ಧಾರ್ಮಿಕ ಚಳುವಳಿಯ ಮಹತ್ವ ಇದೆಯಂತೆ!

ಈ ಪರಿಸರವಾದಿಗಳು ಕೈಗಾರಿಕೆಗಳಲ್ಲಿ ಪರಿಸರ ಸಹ್ಯ ನೀತಿಯನ್ನು ಅಳವಡಿಸಬೇಕೆಂದು ಒತ್ತಾಯಿಸದಿರುವುದು ಆಶ್ಚರ್ಯಕರ. ಪರಿಸರ ನೈರ್ಮಲ್ಯ ಎಂಬ ಕಾರಣವೊಡ್ಡಿ, ಬೃಹತ್ ಉದ್ದಿಮೆಯು ಬೇಡ ಎನ್ನುವುದು ವಿಶಾದಕರವಾಗಿದೆ.

ಪ್ರಶ್ನೆಗಳು: ಪರಿಸರವಾದಿಗಳು ಪರ್ಯಾಯ ವ್ಯವಸ್ಥೆಯನ್ನು ಯಾಕೆ ಸೂಚಿಸುವುದಿಲ್ಲ? ಧಾರಣಶಕ್ತಿ ಬಗ್ಗೆ ಬೊಬ್ಬಿಡುವವರು ವಾಹನಗಳು ಸೃಷ್ಟಿಸುವ ಮಾಲಿನ್ಯದ ಬಗ್ಗೆ ಯಾಕೆ ಚಕಾರವೆತ್ತುವುದಿಲ್ಲ?
ವಿದ್ಯುತ್, ಕೈಗಾರಿಕಾ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದರೆ ದೇಶವು ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಸ್ಪರ್ಧೆ ನೀಡುವುದು ಹೇಗೆ?

ಪರಿಸರ ಕಾಳಜಿಯುಳ್ಳವರು ಸಂತ್ರಸ್ತರ ಬಗ್ಗೆ ಯಾಕೆ ಕಾಳಜಿ ತೋರುತ್ತಿಲ್ಲ?

ಬೃಹತ್ ಕೈಗಾರಿಕೆಗಳು ಪರಿಸರ ಮಾಲಿನ್ಯ ಉಂಟು ಮಾಡುವುದಾಗಿದ್ದಲ್ಲಿ ಪರಿಸರ ನೈರ್ಮಲ್ಯದ ಬಗ್ಗೆ ನಿಗಾವಹಿಸಲು ಒತ್ತಡ ಹೇರಬೇಕೆ ಅಥವಾ ಅದನ್ನು ಒದ್ದೋಡಿಸಬೇಕೆ?

ಉಷ್ಣ ವಿದ್ಯುತ್ ಸ್ಥಾವರವು ಸೃಷ್ಟಿಸುವ ಬೂದಿಯಿಂದ ಇಟ್ಟಿಗೆ ನಿರ್ಮಿಸಬಹುದು. ಬೂದಿ ಮುಚ್ಚಿ ಸಮುದ್ರದಂಡೆ ವಿಸ್ತರಿಸಬಹುದು. ಇತ್ತೀಚಿನ ಸಂಶೋಧನೆಯಂತೆ ಬೂದಿ ಮುಚ್ಚಿ ಸಮತಟ್ಟಗೊಳಿಸಿದ ನೆಲವನ್ನು ಫಲವತ್ತುಗೊಳಿಸಬಹುದಾಗಿದೆ. ವಾಸ್ತವಾಂಶ ಹೀಗಿರುವಾಗ ಬೂದಿ ಸಂಪೂರ್ಣ ನಿಷ್ಪ್ರಯೋಜಕವೆಂದು ಅಪಪ್ರಚಾರ ಮಾಡುವುದು ವಿಜ್ಞಾನದ ಅವಹೇಳನವಲ್ಲವೇ?

ಪ್ರಾಮಾಣಿಕ ಪರಿಸರ ಕಾಳಜಿಯುಳ್ಳವರು ತುಂಬಾ ಗೊಂದಲದಲ್ಲಿದ್ದಾರೆ. ತಪ್ಪು ದಾರಿಯಲ್ಲಿರುವವರ ಜತೆ ಕೈ ಜೋಡಿಸಿಕೊಂಡ ಬಗ್ಗೆ ವಿಶಾದಿಸುತ್ತಾರೆ.

ನಿಜವಾದ ಪರಿಸರ ಕಾಳಜಿಯವರು ಬೃಹತ್ ಕೈಗಾರಿಕೆಗಳು ಪರಿಸರ ಸಹ್ಯ ನೀತಿ ಅಳವಡಿಸಬೇಕೆಂಬ ಒತ್ತಡ ಹೇರಲು ಪ್ರತ್ಯೇಕವಾಗಿ ಯಾಕೆ ಸಂಘಟಿತವಾಗಬಾರದು?

ನಿಜಕ್ಕೂ ನಮ್ಮ ಸಾಂಸ್ಕೃತಿಕ, ಸಾಮಾಜಿಕ ಪರಿಸರಕ್ಕೆ ಫಾರಿನ್ ಫಂಡ್ ಏಜೆನ್ಸಿಗಳೇ ಪ್ರಥಮ ಮಾರಕ ವಿಷ ಜಂತುಗಳಲ್ಲವೇ? ಯಾವ ವಿಜ್ಞಾನ ಇದನ್ನು ರಿಸೈಕ್ಲಿಂಗ್ ಮಾಡಬಲ್ಲದು.

ಕೃಪೆ: ನಿರಂತರ ಗೋಡೆ ಪತ್ರಿಕೆ, ಮಂಗಳೂರು

ರಾಜ್ಯಾದ್ಯಂತ ಸಾಮೂಹಿಕ ಸಂಘಟನೆಗಳ ಪ್ರತಿಭಟನೆ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳವೇದಿಕೆಯ ಕರೆಯಮೇರೆಗೆ ಫೆಬ್ರವರಿ ೨೫ ರಂದು ರಾಜ್ಯಾದ್ಯಂತ ಕಾರ್ಮಿಕರ, ರೈತರ, ಕೃಷಿ ಕೂಲಿಕಾರರ, ಮಹಿಳೆಯರ, ವಿದ್ಯಾರ್ಥಿ-ಯುವಜನ ಸಂಘಟನೆಗಳು ಸೇರಿಕೊಂಡು ಸಂಯುಕ್ತರಂಗ ಸರಕಾರದ ನರಸಿಂಹರಾವ್‌ರ ಆರ್ಥಿಕ ನೀತಿಗಳನ್ನೇ ಮುಂದುವರೆಸುತ್ತಿರುವುದರ ವಿರುದ್ಧ ಧರಣಿ, ಪ್ರತಿಭಟನೆ, ಪಿಕೆಟಿಂಗ್ ನಡೆಸಿದರು. ಕೆಲವು ವರದಿಗಳು ಇಲ್ಲಿವೆ.

ಹುಬ್ಬಳ್ಳಿ: ಸಂಯುಕ್ತ ರಂಗ ಸರಕಾರವು ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಜಾರಿಗೆ ತರುವ ಬದಲು ಹಿಂದಿನ ಕಾಂಗ್ರೆಸ್ ಸರಕಾರದ ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ನೀತಿಗಳನ್ನೇ ಮುಂದುವರೆಸುತ್ತಿರುವುದನ್ನು ವಿರೋಧಿಸಿ ಇಂದು ಹುಬ್ಬಳ್ಳಿಯಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಜಿಲ್ಲಾ ಘಟಕದ ಆಶ್ರಯದಲ್ಲಿ ಪ್ರತಿಭಟನಾ ಮೆರವಣಿಗೆ, ಕೇಂದ್ರ ಅಂಚೆ ಕಛೇರಿ ಎದುರು ಪ್ರದರ್ಶನ ಹಾಗೂ ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಣಿ ನಡೆಸಲಾಯಿತು. ಸದಾನಂದ, ಎ.ಬಿ.ಕಟ್ಟಿ, ಡಿ.ಜಿ.ಗೋಂದಕರ್, ವಿ.ಎಂ. ಜೋಶಿ, ಕೃಷ್ಣಪ್ರಭು ಮೊದಲಾದವರು ನೇತೃತ್ವ ವಹಿಸಿದ್ದರು.

ಕಾರ್ಯಕ್ರಮದ ಕೊನೆಯಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ನಿತ್ಯಾನಂದ ಸ್ವಾಮಿ ಅವರು ಮುಂಬರುವ ಮುಂಗಡ ಪತ್ರದಲ್ಲಿ ಬಡವರ ಮೇಲೆ ಹೊರೆ ಹೇರಿ, ಶ್ರೀಮಂತರಿಗೆ ರಿಯಾಯ್ತಿಗಳನ್ನು ನೀಡುವ ಕಾಂಗ್ರೆಸ್ ಸರಕಾರದ ಧೋರಣೆಯನ್ನು ಸಂಯುಕ್ತ ರಂಗ ಸರಕಾರ ಅನುಸರಿಸಬಾರದೆಂದು ಆಗ್ರಹಿಸಿದರು. ಎಂ.ರಾಮರಾವ್ ಮಾತನಾಡುತ್ತಾ ಅಸಂಘಟಿತ ವಲಯದ ಕಾರ್ಮಿಕರಿಗೆ ರೂ.2500-00 ಕನಿಷ್ಠ ವೇತನ ನಿಗದಿಪಡಿಸಬೇಕೆಂದು ಒತ್ತಾಯಿಸಿದರು. ಎಂ.ಸದಾನಂದ ಅವರು ಮಾತನಾಡುತ್ತಾ, ಎಡಪಕ್ಷಗಳು ಮತ್ತು ಕಾರ್ಮಿಕ ಸಂಘಟನೆಗಳ ಬೆಂಬಲ ಪಡೆದಿರುವ ಸಂಯುಕ್ತರಂಗ ಸರಕಾರ ದುಡಿಯುವ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವುದು ಖಂಡನೀಯ ಎಂದರು. ಆರಂಭದಲ್ಲಿ ಡಿ.ಜಿ.ಗೋಂದಕರ ಸ್ವಾಗತಿಸಿದರು. ಕೊನೆಯಲ್ಲಿ ಎಂ.ಬಿ.ಕಟ್ಟಿ ವಂದಿಸಿದರು.

ಮೈಸೂರು: ಜನವಿರೋಧಿ, ಕಾರ್ಮಿಕ ವಿರೋಧಿ, ಭ್ರಷ್ಟಾಚಾರ, ಬೆಲೆ ಏರಿಕೆಗಳ ಕೇಂದ್ರ ಸರಕಾರದ ನೀತಿಗಳ ವಿರುದ್ಧಹಾಗೂ ಹದಿನೈದು ಬೇಡಿಕೆಗಳನ್ನು ಒತ್ತಾಯಿಸಿ ರಾಷ್ಟ್ರಾದ್ಯಂತ ನಡೆಯುತ್ತಿರುವ ಪ್ರತಿಭಟನೆಯ ಅಂಗವಾಗಿ ಸಿಐಟಿಯು ಹಾಗೂ ಎಐಟಿಯುಸಿಗೆ ಸೇರಿದ ನೂರಾರು ಕಾರ್ಮಿಕರು ಕೇಂದ್ರ ತಂತಿ ಕಛೇರಿಯನ್ನು ಪಿಕೆಟಿಂಗ್ ಮಾಡಿ ಹೊರಟಾಗ ಪೋಲೀಸರು ಅರಮನೆ ಮುಂಭಾಗದಲ್ಲಿ ಕಾರ್ಮಿಕರನ್ನು ತಡೆದು ಬಂಧಿಸಿದರು. ಅಂಗನವಾಡಿ ಕಾರ್ಯಕರ್ತೆಯರು, ಅಗರ್‌ಬತ್ತಿ ಕಾರ್ಮಿಕರಾದ ಮಹಿಳೆಯರು ತಮ್ಮ ಮುಖಂಡರನ್ನು ಬಂಧಿಸುತ್ತಿದ್ದಂತೆ, ಪೋಲೀಸ್ ವಾಹನದ ಮುಂದೆ ಮಲಗಿ ವಾಹನ ಚಲಿಸದಂತೆ ಮಾಡಿದರು. ಸುಮಾರು ಅರ್ಧ ಗಂಟೆಗಳ ಕಾಲ ಚಾಮರಾಜವೃತ್ತದಲ್ಲಿ ಬಿಗುವಾದ ವಾತಾವರಣ ಏರ್ಪಟಿತ್ತು.

ಕೇಂದ್ರ ಸರಕಾರದ ರಾಜ್ಯ ಸರಕಾರಗಳ ನೀತಿಗೆ ಧಿಕ್ಕಾರ, ಬೆಲೆ ಏರಿಕೆಗೆ ಧಿಕ್ಕಾರ, ಸರಕಾರದ ಕಾರ್ಮಿಕ ವಿರೋಧಿ ನೀತಿಗೆ ಧಿಕ್ಕಾರ, ಪೋಲೀಸು ದೌರ್ಜನ್ಯಕ್ಕೆ ಧಿಕ್ಕಾರ, ಏನೇ ಬರಲಿ ಒಗ್ಗಟ್ಟಿರಲಿ, ಇತ್ಯಾದಿ ಘೋಷಣೆಗಳನ್ನು ಕೂಗುತ್ತಿದ್ದ ಕಾರ್ಮಿಕರ ಮೆರವಣಿಗೆಯ ನೇತೃತ್ವವನ್ನು ಎಐಟಿಯುಸಿ ಮುಖಂಡರಾದ ಕೆ.ವೆಂಕಟರಾಮಯ್ಯ, ಎನ್.ಆರ್.ಸೋಮಸುಂದರಂ, ಡಿ.ಜಗನ್ನಾಥ್ ,ಸಿಐಟಿಯುಮುಖಂಡರಾದ ಮೋಹನ್ ಕುಮಾರ, ಜಯರಾಂ, ಪುಟ್ಟಣ್ಣ, ಹೆಚ್. ಎಸ್. ಜಗದೀಶ್, ಎಸ್‌ಎಫ್‌ಐನ ಶಂಕರೇಗೌಡ, ಡಿವೈಎಫ್‌ಐನ ಎ.ಎಂ.ಶಿವಾಜಿ ನಾಯಕ ಮುಂತಾದವರು ವಹಿಸಿದ್ದರು.

ಹರಿಹರ: ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ ಇಂದು ದೇಶಾದ್ಯಂತ ಹೋರಾಟಕ್ಕೆ ಕರೆ ನೀಡಿದ್ದರ ಮೇರೆಗೆ ಹರಿಹರದಲ್ಲಿ ಸಿಐಟಿಯು, ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಸಂಘಟನೆಗಳು ಈ ಪ್ರತಿಭಟನೆಯನ್ನು ಸಂಘಟಿಸಿದ್ದವು. ಅಗತ್ಯ ವಸ್ತುಗಳ ಬೆಲೆ ಏರಿಕೆ ತಡೆಗಟ್ಟಬೇಕು, ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ನೀಡಬೇಕು, ಮಹಿಳೆಯರಿಗೆ ಶಾಸನ ಸಭೆಗಳಲ್ಲಿ ಶೇ.33 ಮೀಸಲಾತಿಯನ್ನು ಜಾರಿಗೆ ತರಬೇಕು, ಶಿಕ್ಷಣ ಖಾಸಗೀಕರಣ ತಡೆಗಟ್ಟಿ, ನಿರುದ್ಯೋಗ ನಿವಾರಣೆಗೆ ಕ್ರಮ ಕೈಗೊಳ್ಳಬೇಕು, ಪ್ರಜಾಪ್ರಭುತ್ವ ಚಳುವಳಿಗಳನ್ನು ಹತ್ತಿಕ್ಕುವ ನೀತಿಯನ್ನು ಕೈ ಬಿಡಬೇಕು ಮುಂತಾದ ಘೋಷಣೆಗಳನ್ನು ಕೂಗುತ್ತಾ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು.

ನೂರಾರು ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿ-ಯುವಜನರು ಭಾಗವಹಿಸಿದ್ದ ಈ ಹೋರಾಟದ ನೇತೃತ್ವವನ್ನು ಹರಿಹರ ಪಾಲಿಫೈಬರ್‌ನ ಕಾರ್ಮಿಕ ಮುಖಂಡರಾದ ಬಿ.ಎಸ್.ಚಳಗೇರಿ, ಕಿರ್ಲೋಸ್ಕರ್ ಸಂಘದ ಮುಖಂಡರಾದ ಪಿ.ಜಿ.ಗೌಡರ್, ಆರ್.ಟಿ.ಅಂಡಿ, ವಿಮಾ ನೌಕರರ ಮುಖಂಡ ಕೆ.ಎಲ್.ಭಟ್, ಎಸ್‌ಎಫ್‌ಐನ ಶ್ರೀನಿವಾಸ, ಮಂಜುನಾಥ್, ಡಿವೈಎಫ್‌ಐನ ಶಿವಶಂಕರ್, ಲೋಕೇಶ್, ಮೂರ್ತಿ,ರಾಮ್ಕೋ ಕೆಲಸಗಾರರ ಸಂಘದ ಬಸವನಗೌಡ, ವಲಿಸಾಬ್, ಸಂಗಂಸಾಲ್ವೆಂಟನ ಜಯತೀರ್ಥ, ಹರಿಹರ ಬೀಡಿ ಕೆಲಸಗಾರರ ಸಂಘದ ಮುಖಂಡರಾದ ರಜೀಯಾಬೀ, ರೋಖಿಡೆ ಮುಂತಾದವರು ವಹಿಸಿದ್ದರು.

ಕಬ್ಬು ಬೆಳೆಗೆ 800 ರೂ.ಗೆ ಒತ್ತಾಯ

ಉಡುಪಿ: ಈಗಿನ ಸ್ಥಿತಿಯಲ್ಲಿ ಕಬ್ಬು ಬೆಳೆಗೆ ಟನ್ ಒಂದಕ್ಕೆ ರೂ. 800ನ್ನಾದರೂ ಬೆಲೆ ನಿಗದಿಪಡಿಸಿ, ಕಾರ್ಖಾನೆಗೆ ಕಬ್ಬು ಸರಬರಾಜು ಆದ ಕೂಡಲೇ ಒಂದೇ ಕಂತಿನಲ್ಲಿ ರೈತರಿಗೆಹಣಪಾವತಿಮಾಡುವಂತೆಒತ್ತಾಯಿಸಿ ಫೆಬ್ರವರಿ27ರಂದು ದ.ಕನ್ನಡ ಜಿಲ್ಲೆಯ ಬ್ರಹ್ಮಾವರ ಪ್ರವಾಸಿ ಮಂದಿರದ ವಠಾರದಲ್ಲಿ ಕಬ್ಬುಬೆಳೆಗಾರರ ಸಮಾವೇಶ ನಡೆಯಿತು.

ಕಬ್ಬುಬೆಳೆಗಾರರ ಸಮಸ್ಯೆಗಳು ಪರಿಹಾರ ಕಾಣಬೇಕಾದರೆ ಬಲಿಷ್ಠವಾದ ಒಗ್ಗಟ್ಟನ್ನು ಬೆಳೆಸಿ, ಚಳುವಳಿ ನಡೆಸಬೇಕು. ಪಕ್ಷಬೇಧವಿಲ್ಲದೆ ಕಬ್ಬುಬೆಳೆಗಾರರು ಸಂಘಟಿತರಾಗಬೇಕು. ವಾರಾಹಿ ಯೋಜನೆಯನ್ನು ತಕ್ಷಣ ಪೂರ್ಣಗೊಳಿಸಿ, ಬ್ರಹ್ಮಾವರ ಹಾಗೂ ಕುಂದಾಪುರದ ರೈತರ ಸಂಕಷ್ಟಗಳಿಗೆ ಪರಿಹಾರ ಒದಗಿಸಬೇಕೆಂದು ದ.ಕನ್ನಡ ಜಿಲ್ಲಾ ರೈತ ಸಂಘದ ಮುಖಂಡರಾದ ಡೇವಿಡ್.ವಿ. ಕರ್ಕಡರವರು ಕರೆನೀಡಿದರು. ಸಮಾವೇಶದಲ್ಲಿ ಬೈಕಾಡಿ ಶೀನಪ್ಪ, ಭಾಗವಹಿಸಿದ್ದರು. ಅಧ್ಯಕ್ಷತೆಯನ್ನು ಜಮ್ಶನ್ ವಾಜ್‌ವಹಿಸಿದ್ದರು. ಹನ್ನೊಂದು ಮಂದಿಯ ಕಬ್ಬು ಬೆಳೆಗಾರರ ಸಂಚಾಲಕ ಸಮಿತಿಯಲ್ಲಿ ಗೋಪಿನ್ ಡೇವಿಸ್ ಫರ್ನಾಂಡೀಸ್ ಸಂಚಾಲಕರಾಗಿ ಆಯ್ಕೆಗೊಂಡರು.

ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಮನ್ವಯ ಸಮಿತಿ ಸಭೆ

ಸಿಐಟಿಯುಗೆ ಸೇರಿರುವ ಸಕ್ಕರೆ ಕಾರ್ಮಿಕ ಸಂಘಟನೆಗಳ ರಾಜ್ಯ ಮಟ್ಟದ ಸಮನ್ವಯ ಸಮಿತಿ ಸಭೆಯು ಫೆಬ್ರವರಿ 23 ರಂದು ಬಳ್ಳಾರಿಯ ಸಿಐಟಿಯು ಕಛೇರಿಯಲ್ಲಿ ನಡೆಯಿತು. ಮೈಸೂರು, ಮಂಡ್ಯ, ಬಳ್ಳಾರಿ ಜಿಲ್ಲೆಗಳಲ್ಲಿರುವ ಸಿಐಟಿಯುಗೆ ಸೇರ್ಪಡೆಯಾಗಿರುವ ಸಕ್ಕರೆ ಕಾರ್ಮಿಕರ ಸಂಘಟನೆಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ರಾಜ್ಯದಲ್ಲಿ ಸಕ್ಕರೆ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚರ್ಚೆ ನಡೆದು, ಸಕ್ಕರೆ ಕಾರ್ಮಿಕರ 4ನೇ ವೇತನ ಮಂಡಳಿ ರಚನೆ, ರಾಜ್ಯದಲ್ಲಿ ಡಿಸೆಂಬರ್ 97 ಕ್ಕೆ ಅಂತ್ಯಗೊಳ್ಳುವ ಕೈಗಾರಿಕಾ ಒಪ್ಪಂದ ಬದಲಿಸಲು ಬೇಡಿಕೆಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವುದು ಇತ್ಯಾದಿ ವಿಚಾರಗಳಲ್ಲಿ ಮಧ್ಯ ಪ್ರವೇಶ ಮಾಡಿ, ಸಕ್ಕರೆ ಕಾರ್ಮಿಕರ ಹಿತ ರಕ್ಷಿಸುವಂತಾಗಲು, ಸಿಐಟಿಯು ನೇತೃತ್ವ ರಾಜ್ಯ ಮಟ್ಟದ ಸಂಘಟನೆಯನ್ನು ಬಲಪಡಿಸಲು ನಿರ್ಧರಿಸಲಾಗಿದೆ. ಮಾರ್ಚ್ 14 ರಂದು ಬೆಂಗಳೂರಿನಲ್ಲಿ ನಡೆಯುವ ಸಿಐಟಿಯು ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಸಮನ್ವಯ ಸಮಿತಿ ಸಭೆಯನ್ನು ವಿಸ್ತತವಾಗಿ ಸೇರಿಸುವುದು, ಏಪ್ರಿಲ್ ತಿಂಗಳ ಅಂತ್ಯದಲ್ಲಿ ರಾಜ್ಯ ಮಟ್ಟದ ಸಕ್ಕರೆ ಕಾರ್ಮಿಕರ ಸಮಾವೇಶ ನಡೆಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳಿರುವ ಜಿಲ್ಲೆಗಳಲ್ಲಿ ಸಿಐಟಿಯು ನಾಯಕರುಗಳ ಸಹಕಾರದನ್ನು ಸಂಘಟನೆ ವಿಸ್ತರಿಸಲು ಕೇಳಿಕೊಳ್ಳಲಾಗುವುದು ಎಂದು ಸಂಚಾಲಕರಾದ ಮೋಹನ್ ಕುಮಾರ ತಿಳಿಸಿದ್ದಾರೆ.

ಪೆಟ್ರೋಲ್ ಬಂಕ್‌ನಲ್ಲಿ ಕಳಪೆ ಪೆಟ್ರೋಲ್ ಪೂರೈಕೆ

ಹಗರಿಬೊಮ್ಮನ ಹಳ್ಳಿ: ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನ ಹಳ್ಳಿ ಆಟೋ ಚಾಲಕರ ಮತ್ತು ಮಾಲೀಕರ ಸಂಘ(ಸಿಐಟಿಯು)ವು ಹಗರಿಬೊಮ್ಮನ ಹಳ್ಳಿಯ ಚಂದ್ರೇಗೌಡ ಸರ್ವೀಸ್ ಪೆಟ್ರೋಲ್ ಬಂಕ್‌ನಲ್ಲಿ ಸರಿಯಾದ ಸಮಯಕ್ಕೆ ಪೆಟ್ರೋಲ್ ವಿತರಣೆ ಮಾಡದೆ ಇರುವದರಿಂದ ಜೊತೆಗೆ, ಕಳಪೆ ಪೆಟ್ರೋಲ್‌ನ್ನು ಮಾರಾಟ ಮಾಡುತ್ತಾರೆ ಎಂದು ಆರೋಪಿಸಿ ತುರ್ತುಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ರಾಮನಗರ, ಹಳೇ ಹಗರಿಬೊಮ್ಮನಹಳ್ಳಿ ಹಾಗೂ ಹಗರಿಬೊಮ್ಮನಹಳ್ಳಿ ಕಡೆಗೆ ಬರುವ ರಸ್ತೆಗಳಿಗೆ ಶೀಘ್ರ ಡಾಂಬರೀಕರಣ ಮಾಡಬೇಕು, ಹಗರಿ ಬೊಮ್ಮನಹಳ್ಳಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಮಾಡಬೇಕು, ಅಗ್ನಿಶಾಮಕ ದಳದ ಸ್ಥಾಪನೆಯಾಗಬೇಕು ಹಾಗೂ ಸೂಕ್ತವಾದ ಸ್ಥಳದಲ್ಲಿ ಆಟೋನಿಲ್ದಾಣ ನಿರ್ಮಿಸಬೇಕೆಂದು ಒತ್ತಾಯಿಸುವ ಮನವಿ ಪತ್ರವನ್ನು ತಹಶೀಲ್ದಾರರಿಗೆ ನೀಡಲಾಯಿತು. ಈ ಸಂದರ್ಭದಲ್ಲಿ ಡಿವೈಎಫ್‌ಐನ ಬಿ.ಗಣೇಶ್ ಹಾಗೂ ಪ್ರಾಂತ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಎಸ್.ಜಗನ್ನಾಥ್ ಭಾಗವಹಿಸಿದ್ದರು.



ಮೈಕೋ ನೌಕರರ ಅಖಿಲ ಭಾರತ ಸಮ್ಮೇಳನ

ಅಖಿಲ ಭಾರತ ಮೈಕೋ ಎಂಪ್ಲಾಯೀಸ್ ಫೆಡರೇಶನ್‌ನ ಸಮ್ಮೇಳನವು ಫೆಬ್ರವರಿ 7 ಮತ್ತು 8ರಂದು ಬೆಂಗಳೂರಿನ ಎಂಇಎ ಕಛೇರಿಯಲ್ಲಿ ನಡೆಯಿತು. ಮೈಕೋ ಕಾರ್ಮಿಕ ಸಂಘಗಳ ಬೆಂಗಳೂರಿನ ವಿಭಾಗ, ನಾಗನಾಥಪುರ ವಿಭಾಗ ಹಾಗೂ ದೇಶದ ನಾನಾ ವಿಭಾಗಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಈ ಸಮ್ಮೇಳನದಲ್ಲಿ ಎರಡು ದಿನಗಳ ಕಾಲ ಚರ್ಚೆ ನಡೆಸಿ ಅಂತಿಮಗೊಳಿಸಿದ ಬೇಡಿಕೆ ಪಟ್ಟಿಯನ್ನು ಮೈಕೋ ಆಡಳಿತ ವರ್ಗಕ್ಕೆ ಸಲ್ಲಿಸಲಾಗುವುದು. ಬೇಡಿಕೆಯನ್ನು ಪಡೆಯುವ ಸಲುವಾಗಿ ಕಾರ್ಮಿಕರ ಸಹಕಾರಕ್ಕಾಗಿ ಕರೆಯೊಂದನ್ನು ಕೊಡಲಾಗುವುದು.

ಫೆಡರೇಶನ್‌ಗೆ ಎಂಟು ನೂತನ ಪದಾಧಿಕಾರಿಗಳನ್ನು 25 ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ 6 ಜನ ಆಹ್ವಾನಿತರನ್ನು ಸರ್ವಾನುಮತದಿಂದಆಯ್ಕೆಮಾಡಲಾಯಿತು. ಅಧ್ಯಕ್ಷರಾಗಿ-ಎಸ್. ಸೂರ್ಯನಾರಾಯಣ ರಾವ್, ಉಪಾಧ್ಯಕ್ಷರಾಗಿ- ಬಿ.ವೀರಭದ್ರಪ್ಪ, ನಾಗೇಶ್ವರ ಬಿ., ಪ್ರಧಾನ ಕಾರ್ಯದರ್ಶಿಗಳಾಗಿ- ಟಿ.ಶಿವಶಂಕರ್, ಜಂಟಿ ಕಾರ್ಯದರ್ಶಿಗಳಾಗಿ- ಎನ್.ಆರ್.ಸಿ.ನಾಯರ್, ಸಹ ಕಾರ್ಯದರ್ಶಿಗಳು-ರಂಗನಾಥ್ ಎಂ.ಸಿ., ವಿಜಯ ಭಾಸ್ಕರ್ ಡಿ.ಎ., ಖಜಾಂಚಿಯಾಗಿ -ಶಂಕರೇಗೌಡ ಆಯ್ಕೆಯಾದರು.

ಆಟೋ ಚಾಲಕರ ರಸ್ತೆ ತಡೆ

ರಾಯಚೂರು ನಗರದಲ್ಲಿ ಹದಗೆಟ್ಟಿರುವ ರಸ್ತೆ ದುರಸ್ತಿ ಹಾಗೂ ಬೀದಿ ದೀಪಗಳ ಸುವ್ಯವಸ್ಥೆಗೆ ಆಗ್ರಹಿಸಿ ಸಿಐಟಿಯು ನೇತೃತ್ವದ ಆಟೋ ಚಾಲಕರು ಫೆ 20 ರಂದು ನಗರದ ಚಾಲಕರ್ಟ ಸರ್ಕಲ್‌ನಲ್ಲಿ 1 ತಾಸು ರಾಸ್ತಾ ರೋಖೋ ಚಳುವಳಿ ಮಾಡಿದರು.

ಜನವರಿ 18 ರಂದು ಹೋರಾಟ ಮಾಡಿದಾಗ ನಗರಸಭಾ ಅಧ್ಯಕ್ಷರಾದ ಎಂ.ಈರಣ್ಣ ಚಳುವಳಿ ನಡೆಸುತ್ತಿದ್ದ ಸ್ಥಳದಲ್ಲಿ ಬಂದು ಜನವರಿ ತಿಂಗಳಲ್ಲಿ ರಸ್ತೆ ರಿಪೇರಿ, ಬೀದಿ ದೀಪದ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರೂ ಇಲ್ಲಿಯ ತನಕ ಬದಲಾವಣೆಯಾಗದಿರುವುದನ್ನು ಖಂಡಿಸಿ ಆಟೋ ಚಾಲಕರು ಮತ್ತೆ ಹೋರಾಟಕ್ಕೆ ಇಳಿದಾಗ ನಗರಸಭಾ ಆಯುಕ್ತರು ಮತ್ತು ತಹಶೀಲ್ದಾರರು ಇನ್ನು ಒಂದು ವಾರದೊಳಗೆ ನಗರದ ಎಲ್ಲಾ ರಸ್ತೆಗಳ ರಿಪೇರಿ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಈ ಹೋರಾಟದಲ್ಲಿ ಸುಮಾರು 150 ಆಟೋ ಚಾಲಕರು ಭಾಗವಹಿಸಿದ್ದರು.

ಕರ್ನಾಟಕದಲ್ಲಿ ಕಳೆದ ವಾರ

ಫೆಬ್ರವರಿ 28

- ವಕೀಲರು ಮತ್ತು ನ್ಯಾಯಾಂಗ ಸಿಬ್ಬಂದಿನಡುವಿನ ಕಲಹದಿಂದ ಉಂಟಾದ ಸಮಸ್ಯೆ ಪರಿಹಾರವಾಗದೆ ಹೈಕೋರ್ಟ್‌ಮತ್ತಿತರನ್ಯಾಯಾಲಯಗಳಲ್ಲಿ ಕೆಲಸ ಸ್ಥಗಿತತಮುಂದುವರಿಕೆ.

ಮಾರ್ಚ್ 1

- ಕೆಎಸ್‌ಆರ್‌ಟಿಸಿ ದರಗಳಲ್ಲಿ ಭಾರೀ ಏರಿಕೆ, ಪ್ರತಿಭಟನೆ.
- ವರ್ಗಾವಣೆ ಆದ ಸ್ಥಳಗಳಿಗೆ ಹೋಗದ ನೀರಾವರಿ ಇಲಾಖೆಯ ಇಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರುಗಳು ಸೇರಿದಂತೆ 21 ಎಂಜಿನಿಯರುಗಳ ಅಮಾನತು.

ಮಾರ್ಚ್ 2

- ಕೃಷಿ ಮತ್ತು ರೈತರ ಅಭಿವೃದ್ಧಿಗಾಗಿ ತಾವು ಆರಂಭಿಸಿದ ಕಾರ್ಯಕ್ರಮಗಳ ಪ್ರಯೋಜನವನ್ನು ಬಳಸಿಕೊಳ್ಳುತ್ತಿಲ್ಲ ಎಂದು ರಾಜ್ಯ ಕೃಷಿ ಸಚಿವರಿಗೆ ಪ್ರಧಾನಿಗಳಿಂದ ತರಾಟೆ.

ಮಾರ್ಚ್ 3

- ಹೊಸಕೋಟೆಯಲ್ಲಿ ನಗರಾಭಿವೃದ್ಧಿ ಸಚಿವರ ಸಂಬಂಧಿಯ ಕೊಲೆಗೆ ಪ್ರತೀಕಾರವಾಗಿ ಈಸೂರಿನಲ್ಲಿ ವೃದ್ಧರ ಹತ್ಯೆ, ಯುವತಿಯರ ಮೇಲೆ ಸಾಮೂಹಿಕ ಅತ್ಯಾಚಾರ.

ಮಾರ್ಚ್ 4

- ಹೊಸಕೋಟೆ ಹತ್ಯೆ ಮತ್ತು ಈಸೂರಿನಲ್ಲಿ ನಡೆದ ಪ್ರತೀಕಾರದ ಕೊಲೆ ಮತ್ತು ಅತ್ಯಾಚಾರದ ಸಿಓಡಿ ತನಿಖೆಗೆ ಆದೇಶ.
- ಬಸ್ ಪ್ರಯಾಣ ದರ ಏರಿಕೆ ಮರು ವಿಮರ್ಶೆಯಿಲ್ಲ ಎಂದು ಸಾರಿಗೆ ಸಚಿವರು.

ಮಾರ್ಚ್ 5

- ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯ ಇಂಜಿನಿಯರಿಂಗ್ ಕಾಲೇಜ್ ನಲ್ಲಿ ರ‍್ಯಾಗಿಂಗ್‌ಗಾಗಿ ಆರು ವಿದ್ಯಾರ್ಥಿಗಳ ಬಂಧನ. ಅಬ್ಕಾರಿ ಡೆಪ್ಯೂಟಿ ಸೂಪರಿಂಟೆಂಡೆಂಟ್‌ರ ಮಗ ಆರೋಪಿಗಳಲ್ಲೊಬ್ಬ.

ಮಾರ್ಚ್ 6

- ಟಿ.ಶ್ರೀನಿವಾಸುಲು ರಾಜ್ಯದ ನೂತನ ಪೋಲೀಸ್ ಮಹಾ ನಿರ್ದೇಶಕರಾಗಿ ಅಧಿಕಾರ ಸ್ವೀಕಾರ. ಹಿಂದಿನ ಡಿ.ಜಿ.ಪಿ. ದೊರೈಯವರಿಗೆ ರೈಲ್ವೆ ಸುರಕ್ಷತಾ ಪಡೆಯ ಮಹಾ ನಿರ್ದೇಶಕರಾಗಿ ದಿಲ್ಲಿಗೆ ವರ್ಗಾವಣೆ.

ಕರ್ನಾಟಕದ ಯೋಜನೆಗಳಿಗೆ ಕಡಿವಾಣ ಹಾಕಿದ 'ಉದಾರ' ಬಜೆಟ್!

ಕೇಂದ್ರ ಬಜೆಟ್‌ನ 'ಉದಾರತೆ' ಕರ್ನಾಟಕದ ಯೋಜನೆಗಳಿಗೆ ಹೇಗೆ ತಟ್ಟಿದೆ ನೋಡಿ.

- ಕೈಗಾ ಅಣು ಸ್ಥಾವರಕ್ಕೆ ನೀಡಿದ ಹಣ 308 ಕೋಟಿ ರೂ. ಕಳೆದ ವರ್ಷ ಇದು 308.29 ಕೋಟಿ ರೂ. ಹಣದುಬ್ಬರ ಗಮನಿಸಿದರೆ ದೊಡ್ಡ ಖೋತಾ.
- ಐಟಿಐಗೆ ಕಳೆದ ಬಾರಿ ನೀಡಿದ್ದು 80 ಕೋಟಿ ರೂ. ಈ ಬಾರಿ 72 ಕೋಟಿ ರೂ. ಮಾತ್ರ. ಕಳೆದ ಬಾರಿಗೆ ಸಂಶೋಧನೆ ಮತ್ತು ಅಭಿವೃದ್ಧಿಗೆ 18.98 ಕೋಟಿ ರೂ. ನೀಡಲಾಗಿತ್ತು. ಈ ಬಾರಿ ಏನೂ ಇಲ್ಲ.
- ಬಿಇಎಂಎಲ್‌ಗೆ ಯೋಜನೇತರ ಬಾಬ್ತಿನಲ್ಲಿ ಕಳೆದ ವರ್ಷ 14 ಕೋಟಿ ರೂ ನೀಡಿದ್ದ ಸಾಲದ ಮೊತ್ತ ಈ ಬಾರಿ10 ಕೋಟಿಗೆ ಇಳಿದಿದೆ. ಸ್ವಯಂ ನಿವೃತ್ತಿ ಯೋಜನೆಯ ಜಾರಿಗೆ ಕಳೆದ ಬಾರಿ 5 ಕೋಟಿ ರೂ. ನೀಡಲಾಗಿತ್ತು. ಈ ಬಾರಿ ಸೊನ್ನೆ. ನವೀಕರಣ ಗಳಿಗೂ ನಿರ್ವಹಣೆ ಮತ್ತು ಹಳೆಯ ಗಣಿಗಳ ಆಧುನೀಕರಣಕ್ಕೆ ಕೇವಲ 6 ಕೋಟಿ ರೂ.
- ಹೆಚ್‌ಎಂಟಿಗೆ ನೀಡಿಕೆ 9 ಕೋಟಿ ರೂ.ನಿಂದ 10 ಕೋಟಿ ರೂ.ಹಣದುಬ್ಬರ ಗಮನಿಸಿದರೆ ಹೆಚ್ಚಳವೇ ಇಲ್ಲ.

ನಮ್ಮ ವಿಶಾಲ ದೇಶಕ್ಕಿಂತಲೂ ವಿಶಾಲವಾದ ನೆರೆದೇಶ ಚೀನಾ ಎಲ್ಲಾ ರಂಗಗಳಲ್ಲೂ ಬಲಿಷ್ಠ ಸಾಮ್ರಾಜ್ಯಶಾಹಿಗಳಿಗೆ ಸೆಡ್ಡು ಹೊಡೆದು ನಿಲ್ಲಬಲ್ಲಂತಹ ಬಲಿಷ್ಠ ದೇಶವಾಗಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಡೆಂಗ್ ಕ್ಸಿಯಾವೊಪಿಂಗ್ ಇನ್ನಿಲ್ಲ, ಆದರೆ ಅವರ ಬದುಕಿನಿಂದ ಎಲ್ಲಾ ಪ್ರಗತಿಪರರೂ ಮಹತ್ವಪೂರ್ಣ ಪಾಠ ಕಲಿಯಬಹುದು ಎನ್ನುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರು ಆ ಹಿರಿಯ ಚೇತನ ಮಾನವ ಇತಿಹಾಸಕ್ಕೆ ನೀಡಿದ ಕೊಡುಗೆಗಳನ್ನು ಇಲ್ಲಿ ಸ್ಮರಿಸಿಕೊಂಡಿದ್ದಾರೆ.

ಡೆಂಗ್‌ರವರ ಕೊಡುಗೆಗಳು ಅವಿಸ್ಮರಣೀಯ

- ಹರ್ಕಿಶನ್ ಸಿಂಗ್ ಸುರ್ಜಿತ್



ಕಾಮ್ರೇಡ್ ಡೆಂಗ್ ಕ್ಷಿಯೋಪಿಂಗ್‌ರವರ ಪಾರ್ಥಿವ ಶರೀರವನ್ನು ಅಂತ್ಯಕ್ರಿಯೆಗೆ ಒಯ್ಯುವ ದಾರಿಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲು ಒಂದು ಲಕ್ಷ ಜನಸ್ತೋಮ ಸೇರಿತ್ತು

ಫೆಬ್ರವರಿ 19 ರಂದು ತನ್ನ 92ನೇ ವಯಸ್ಸಿನಲ್ಲಿ ನಿಧನರಾದ ಕಾಂ|| ಡೆಂಗ್ ಕ್ಷಿಯಾವೊಪಿಂಗ್ ಒಂದು ಶ್ರೀಮಂತ ಪರಂಪರೆಯನ್ನು ಬಳುವಳಿಯಾಗಿ ಕೊಟ್ಟು ಹೋಗಿದ್ದಾರೆ. ಇದು ಕೇವಲ ಹಾಡಿ ಹೊಗಳುವಂತಹ ಕೊಡುಗೆ ಮಾತ್ರವೇ ಅಲ್ಲ. ವಿಶ್ವಾದ್ಯಂತ ಕಮ್ಯುನಿಸ್ಟರು ಮತ್ತು ಪ್ರಗತಿಪರ ಶಕ್ತಿಗಳು ಪಾಠ ಕಲಿಯಬೇಕಾದಂತಹ ಒಂದು ಕೊಡುಗೆ. 1922ರಲ್ಲಿ ಯೂತ್‌ಲೀಗ್‌ನ ಮುಂದಾಳಾಗಿ ಆರಂಭವಾಗಿ ಏಳು ದಶಕಗಳ ದೀರ್ಘ ರಾಜಕೀಯ ಜೀವನದ ನಂತರ ಪಕ್ಷದ ಎಲ್ಲಾ ಹುದ್ದೆಗಳನ್ನು ಮತ್ತು ಜನತಾ ವಿಮೋಚನಾ ಸೇನೆಯ ಸೇನಾಧಿಪತ್ಯವನ್ನು ಸ್ವಯಿಚ್ಛೆಯಿಂದ ಬಿಟ್ಟು ಕೊಡುವವರೆಗಿನ ಅವರ ಸಾಧನೆಗಳು ಚೀನೀ ಜನತೆಯ ಮೆಚ್ಚುಗೆಗೆ ಪಾತ್ರವಾಗಿವೆ ಯಷ್ಟೇ ಅಲ್ಲ, ಚೀನಾದ ಹೊರಗಿರುವ ಜನಗಳ ಮೆಚ್ಚುಗೆಗೂ ಪಾತ್ರವಾಗಿದೆ.

ವಿಶೇಷವಾಗಿ ಚೀನೀ ಕ್ರಾಂತಿಯ ಮುಂದುವರಿಕೆ ಹಾಗೂ ಆ ದೇಶದಲ್ಲಿ ಸಮಾಜವಾದೀ ರಚನೆಗೆ ಕಾಂ|| ಡೆಂಗ್‌ರವರ ಕೊಡುಗೆಯನ್ನು ನೆನಪಿಸಿಕೊಳ್ಳಲೇಬೇಕು, ಆ ಬಗ್ಗೆ ಗಂಭೀರ ಚಿಂತನೆಯನ್ನು ಮಾಡಬೇಕಾಗಿದೆ. ಅದೊಂದು ಚೀನಾದ ಇತಿಹಾಸದ ಗಂಭೀರ ಅವಧಿ. ಸಾಂಸ್ಕೃತಿಕ ಕ್ರಾಂತಿಯೆಂದು ವರ್ಣಿಸಿದ ಮತ್ತು ನಂತರ ಚೀನಾವನ್ನು ಸಮಾಜವಾದದ ಹಾದಿಯಿಂದ ದೂರ ಸೆಳೆಯಲಾರಂಭಿಸಿದ ನಾಲ್ವರ ದುಷ್ಟಕೂಟದ ವಿನಾಶಕಾರೀ ಪರಿಣಾಮಗಳ ಅವಧಿ.

ಈ ಅವಧಿಯಲ್ಲಿ ಸ್ವತಃ ಕಾಂ|| ಡೆಂಗ್ ಕೂಡಾ ತಾತ್ಕಾಲಿಕವಾಗಿ ಮರೆಗೆ ಸರಿಸಲ್ಪಟ್ಟರು. ಇಂತಹ ಒಂದು ಸನ್ನಿವೇಶದಲ್ಲಿ ಕಾಂ|| ಡೆಂಗ್ ಶ್ರಮಿಕ ವರ್ಗದ ಸರ್ವಾಧಿಕಾರದ, ಪಕ್ಷದ ಮುಖಂಡತ್ವದ ಹಾಗೂ ಮಾರ್ಕ್ಸ್‌ವಾದ- ಲೆನಿನ್‌ವಾದ- ಮಾವೋ ಝು ಡೊಂಗ್ ವಿಚಾರಗಳ ಮೂಲಭೂತ ಮಹತ್ವವನ್ನು ಮತ್ತೆ ಎತ್ತಿ ಹಿಡಿದರು. ತನ್ನ ಎದುರಿದ್ದ ಮೂರ್ತ ಸಮಸ್ಯೆಗಳ ಮೇಲೆ ಪೂರ್ಣ ಹತೋಟಿ ಹಾಗೂ ಭವಿಷ್ಯದ ಸ್ಪಷ್ಟ ಕಣ್ಣೋಟ ಇವುಗಳ ಮೂಲಕ ಅವರು ಚೀನಾದ ಕ್ರಾಂತಿಯನ್ನು ಮತ್ತೆ ಸಮಾಜವಾದೀ ರಚನೆಯ ಹಳಿಯ ಮೇಲೆ ತಂದರಲ್ಲದೆ, ಈ ಪ್ರಕ್ರಿಯೆಲ್ಲಿ ಪುನರ್‌ರಚನೆಯ ಪ್ರಕ್ರಿಯೆಯನ್ನು ಮುಂದೊಯ್ಯಬಲ್ಲ ಒಂದು ಸ್ಥಿರ ನಾಯಕತ್ವವನ್ನು ಸೃಷ್ಟಿಸಿದರು. ಕಾಂ|| ಜಿಯಾಂಗ್ ಜೆಮಿನ್ ಈಗ ಈ ನಾಯಕತ್ವದ ಮುಖ್ಯಸ್ಥರಾಗಿದ್ದಾರೆ.

ಎಡರಾಜಕೀಯದತ್ತ

1904ರಲ್ಲಿ ಚೀನಾದ ಗುವಾನ್‌ಗಾನ್ ಪ್ರಾಂತ್ಯದ ಒಬ್ಬ ಸಿರಿವಂತ ಭೂಮಾಲಕನ ಏಕೈಕ ಮಗನಾಗಿ ಹುಟ್ಟಿದ ಡೆಂಗ್ ತನ್ನ 16ನೇ ವಯಸ್ಸಿನಲ್ಲಿ ಒಂದು ಕೆಲಸ-ಅಧ್ಯಯನ ಕಾರ್ಯಕ್ರಮದ ಅಂಗವಾಗಿ ಫ್ರಾನ್ಸಿಗೆ ತೆರಳಿದರು. ಅಲ್ಲಿ ಅವರು ಎಡ ಪಂಥೀಯ ರಾಜಕೀಯದ ಸಂಪರ್ಕ ಪಡೆದರು. ವಸಾಹತು ಮತ್ತು ಅರೆವಸಾಹತು ದೇಶಗಳ ಜನರು ಬಂಡವಾಳಶಾಹಿ ದೇಶಗಳಲ್ಲಿ ಎದುರಿಸಬೇಕಾಗಿ ಬಂದಿದ್ದ ಅವಮಾನಗಳನ್ನು ಸ್ವತಃ ಅನುಭವಿಸಿದಾಗ ಅದಕ್ಕೆ ಪ್ರತಿಕ್ರಿಯೆಯಾಗಿ ಮೂಡಿಬಂದ ಈ ರಾಜಕೀಯದಲ್ಲಿ ಡೆಂಗ್ ಮಾತ್ರವೇ ಅಲ್ಲ ಇನ್ನೂ ಹಲವರು ಪರಿವರ್ತನೆ ಹೊಂದಿದರು. ಅವರಲ್ಲಿ ಒಬ್ಬ ಪ್ರಮುಖರೆಂದರೆ ವಿಯೆಟ್ನಾಂನ ಕಾಂ|| ಹೊ ಚಿ ಮಿನ್ಹ್. ಇದೇ ರೀತಿ ಬ್ರಿಟನ್‌ನಲ್ಲಿ ಹಲವು ಭಾರತೀಯ ಮತ್ತು ಇತರ ವಸಾಹತು ದೇಶಗಳ ಯುವ ಜನರೂ ಈ ಪರಿವರ್ತನೆಯ ಪ್ರಕ್ರಿಯೆಗೆ ಒಳಗಾಗಿದ್ದರು. ಫ್ರಾನ್ಸಿನಲ್ಲಿದ್ದ 5 ವರ್ಷಗಳ ಕಾಲ ಡೆಂಗ್ ತನ್ನ ಗುರುವಾದ ಚೌವ್ ಎನ್ ಲೈ ಸಂಘಟಿಸಿದ ಕಮ್ಯುನಿಸ್ಟ್ ಯುವ ಲೀಗನ್ನು ಸೇರಿದರು. ಎರಡು ವರ್ಷಗಳ ನಂತರ ಚೀನಾ ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಈ ಅವಧಿಯಲ್ಲಿ ಬಹಳಷ್ಟು ಪ್ರಚಾರ-ಆಂದೋಲನ ಲೇಖನಗಳನ್ನು ಅವರು ಪ್ರಕಟಿಸಿದರು.

ಸೋವಿಯತ್ ಒಕ್ಕೂಟದಲ್ಲಿ ವಿದ್ಯಾರ್ಥಿಯಾಗಿದ್ದ ಅಲ್ಪಅವಧಿಯ ನಂತರ ಚೀನಾಕ್ಕೆ ಮರಳಿದ ಡೆಂಗ್ ವಿಯೆಟ್ನಾಂ ಗಡಿಯಲ್ಲಿರುವ ಒಂದು ಬಡ ಪ್ರಾಂತ್ಯ ಪಶ್ಚಿಮ ಗುವಾಂಗ್‌ಕ್ಸಿಯಲ್ಲಿ ಒಂದು ಸೋವಿಯತ್ ಸರಕಾರ ರಚಿಸುವಲ್ಲಿ ಮುಖ್ಯ ಪಾತ್ರ ವಹಿಸಿದರು. ಈ ಸರಕಾರ ಕುಸಿದು ಬಿದ್ದ ನಂತರ, ಆಗ ಜಿಯಾಂಗ್‌ಕ್ಸಿ ಪ್ರಾಂತ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಮಾವೋ ಝು ಡೊಂಗ್‌ರ ಜತೆ ಸೇರಿದರು. ನಂತರ 1933-34 ರ ಚಾರಿತ್ರಿಕ ದೀರ್ಘ ಪಯಣ(ಲಾಂಗ್ ಮಾರ್ಚ್)ದಲ್ಲಿ ಹಾಗೂ ಜಪಾನಿನ ವಿರುದ್ಧ ಯುದ್ಧದಲ್ಲಿ 'ಎಂಟನೇ ರೂಟ್ ಆರ್ಮಿ'ಯ ಮುಖಂಡರಲ್ಲೊಬ್ಬರಾಗಿ ಒಂದು ಮಹತ್ವಪೂರ್ಣ ಪಾತ್ರ ವಹಿಸಿದರು. 1948 ರಲ್ಲಿ ಡೆಂಗ್ ನೇತೃತ್ವದ ಎರಡನೇ ಫೀಲ್ಡ್ ಆರ್ಮಿ ಯುವಾಯ್ ಹಾಯ್‌ನ ಸಮರದಲ್ಲಿ ಮಹತ್ವ... ವಹಿಸಿತು ... ಪಾತ್ರ ...ಸಮರದಲ್ಲಿ ಚಿಯಾಂಗ್ ಕೈಶೇಕನ ಪಡೆಗಳು ಸೋತು ಅವರ ಸೇನಾಧಿಪತಿಯೇ ತೈವಾನಿಗೆ ಓಡಿ ಹೋದ.

ಅಕ್ಟೋಬರ್ 1949ರಲ್ಲಿ ಅಧಿಕಾರವನ್ನು ವಶಪಡಿಸಿಕೊಂಡ ಮೇಲೆ ಡೆಂಗ್ ನೈಋತ್ಯ ಚೀನಾದಲ್ಲಿ ಪಕ್ಷದ ನೇತೃತ್ವ ವಹಿಸಿಕೊಂಡರು. 1952ರಲ್ಲಿ ಉಪಪ್ರಧಾನಿಯಾಗಿ 1953ರಲ್ಲಿ ಹಣಕಾಸು ಮಂತ್ರಿಯಾಗಿ ನೇಮಕಗೊಂಡರು. 1955ರಲ್ಲಿ ಅವರು ಪೊಲಿಟ್ ಬ್ಯೂರೋಗೆ ಆರಿಸಲ್ಪಟ್ಟರು. ಅಂದಿನಿಂದ ಅವರು ಮಹತ್ವಪೂರ್ಣ ಪಾತ್ರ ವಹಿಸಿದರು. ಚೀನಾದ ವಿದೇಶಾಂಗ ನೀತಿಯನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಸೋವಿಯತ್ ಒಕ್ಕೂಟದೊಂದಿಗೆ ವಿರಸವನ್ನು ಶಮನಗೊಳಿಸುವ ಪ್ರಯತ್ನದಲ್ಲಿಯೂ ಪಾತ್ರವಹಿಸಿದರು. ಆದರೆ ಅದು ಸಫಲವಾಗಲಿಲ್ಲ. ಸಾಂಸ್ಕೃತಿಕ ಕ್ರಾಂತಿಯ ವೇಳೆಯಲ್ಲಿ ಅವರನ್ನು ಅವಮಾನಗೊಳಿಸಲಾಯಿತು. ಆದರೆ 1973 ರಲ್ಲಿ ಮತ್ತೆ ಅವರು ನೇತೃತ್ವಕ್ಕೆ ಬಂದರು.

1976 ರಲ್ಲಿ ಮಾವೋ ಝು ಡೊಂಗ್ ಮರಣದ ನಂತರ ಅವರ ಮುಂದಾಳತ್ವದ ಗುಣಗಳು ಪೂರ್ಣವಾಗಿ ಅರಳಿಕೊಂಡವು. ಅವರು ಅಂದಿನ ಬಿರುದಿನಗಳಲ್ಲಿ ಚೀನಾದ ಮುನ್ನಡೆಯ ಚುಕ್ಕಾಣಿ ಹಿಡಿದು ಆ ದೇಶದಲ್ಲಿ ಸಮಾಜವಾದ ಮುಂದುವರಿಯುವಂತೆ ನೋಡಿಕೊಂಡರು.

ಅವರ ಈ ಗಟ್ಟಿ ಗುಣಗಳಿಂದಾಗಿಯೇ 1990ರಲ್ಲಿ ಅವರು ಕೇಂದ್ರ ಮಿಲಿಟರಿ ಆಯೋಗದ ಅಧ್ಯಕ್ಷದ ಪದವಿಯನ್ನು ಬಿಟ್ಟಮೇಲೂ ಅವರು ಗೆಳೆಯ, ತಾತ್ವಿಕ ಹಾಗೂ ಮಾರ್ಗ... ...ದರ್ಶಿಯಾಗಿ ಇಡಿ ಪಕ್ಷದ ಗೌರವಕ್ಕೆ ಪಾತ್ರರಾಗಿದ್ದರು.

ಮಾವೋ ವಿಮರ್ಶೆ

ಮಾವೋ ಝು ಡೊಂಗ್‌ರ ಸಾವಿನ ನಂತರ ಚೀನಾ ಕಮ್ಯುನಿಸ್ಟ್ ಪಕ್ಷ ಬಹಳ ಕಷ್ಟಕರ ಸನ್ನಿವೇಶವನ್ನು ಎದುರಿಸಬೇಕಾಗಿ ಬಂತು. ಅದರಲ್ಲೊಂದು ಚೀನೀ ಕ್ರಾಂತಿಗೆ ಆ ದಿವಂಗತ ಅಧ್ಯಕ್ಷರ ಕಾಣಿಕೆಯ ಪರಾಮರ್ಶೆ. ಹಿಂದಿನ ತಪ್ಪುಗಳಿಂದ ಸರಿಯಾದ ಪಾಠ ಕಲಿಯಲು ಹಾಗೂ ಹಿಂದಿನ ಸಾಧನೆಗಳ ಅಡಿಗಲ್ಲ ಮೇಲೆ ಭವಿಷ್ಯವನ್ನು ಕಟ್ಟಿ ಕ್ರಾಂತಿಯನ್ನು ಮುಂದಕ್ಕೊಯ್ಯಲು ಇಂತಹ ಪರಾಮರ್ಶೆ ಅಗತ್ಯವೂ ಆಗಿತ್ತು. ಇಲ್ಲಿಯೇ ಡೆಂಗ್‌ರ ಕಣ್ಣೋಟ ಹಾಗೂ ನಾಯಕತ್ವದ ಪೂರ್ಣ ಪ್ರಭೆ ಕಂಡು ಬಂದದ್ದು. ಅವರ ನಾಯಕತ್ವದಲ್ಲಿ ಚೀನೀ ಕ್ರಾಂತಿಯ ಶಿಲ್ಪಿಯೆಂದು ಪರಿಗಣಿಸಲ್ಪಟ್ಟಿದ್ದ ಆ ದಿವಂಗತ ಮುಂದಾಳುವಿನ ಒಂದು ಸಮತೋಲನವಾದ ಪರಾಮರ್ಶೆ ನಡೆಸಲು ಚೀನೀ ಕಮ್ಯುನಿಸ್ಟ್ ಪಕ್ಷಕ್ಕೆ ಸಾಧ್ಯವಾಯಿತು. ಮಾವೋರವರು ತಮ್ಮ ರಾಜಕೀಯ ಜೀವನದ ಕೊನೆಯ ವರ್ಷಗಳಲ್ಲಿ ಮಾಡಿದ ಗಂಭೀರ ತಪ್ಪುಗಳನ್ನು ತೇಲಿಸಿ ಬಿಡುವ ಪ್ರಯತ್ನ ಮಾಡದೆಯೇ ಪಕ್ಷ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಭೂತ ಪ್ರತಿಪಾದನೆಗಳನ್ನು ಚೀನಾದ ಮೂರ್ತ ಪರಿಸ್ಥಿತಿಗಳಿಗೆ ಅನ್ವಯಿಸುವಲ್ಲಿ ಹಾಗೂ ನಂತರ ಚೀನೀ ಗುಣಲಕ್ಷಣಗಳುಳ್ಳ ಸಮಾಜವಾದವನ್ನು ಕಟ್ಟುವಲ್ಲಿ ಅವರು ಅಪಾರ ಕೊಡುಗೆಗಳನ್ನು ಸಲ್ಲಿಸಿದ್ದಾರೆ ಎಂಬುದನ್ನು ಸ್ವೀಕರಿಸಿತು. ಇನ್ನೂ ಪಾಳೆಯಗಾರಿ ವ್ಯವಸ್ಥೆಯೇ ಪ್ರಬಲವಾಗಿದ್ದ, ವಿಪರೀತ ಹಿಂದುಳಿದ ಹಾಗೂ ಉತ್ಪಾದಕ ಶಕ್ತಿಗಳು ಬಹಳ ಕೆಳ ಮಟ್ಟದಲ್ಲಿದ್ದ ಒಂದು ದೇಶದಲ್ಲಿ ಮಾವೋ ಸಮಾಜವಾದಿ ಪುನರ್‌ರಚನೆಯ ಪ್ರಕ್ರಿಯೆಯ ನೇತೃತ್ವ ವಹಿಸಿದರು ಎಂಬ ಸಂಗತಿಯನ್ನು ಗಮನಿಸಿದಾಗ ಅವರ ಕೊಡುಗೆಗೆ ಇನ್ನಷ್ಟು ಮಹತ್ವ ಬರುತ್ತದೆ ಎಂದು ಚೀನಾ ಕಮ್ಯುನಿಸ್ಟ್ ಪಕ್ಷ ಒತ್ತಿ ಹೇಳಿತು. ಆದ್ದರಿಂದ ಸೋವಿಯತ್ ಒಕ್ಕೂಟದಲ್ಲಿ ಸ್ಟಾಲಿನ್ನರ ವಿಷಯದಲ್ಲಾದಂತೆ ಚೀನಾದಲ್ಲಿ ಆಗಲಿಲ್ಲ. ಒಂದೆಡೆ ಮಾವೋರವರ ಪಾತ್ರದ ನಕಾರಾತ್ಮಕ ಅಂಶಗಳನ್ನು ತಿರಸ್ಕರಿಸಿ, ಅವುಗಳ ಹಾನಿಕಾರಕ ಪ್ರಭಾವಗಳನ್ನು ಮೀರಿ ನಿಲ್ಲುವುದರೊಂದಿಗೆ ಚೀನಾದ ಜನತೆ ಮತ್ತು ಅಲ್ಲಿಯ ಕಮ್ಯುನಿಸ್ಟ್ ಪಕ್ಷ ಅವರ ಕೊಡುಗೆಗಳನ್ನು ನಿರ್ಲಕ್ಷಿಸಲಿಲ್ಲ.

ಚೀನಾ ಕಮ್ಯುನಿಸ್ಟ್ ಪಕ್ಷದ ಹನ್ನೊಂದನೇ ಕೇಂದ್ರ ಸಮಿತಿಯ ಪ್ಲೀನಮ್ಮಿನಲ್ಲಿ ಹಾಗೂ ಅದರ ಮೊದಲು ಮಾಡಿದ ಕೆಲವು ಸರಿಪಡಿಕೆಗಳು ಆಧುನಿಕ ಚೀನಾದ ಇತಿಹಾಸದ... ...ಲ್ಲೊಂದು ಮಹತ್ವದ ತಿರುವಾಯಿತು. ಆ ದೇಶವನ್ನು ಕಟ್ಟುವ ಕೆಲಸದ ವೇಗವನ್ನು ಹೆಚ್ಚಿಸಿತು.

ನಾಲ್ಕು ಆಧಾರ ನೀತಿಗಳು

ಈ ಅವಧಿಯಲ್ಲೇ ಡೆಂಗ್ ನಾಲ್ವರ ದುಷ್ಟಕೂಟ ಹೇರಿದ್ದಂತದ್ದು 'ಖೋಟಾ ಅತಿ-ಎಡಪಂಥೀಯ ಸಮಾಜವಾದ' ಎಂದು ವರ್ಣಿಸುತ್ತಾ ಅದನ್ನು ಬಲವಾಗಿಖಂಡಿಸಿದರು. ಹಾಗೂ ಚೀನಾ ಸಮಾಜವಾದದ ಹಂತದಲ್ಲೇ ಇದೆ ಎಂಬ ಆಗಿನ ಪ್ರತಿಪಾದನೆ ತಪ್ಪು ಎಂಬ ವಿಚಾರವನ್ನು ಮುಂದಿಟ್ಟರು. ಚೀನಾ ಸಮಾಜವಾದದ ಹಂತ ತಲುಪಬೇಕಾದರೆ ಹಲವು ದಶಕಗಳು ಬೇಕಾಗಬಹುದು. ಇದಕ್ಕೆ ಎರಡು ಸಂಗತಿಗಳು ಅಗತ್ಯ - ಮೊದಲನೆಯದಾಗಿ, ದೇಶದಲ್ಲಿನ ಉತ್ಪಾದಕ ಶಕ್ತಿಗಳ ಬೆಳವಣಿಗೆಯ ಮಟ್ಟವನ್ನು ಕುರಿತಾದ ಮೂರ್ತ ವಾಸ್ತವತೆಯನ್ನು ಗಮನಿಸಿ ಅದರ ಆಧಾರದಲ್ಲಿ ಮುಂದುವರೆಯುವುದು; ಹೀಗೆ ಮಾಡದಿದ್ದರೆ ಪಕ್ಷದ ಹಾಗೂ ಜನಗಳ ಸಾಮೂಹಿಕ ಪ್ರಯತ್ನಗಳೆಲ್ಲಾ ನಿಷ್ಪ್ರಯೋಜಕವಾಗಿ ಶೋಚನೀಯವಾಗಿ, ವಿಫಲತೆ ಕಾಣಬೇಕಾಗುತ್ತದೆ. ಅದೇ ವೇಳೆಗೆ ಚೀನಾ ಹೊರಗಿನ ವಿಶ್ವಕ್ಕೆ 'ತೆರೆದುಕೊಂಡು' ವಿಜ್ಞಾನ ಮತ್ತು ತಂತ್ರಜ್ಞಾನದ ರಂಗಗಳಲ್ಲಿ ಆಗುತ್ತಿರುವ ಭಾರೀ ಬೆಳವಣಿಗೆಗಳನ್ನು ಅಂತರ್ಗತ ಮಾಡಿಕೊಂಡು ಅದೇ ವೇಳೆಗೆ ಸಮಾಜವಾದದ ದಾರಿಯಲ್ಲೇ ಇದ್ದು,ಪ್ರಭುದ್ಧ ಆಸ್ತಿಯ ಸ್ಥಾನಮಾನವೇ ಎಲ್ಲಕ್ಕಿಂತ ಪ್ರಬಲವಾಗಿರುವಂತೆ ನೋಡಿ ಕೊಳ್ಳಬೇಕು ಎಂದು ಡೆಂಗ್ ಪ್ರತಿಪಾದಿ ಸಿದ್ದರು. ದೇಶೀಯ ಪ್ರತಿಭಾ ಶಕ್ತಿಯ ಆಧಾರವನ್ನು ಕಟ್ಟಿ ಬೆಳೆಸಲು ಸರ್ವ ಪ್ರಯತ್ನಗಳನ್ನು ನಡೆಸಬೇಕು ಎಂದು ಅವರು ಒತ್ತಿಹೇಳಿದರು. ಈ ಅವಧಿಯ ಡೆಂಗ್‌ರ ಲೇಖನಗಳು, ಭಾಷಣಗಳು ಈ ಅಂಶದ ಮೇಲೆ ಅವರು ನೀಡಿದ ಒತ್ತನ್ನು, ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಸಂಸ್ಕೃತಿ ಇತ್ಯಾದಿಗಳ ಬಗ್ಗೆ ಅವರ ಅಪಾರ ತೀವ್ರ ಆಸಕ್ತಿಯನ್ನು, ವಿಶೇಷವಾಗಿ ಸ್ಥಳೀಯ ಪ್ರತಿಭೆಗೆ ಪ್ರೋತ್ಸಾಹ ನೀಡಬೇಕೆಂಬ ಅವರ ಆಕಾಂಕ್ಷೆಗಳನ್ನು ತೋರಿಸುತ್ತದೆ.

ಇಂತಹ ಒಂದು ಸಂದರ್ಭದಲ್ಲೇ ಚೀನಾ ಕಮ್ಯುನಿಸ್ಟ್ ಪಕ್ಷ ಅವರ ಸೈದ್ಧಾಂತಿಕ ಮಾರ್ಗದರ್ಶನದಲ್ಲಿ 'ನಾಲ್ಕು ಆಧಾರ ನೀತಿಗಳು' ಹಾಗೂ 'ನಾಲ್ಕು ಆಧುನೀಕರಣಗಳು' ಎಂದು ಹೆಸರಾದ ವಿಚಾರಗಳನ್ನು ಮುಂದಿಟ್ಟಿತು(ಬಾಕ್ಸ್ ನೋಡಿ). ಇದು 'ವಾಸ್ತವ ಸಂಗತಿಗಳಿಂದ ಸತ್ಯವನ್ನು ಅರಸಬೇಕು' ಎಂಬ ಮಾವೋರವರ ಸಲಹೆಯನ್ನು ಧೈರ್ಯದಿಂದ ಅನುಸರಿಸಿದ್ದಕ್ಕೆ ಒಂದು ಉದಾಹರಣೆ. ಸಿದ್ಧಾಂತವನ್ನು ಆಚರಣೆಯೊಂದಿಗೆ ಸಮಗ್ರೀಕರಿಸಬೇಕು ಎಂಬ ಮಾರ್ಕ್ಸ್‌ರವರ ಸಿದ್ಧಾಂತ... ಇನ್ನೊಂದು ...ಸರು ಇದು. ಇದು ದೌರ್ಬಲ್ಯಗಳು ಮತ್ತು ಸಾಮರ್ಥ್ಯಗಳನ್ನು ಗಣನೆಗೆ ತಗೊಂಡು ಈ ಶತಮಾನದ ಅಂತ್ಯದೊಳಗೆ ನಾಲ್ಕು ಆಧುನೀಕರಣಗಳನ್ನು ಮುಂದೊಯ್ಯಲು ಆ ಮೂಲಕ "ಆರ್ಥಿಕ, ರಾಜಕೀಯ, ರಾಜತಾಂತ್ರಿಕ ವ್ಯವಸ್ಥೆಗಳನ್ನು ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಸಂಸ್ಕೃತಿ ಮತ್ತು ಮಿಲಿಟರಿ ವ್ಯವಹಾರಗಳನ್ನು ಆಧುನೀಕರಿಸಲು" ಮತ್ತು ಮಾತೃಭೂಮಿಯ ಏಕೀಕರಣ, ಪಕ್ಷವನ್ನು ಕಟ್ಟುವುದರ ಅಗತ್ಯ, ಅಷ್ಟೇ ಅಲ್ಲ 'ಅರಾಜಕತೆಯಿಂದ ಒಟ್ಟಾರೆ ಸುಧಾರಣೆಯತ್ತ, ಗ್ರಾಮೀಣ ಸುಧಾರಣೆಯಿಂದ ನಗರ ಸುಧಾರಣೆಯತ್ತ, ಆರ್ಥಿಕ ಸುಧಾರಣೆಯಿಂದ ವಿವಿಧ ವಲಯಗಳಸುಧಾರಣೆಯತ್ತ ಸಾಗಲು ಭೌತಿಕ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಹಾಗೂ ನೈತಿಕ ಪ್ರಗತಿ"ಗೆ ಇದು ಅಗತ್ಯ ಎಂದು ಆಅವಧಿಯಒಂದುಟಿಪ್ಪಣಿಹೇಳಿದೆ.

ಈ ಪ್ರಕ್ರಿಯೆಯ ಫಲಿತಾಂಶಗಳನ್ನು ಕಳೆದ ಎರಡು ದಶಕಗಳಲ್ಲಿ ಚೀನಾ ಸಾಧಿಸಿದ ಅದ್ಭುತ ಪ್ರಗತಿಯಲ್ಲಿ ಕಾಣಬಹುದು.

ಆಧುನೀಕರಣಕ್ಕೆ ಪ್ರೋತ್ಸಾಹ ನೀಡುವ ವೇಳೆಗೇ ಡೆಂಗ್‌ರವರಿಗೆ ಈ ತೆರೆದಿಡುವ ಹಾಗೂ ಸುಧಾರಣೆಯ ಪ್ರಕ್ರಿಯೆಯಲ್ಲಿ ಖಂಡಿತವಾಗಿಯೂ ಕೆಲವು ಬೂರ್ಝ್ವಾ ದುರ್ಗುಣಗಳು ಹರಿದುಬರುತ್ತವೆ ಎಂಬ ಬಗ್ಗೆ ಪೂರ್ಣ ಅರಿವಿತ್ತು. ಆದ್ದರಿಂದಲೇ ಅವರು ಪಕ್ಷ ನಿರಂತರ ಎಚ್ಚರದಿಂದಿರ...ಬೇಕು ಎಂದು ಒತ್ತಿ-ಒತ್ತಿ ಹೇಳುತ್ತಿದ್ದರು. ಇದಕ್ಕೆ

ಪುಟ 8 ನೋಡಿ

ನಾಲ್ಕು ಆಧಾರ ನೀತಿಗಳು

"ಒಂದು ಚೀನೀ ಶೈಲಿಯ ಆಧುನೀಕರಣವನ್ನು ಸಾಧಿಸಲು ನಾವು ಚೀನಾದ ವಿಶೇಷ ಗುಣಲಕ್ಷಣಗಳಿಂದಲೇ ಹೊರಡಬೇಕು. ಉದಾಹರಣೆಗೆ, ಆಧುನಿಕ ಉತ್ಪಾದನೆಗೆ ಕೆಲವೇ ಜನರು ಸಾಕು. ಆದರೆ ನಮ್ಮ ಜನಸಂಖ್ಯೆ ಅಗಾಧವಾಗಿದೆ. ನಾವು ಇವೆರಡನ್ನು ತಾಳೆ ಹಾಕುವುದು ಹೇಗೆ? ಎಲ್ಲಾ ಸಂಗತಿಗಳನ್ನು ಪರಿಗಣನೆಗೆ ತಗೊಳ್ಳದೇ ಇದ್ದರೆ ನಾವು ಬಹಳ ಸಮಯ ಸಾಕಷ್ಟು ಉದ್ಯೋಗವಿಲ್ಲದಂತಹ ಸಾಮಾಜಿಕ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಹಲವು ಸಮಸ್ಯೆಗಳಿಗೆ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ಕೆಲಸಗಳಲ್ಲಿ ತೊಡಗಿರುವ ಪಕ್ಷದ ಸಂಗಾತಿಗಳು ಇವನ್ನೆಲ್ಲಾ ಒಟ್ಟಿಗೇ ಅಧ್ಯಯನ ಮಾಡಬೇಕು... ....ನಾವೀಗ ಹೇಳಬಯಸುವುದು ಸೈದ್ಧಾಂತಿಕ ಮತ್ತು ರಾಜಕೀಯ ಪ್ರಶ್ನೆಗಳ ಬಗ್ಗೆ ಚೀನಾದ ನಾಲ್ಕು ಆಧುನೀಕರಣಗಳನ್ನು ಈಡೇರಿಸಲು ನಾವು ಸೈದ್ಧಾಂತಿಕವಾಗಿ ಹಾಗೂ ರಾಜಕೀಯವಾಗಿ ನಾಲ್ಕು ಆಧಾರ ನೀತಿಗಳನ್ನು ಎತ್ತಿ ಹಿಡಿಯಬೇಕು ಎಂದು ಕೇಂದ್ರ ಸಮಿತಿ ಹೇಳುತ್ತದೆ. ಇದು ಆಧುನೀಕರಣ ಸಾಧಿಸಲು ಬೇಕಾದ ಮೂಲಭೂತ ಅಗತ್ಯಗಳು. ಆ ನಾಲ್ಕು ನೀತಿಗಳೆಂದರೆ -

1. ನಾವು ಸಮಾಜವಾದೀ ದಾರಿಯಲ್ಲೇ ಇರಬೇಕು.
2. ನಾವು ಶ್ರಮಜೀವಿ ವರ್ಗದ ಸರ್ವಾಧಿಕಾರವನ್ನು ಎತ್ತಿ ಹಿಡಿಬೇಕು.
3. ನಾವು ಕಮ್ಯುನಿಸ್ಟ್ ಪಕ್ಷದ ಮುಂದಾಳತ್ವವನ್ನು ಎತ್ತಿ ಹಿಡಿಬೇಕು.
4. ನಾವು ಮಾರ್ಕ್ಸ್‌ವಾದ-ಲೆನಿನ್‌ವಾದ ಮತ್ತು ಮಾವೋ ಝು ಡೊಂಗ್ ವಿಚಾರವನ್ನು ಎತ್ತಿ ಹಿಡಿಯಬೇಕು

- ಡೆಂಗ್ ಕ್ಷಿಯಾಪೋಪಿಂಗ್

“ಸಮಾನ ಕನಿಷ್ಠ ಕಾರ್ಯಕ್ರಮದ ಭರವಸೆಯನ್ನು ಈ ಬಜೆಟ್ ಪೂರೈಸಿಲ್ಲ”

- ಸೀತಾರಾಂ ಯಚೂರಿ

ಪಿ.ಚಿದಂಬರಂ ಫೆಬ್ರವರಿ 28ರಂದು ಲೋಕಸಭೆಯಲ್ಲಿ ಮಂಡಿಸಿದ 1997-98ರ ಬಜೆಟ್ ಕನಿಷ್ಠ ಸಮಾನ ಕಾರ್ಯಕ್ರಮದ ಭರವಸೆಗಳನ್ನು ಈಡೇರಿಸಿಲ್ಲವೆಂದು ಸಿಪಿಐ(ಎಂ)ನ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಂ. ಸೀತಾರಾಂ ಯಚೂರಿ ಹೇಳಿದ್ದಾರೆ.

ಶ್ರೀ ಚಿದಂಬರಂ ಸಮಾನ ಕನಿಷ್ಠ ಕಾರ್ಯಕ್ರಮದ ಬಗ್ಗೆ ಅಪಾರ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈ ಕಾಳಜಿ ಬಜೆಟ್‌ನಲ್ಲಿ ಹಣ ತೆಗೆದಿಡುವ ವಿಷಯದಲ್ಲಿ ಕಂಡುಬಂದಿಲ್ಲ. ಸಾಮಾಜಿಕ ವಲಯಕ್ಕಾಗಿ ಮೀಸಲಿರಿಸಿದ ಹಣದಲ್ಲಿ (1996-97) 10000 ಕೋಟಿ ರೂಪಾಯಿಗಳ ವ್ಯತ್ಯಾಸವಿತ್ತು. ಅಂದರೆ ಬಜೆಟ್ ಅಂದಾಜು ಮತ್ತು ಪರಿಷ್ಕೃತ ಅಂದಾಜಿನಲ್ಲಿ ಈ ವ್ಯತ್ಯಾಸವಿತ್ತು. 1997-98 ರ ಬಜೆಟ್‌ನಲ್ಲಿ ಕಳೆದ ವರ್ಷಕ್ಕಿಂತ 4000 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ತೆಗೆದಿರಿಸಲಾಗಿದೆ. ನಿಜದಲ್ಲಿ(ಹಣದುಬ್ಬರ, ಈ ವರ್ಷದ ಅವಶ್ಯಕತೆ ಇತ್ಯಾದಿಗಳನ್ನು ಗಮನಕ್ಕೆ ತೆಗೆದುಕೊಂಡರೆ) ಇದು ಬಹಳ ಹೆಚ್ಚೇನೂ ಅಲ್ಲ.

ಅನಾವಶ್ಯಕವಾಗಿ ತೆರಿಗೆ ಕಡಿತ ಮಾಡಲಾಗಿದೆ. ವೈಯಕ್ತಿಕ ಆದಾಯ ತೆರಿಗೆ ಕಡಿತ ಶ್ರೀಮಂತರ ಅನುಕೂಲಕ್ಕಾಗಿ ಮಾಡಿದ್ದು ಇಲ್ಲಿಯೂ ಕೆಳ ಆದಾಯ ತೆರಿಗೆ ವರ್ಗಕ್ಕೆ ಶೇ10 ರಷ್ಟು ರಿಯಾಯತಿ ನೀಡಿದ್ದು ಸ್ವಾಗತಾರ್ಹ. ಆದರೆ ಶ್ರೀಮಂತರಿಗೆ ಮೊದಲಿನಷ್ಟೇ ತೆರಿಗೆ ಹೇರಬೇಕಾಗಿತ್ತು.

ಆಮದು ಸುಂಕವನ್ನು ಗರಿಷ್ಟ ಶೇ.50ರಿಂದ ಶೇ.40ಕ್ಕೆ ಇಳಿಸಿರುವುದು ದೇಶೀ ಉದ್ಯಮಗಳಿಗೆ ಹೊಡೆತ ನೀಡುತ್ತದೆ. ಕಳೆದ ವರ್ಷದ ಬಜೆಟ್‌ನಲ್ಲಿ ಮಾಡಿದ ಇಂತಹ ಕಡಿತದಿಂದ ಕಂಪ್ಯೂಟರ್ ಉದ್ದಿಮೆ ಹೊಡೆತ ತಿಂದಿದೆ.

ಬಳಕೆ ವಸ್ತುಗಳ ಮೇಲಿನ ಅಬ್ಕಾರಿ ಸುಂಕವನ್ನು ಯಾಕೆ ಕಡಿಮೆ ಮಾಡಬೇಕಾಗಿತ್ತು.? ಇದೇ ಹಣಕಾಸು ಮಂತ್ರಿಗಳು ಬೇರೆಡೆಯಲ್ಲೆಲ್ಲ ಒಟ್ಟುತ್ಪಾದನೆ ಮತ್ತು ತೆರಿಗೆಯ ಪ್ರಮಾಣ ಶೇ10.5 ರಷ್ಟಿದೆ ಎಂದಾಗ ಅದು ನಿಜವೆಂದಿದ್ದರು. ಆದರೆ ಬರುವ ವರ್ಷದಲ್ಲೂ ಈ ಪ್ರಮಾಣ ಶೇ 10.5 ರಷ್ಟೇ ಇರುತ್ತದೆ. ತೆರಿಗೆಯ ತಳಹದಿಯನ್ನೇ ವ್ಯಾಪಕಗೊಳಿಸುವ ಅವಶ್ಯಕತೆ ಇತ್ತು. ಅದನ್ನು ಮಾಡಲೇ ಇಲ್ಲ. ಪರ್ಯಾಯ ತೆರಿಗೆ ಸಂಗ್ರಹ ಒಳ್ಳೆಯದು. ಆದರೆ ಕಾರು, ಫೋನು, ಮನೆಗಳನ್ನು ಹೊಂದಿರುವರ ಮೇಲೆ ತೆರಿಗೆ ಹೇರುವ ವಿಚಾರ ಅಷ್ಟೊಂದು ಫಲದಾಯಕವಾಗಲಿಕ್ಕಿಲ್ಲ.

ಕಳೆದ ವರ್ಷ ದೇಶದೊಳಗೆ ಪೆಟ್ರೋಲಿಯಂ ಉತ್ಪನ್ನಗಳ ಉತ್ಪಾದನೆ ಕಡಿಮೆಯಾಯಿತು. ಆದ್ದರಿಂದ ತೈಲ ಖಾತೆಯಲ್ಲಿನ ಕೊರತೆ ಹೆಚ್ಚಾಯಿತು. ಆದ್ದರಿಂದ ತೈಲ ಮತ್ತು ನೈಸರ್ಗಿಕ ಅನಿಲ ಪ್ರಾಧಿಕಾರದ ವೆಚ್ಚಕ್ಕೆ 1800 ಕೋಟಿ ರೂಪಾಯಿಗಳ ಕೊರತೆಯಾಯಿತು. ಈ ಹಿನ್ನೆಲೆಯಲ್ಲಿ ತೈಲ ಶೋಧನೆಗೆ ಖಾಸಗಿಯವರಿಗೆ ಏಳು ವರ್ಷದ ತೆರಿಗೆ ಸೂಟಿಯಂತಹ ರಿಯಾಯತಿಗಳ ಗಂಟನ್ನೇ ನೀಡಲಾಗಿದೆ. ಇದರಿಂದಾಗಿ ಬಹುರಾಷ್ಟ್ರೀಯ ಕಂಪನಿಗಳು ಈ ವಲಯಕ್ಕೆ ಬರುತ್ತವೆ. ಇದು ದೇಶದ ಸ್ವಾವಲಂಬನೆಯನ್ನು ಹಾಳುಗೆಡುವುತ್ತದೆ.

ವಿಮಾ ವಲಯದ ಖಾಸಗೀಕರಣವನ್ನು ನಾವು ವಿರೋಧಿಸಿದೆವು. ಈಗ ಪ್ರಸ್ತಾಪಿಸಿರುವ ಬದಲಾವಣೆಗಳು ನಮಗೆ ಸ್ವಾಗತಾರ್ಹವಲ್ಲ.

ಬಂಡವಾಳ ಖಾತೆಯ ಪೂರ್ಣ ಪರಿವರ್ತನೀಯತೆ ದೇಶಕ್ಕೆ ತೀವ್ರ ಅಪಾಯಕಾರಿ. ಹಾಗೆಯೇ ಅಂಚೆ ದರಗಳ ಹೆಚ್ಚಳ, ವಿದೇಶೀ ಹೂಡಿಕೆದಾರರ ಹೂಡಿಕೆ ಮಿತಿಯ ಹೆಚ್ಚಳ, ಕಂಪನಿಗಳ ತೆರಿಗೆಯಲ್ಲಿ ಕಡಿತ, ಇವನ್ನೆಲ್ಲ ನಾವು ವಿರೋಧಿಸುತ್ತೇವೆ.

ಈ ಬಜೆಟ್ಟಿನಲ್ಲಿ ಏನಾಗಿದೆಯೆಂದರೆ ಖರ್ಚಿನ ಭಾರ ಕಂದಾಯ ಸಂಗ್ರಹಣೆಯ ಮೇಲಿರುವ ಬದಲು ಅದು ರೈಲ್ವೆ ಸಾಗಾಣಿಕೆ ದರ ಹೆಚ್ಚಳ, ಸಕ್ಕರೆ, ಆಹಾರ ಧಾನ್ಯಗಳ ಬೆಲೆ ಹೆಚ್ಚಳದಂತಹ ಆಡಳಿತಾತ್ಮಕ ಬೆಲೆ ಹೆಚ್ಚಳಗಳಿಗೆ ಸ್ಥಳಾಂತರಗೊಂಡಿದೆ.

ತೆರಿಗೆ ಕಡಿತ ಬೇಡಿಕೆಯನ್ನು ಹೆಚ್ಚಿಸುತ್ತದೆ ಎಂಬ ಭಾವನೆ ಇರುವಂತಿದೆ. ಆದರೆ ಅದು ಆಗುವ ಲಕ್ಷಣಗಳಂತೂ ಇಲ್ಲ.

‘ಫೆರಾ ತಿದ್ದುಪಡಿ ಉಲ್ಲಂಘನೆಗೆ ನೀಡಿದ ವರ’

-ಎಂ.ಕೆ.ಪಂಧೆ, ಸಿಐಟಿಯು ಅ.ಭಾ.ಪ್ರಧಾನ ಕಾರ್ಯದರ್ಶಿ

ಈ ಬಜೆಟ್ ಬಡವರಿಗೆ ರೊಟ್ಟಿ ಚೂರುಗಳನ್ನು ನೀಡಬಯಸಿದೆ. ಆದರೆ ಈ ತುಣುಕುಗಳು ಬಡವರ ವರೆಗೆ ತಲುಪುವುದೇ ಇಲ್ಲ. ಜಾರಿಮಾಡುವ ಭ್ರಷ್ಟ ಆಡಳಿತದ ಮಂದಿಯೇ ಇದನ್ನು ನುಂಗಿಬಿಡುತ್ತಾರೆ. ಹಾಗೆ ನೋಡಿದರೆ ಈ ಬಜೆಟ್ಟಿನ ನಿಜವಾದ ಒತ್ತು ಶೇರು ಮಾರುಕಟ್ಟೆಯಲ್ಲಿ ಹಣ ಹೂಡುವವರಿಗೆ ಮತ್ತು ದೇಶ ವಿದೇಶಗಳ ದೊಡ್ಡ ಬಂಡವಾಳಗಾರರಿಗೆ ಲಾಭ ಮಾಡಿಕೊಡುವುದು.

ಫೆರಾ ಕಾಯಿದೆಗೆ ತಿದ್ದುಪಡಿ ಮಾಡಿರುವುದು ಈ ಕಾಯಿದೆ ಉಲ್ಲಂಘನೆ ಮಾಡುವವರಿಗೆ ನೀಡಿದ ವರ. ದೇಶದಿಂದ ಸಂಪನ್ಮೂಲಗಳನ್ನು ಗುಟ್ಟಾಗಿ ಹೊರ ಸಾಗಿಸುವುದಕ್ಕೆ ಇದು ಸಹಾಯ ಮಾಡುತ್ತದೆ. ಇತ್ತೀಚೆಗೆ ವ್ಯಾಪಾರೀ ಮಳಿಗೆಗಳ ಮೇಲೆ ಮಾಡಿದ ದಾಳಿ ಈ ಕಾಯಿದೆಯನ್ನು ಇನ್ನೂ ಹೆಚ್ಚು ನಿಷ್ಠುರಗೊಳಿಸುವ ಅವಶ್ಯಕತೆಯನ್ನು ತೋರಿಸಿತ್ತು. ಬದಲಿಗೆ ಇದನ್ನು ಪೂರ್ತಿ ಸಡಿಲಗೊಳಿಸಲಾಗಿದೆ.

ಪ್ರಾವಿಡೆಂಟ್ ಫಂಡನ್ನು ಶೇ8.33 ರಷ್ಟಕ್ಕೆ ಮತ್ತು ಶೇ10 ರಿಂದ 12 ಕ್ಕೆ ಏರಿಸಿರುವುದನ್ನು ದುಡಿವ ಜನ ಖಂಡಿತ ಸ್ವಾಗತಿಸುತ್ತಾರೆ. ಗ್ಯಾಚ್ಯುಟಿ ಮಿತಿಯನ್ನು ಎರಡೂವರೆ ಲಕ್ಷ ರೂಪಾಯಿಗಳಿಗೆ ಏರಿಸಿರುವುದೂ ಸ್ವಾಗತಾರ್ಹ. ಇವು ಟ್ರೇಡ್ ಯೂನಿಯನ್‌ಗಳ ಹಲವು ದಿನಗಳ ಬೇಡಿಕೆಗಳೂ ಆಗಿದ್ದವು. ಈಗಲಾದರೂ ಈಡೇರಿಸುವುದು ಒಳ್ಳೆಯದೇ.

ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 60.000 ರೂಪಾಯಿಗಳಿಗೇರಿಸಿ ಎಂದು ಎಲ್ಲ ಟ್ರೇಡ್ ಯೂನಿಯನ್ನುಗಳು ಒಗ್ಗಟ್ಟಿನಿಂದ ಮಾಡಿದ ಬೇಡಿಕೆಯನ್ನು ಹಣಕಾಸು ಮಂತ್ರಿಗಳು ಕಿವಿ ಹಾಕಿಕೊಂಡಂತಿಲ್ಲ. ಇಲ್ಲಿಯೂ ಕಡಿಮೆ ಆದಾಯದವರಿಗೆ ಬರೀ ಶೇ5 ರಷ್ಟು ತೆರಿಗೆ ಕಡಿತ ಮಾಡಿದರೆ ಹೆಚ್ಚಿನ ಆದಾಯದವರಿಗೆ ಶೇ 10 ರಷ್ಟು ತೆರಿಗೆ ಕಡಿತ.

ಆಮದು ಸುಂಕದಲ್ಲಿನ ಕಡಿತ ದೇಶದ ಕಬ್ಬಿಣ ಉಕ್ಕು ಕೆಲವು ರಾಸಾಯನಿಕಗಳ ಉದ್ದಿಮೆಗಳಲ್ಲಿ ಸಮಸ್ಯೆಯುಂಟು ಮಾಡುತ್ತದೆ. ಹಾಗೆಯೇ ಅಬ್ಕಾರಿ ಸುಂಕಗಳಲ್ಲಿನ ಕಡಿತ ದೇಶದ ಶ್ರೀಮಂತರಿಗೆ ಅನುಕೂಲ ಮಾಡಿಕೊಡುತ್ತದೆ.

ಮಿನಿ ಸಿಗರೇಟುಗಳ ಮೇಲೆ ತೆರಿಗೆಯನ್ನು ತೀವ್ರ ಹೆಚ್ಚಿಸದೇ ಇರುವುದರಿಂದ ಇದು ಬೀಡಿ ಉದ್ಯಮಕ್ಕೆ ಹೊಡೆತ ನೀಡುತ್ತದೆ. ಬೀಡಿ ಉದ್ಯಮದ ಲಕ್ಷಾಂತರ ಕಾರ್ಮಿಕರನ್ನು ಇದು ತಟ್ಟುತ್ತದೆ.

ಬಜೆಟ್ ಉದ್ಯೋಗಗಳನ್ನು ಹೆಚ್ಚಿಸುವ ಮಾತನಾಡುತ್ತದೆ. ಆದರೆ ಎಲ್ಲ ಕಡೆ ಉದ್ಯೋಗಗಳನ್ನು ಕಡಿಮೆ ಮಾಡುತ್ತಿರುವುದರಿಂದ ಇದು ಆಗುವುದಿಲ್ಲ.

ಬಡತನ ಇನ್ನೂ ಹೆಚ್ಚಾಗುತ್ತದೆ.

ಸ್ವಯಂ ಘೋಷಣಾ ಯೋಜನೆ (ಹಗರಣ)

ಇದು ಬಜೆಟ್ಟಿನಲ್ಲಿ ಪಿ.ಚಿದಂಬರಂ ಘೋಷಿಸಿದ ಯೋಜನೆ. ಹಿಂದೆಲ್ಲ ಸರಕಾರದ ಕಣ್ಣು ತಪ್ಪಿಸಿತೆರಿಗೆತೆರದೆ ಯಾವ್ಯಾವುದೋ ರೀತಿಯಲ್ಲಿ ಸಂಗ್ರಹಿಸಿದ ಹಣವಿದ್ದವ ರನ್ನು ಒಂದು ಸಂಭಾವಿತ ಸರ್ಕಾರ ಏನು ಮಾಡುತ್ತದೆ? ಅಂತಹವರನ್ನು ಹಿಡಿದು ಶಿಕ್ಷಿಸುವುದು ನ್ಯಾಯ ಅಲ್ಲವೇ?

ಆದರೆ ಚಿದಂಬರಂ ಅವರ ಈ ಯೋಜನೆಯಂತೆ ಅಪಾರ ಕಳ್ಳ ಹಣವಿದ್ದವರು ತಮ್ಮಲ್ಲಿ ಇಷ್ಟು ಕಳ್ಳ ಹಣವಿದೆ ಎಂದು ಘೋಷಿಸಿ ಶೇ 30 ರಷ್ಟು ತೆರಿಗೆ ತೆತ್ತರೆ ಆಯಿತು. ಯಾರೂ ಏನೂ ಕೇಳುವುದಿಲ್ಲ. ಎಲ್ಲ ಸುರಳೀತ. ಕಪ್ಪು ಹಣ ಬಿಳಿಯಾಗಿ ಬಿಡುತ್ತದೆ. ಹೇಗಿದೆ ಈ ಯೋಜನೆ?

ಬೂರ್ಝ್ವಾ ಅರ್ಥಶಾಸ್ತ್ರಜ್ಞರೂ ಇದನ್ನು ಅನ್ಯಾಯದ ಕ್ರಮವೆಂದು ಟೀಕಿಸುತ್ತಿದ್ದಾರೆ. ಯಾಕೆಂದರೆ ಇಂತಹ ಯೋಜನೆಗಳು ಜನರಿಗೆ ನೀಡುವ ಸಂದೇಶ -‘ತೆರಿಗೆ ತಪ್ಪಿಸಿ ಕಳ್ಳಹಣ ಮಾಡಿಕೊಂಡಿದ್ದರೆ ಅದೂ ಸರಿ. ಮುಂ ದೊಂದು ದಿನ ಇಂತಹ ಯೋಜನೆ ಬರುತ್ತದೆ, ಆಗ ಘೋಷಿಸಿದರಾಯಿತು. ತಪ್ಪಿಸಿಕೊಳ್ಳಬಹುದು’ ಎಂದು.

1992ರ ಶೇರು ಹಗರಣದಿಂದ ಹಣ ಮಾಡಿಕೊಂಡ ವರಿಗೂ ಈ ಕ್ಷಮಾದಾನ ದೊರೆಯುತ್ತದೆಯೇ?ಗೊತ್ತಿಲ್ಲ.

1986-87 ಮತ್ತು 1991-92 ರಲ್ಲೂ ಇಂತಹ ಯೋಜನೆಗಳನ್ನು ಘೋಷಿಸಲಾಗಿತ್ತು. ಆಗ ನಿಜವಾಗಿ ಮಾಡಿದ ತೆರಿಗೆ ಲೆಕ್ಕಾಚಾರವನ್ನು ಬದಿಗಿರಿಸಿ ಕ್ಷಮಾದಾನ ನೀಡಲಾಗಿತ್ತು. ಈಗಲೂ ಅದನ್ನೇ ಮಾಡಲಾಗುವುದೇ?

ಹಿಂದೆ ಇಂತಹ ತೆರಿಗೆ ಕಳ್ಳರಿಗೆ ಕ್ಷಮಾದಾನ ನೀಡಿದ್ದರಿಂದ ಇನ್ನೊಂದು ಸಮಸ್ಯೆಯೂ ಉಂಟಾಯಿತು. ಇವರು ವಿದೇಶದಲ್ಲೂ ಹಣ ಹೊಂದಿದವರಾಗಿದ್ದರು. ಆದರೆ ಅಲ್ಲಿ ವಿಚಾರಣೆ ಮಾಡಿಸುವುದಾಗಲೀ ಅವರ ಆಸ್ತಿಗಳ ತನಿಖೆ ಮಾಡುವುದಾಗಲೀ ಸಾಧ್ಯವಾಗಲಿಲ್ಲ. ಯಾಕೆಂದರೆ ಅಂತರ್‌ರಾಷ್ಟ್ರೀಯ ಕಾನೂನಿನ ಪ್ರಕಾರ ಇಂತಹ ತನಿಖೆ ನಡೆಸಬೇಕಾದರೆ ವ್ಯಕ್ತಿ ಶಿಕ್ಷಾರ್ಹನೆಂದು ಪರಿಗಣಿಸಬೇಕು. ಅದಿಲ್ಲದೆ ಏನೂ ಮಾಡುವಂತಿಲ್ಲ. ಆದ್ದರಿಂದ ಕ್ಷಮಾದಾನ ಪಡೆವರಿಗೆ ಏನೂ ಮಾಡಲಿಲ್ಲ. ಹೀಗೆ ಕ್ಷಮಾದಾನ ಮಾಡುವುದೇ ಒಂದು ಹಗರಣವಲ್ಲವೇ? ಪ್ರಾಮಾಣಿಕವಾಗಿ ತೆರಿಗೆ ತೆತ್ತವರನ್ನು ಕಡೆಗಣಿಸಿ ತೆರಿಗೆ ಕಳ್ಳರಿಗೆ ಮಣೆ ಹಾಕಿದಂತಲ್ಲವೇ?

1997-98ರ ಬಜೆಟ್ಟಿನಲ್ಲಿ

ರೂಪಾಯಿ ಹೇಗೆ ಬರುತ್ತದೆ(ಆಯ)	
ವಿದೇಶಿ ಸಾಲ	1 ಪೈಸೆ
ಆಂತರಿಕ ಸಾಲ	23 ಪೈಸೆ
ಸಾಲೇತರ ಬಂಡವಾಳ ಆಯ	5ಪೈಸೆ
ತೆರಿಗೆಯೇತರ ಕಂದಾಯ	15 ಪೈಸೆ
ಇತರ ತೆರಿಗೆ	2 ಪೈಸೆ
ಕಂಪನಿಗಳ ಮೇಲಿನ ತೆರಿಗೆ	8 ಪೈಸೆ
ಆದಾಯ ತೆರಿಗೆ	8 ಪೈಸೆ
ಆಮದು ಸುಂಕ	19 ಪೈಸೆ
ಅಬ್ಕಾರಿ ಸುಂಕ	19 ಪೈಸೆ
1996-97ರ ಬಜೆಟ್ ಅಂದಾಜು	198082
1996-97ರ ಪರಿಷ್ಕೃತ ಅಂದಾಜು	195398
1997-98ರ ಬಜೆಟ್ ಅಂದಾಜು	232176

ರೂಪಾಯಿ ಹೇಗೆ ಹೋಗುತ್ತದೆ(ವ್ಯಯ)	
ರಾಜ್ಯ, ಕೇಂದ್ರಾಡಳಿತ ಪ್ರದೇಶಗಳ ಸರಕಾರಗಳಿಗೆ ಯೋಜನೇತರ ನೆರವು	6 ಪೈಸೆ
ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯಗಳ ಪಾಲು	15 ಪೈಸೆ
ಇತರ ಯೋಜನೇತರ ವೆಚ್ಚ	11ಪೈಸೆ
ಸಹಾಯ ಧನಗಳು	7 ಪೈಸೆ
ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಯೋಜನಾ ನೆರವು	10 ಪೈಸೆ
ಕೇಂದ್ರ ಯೋಜನಾ ವೆಚ್ಚ	13 ಪೈಸೆ
ಬಡ್ಡಿ	25 ಪೈಸೆ
ರಕ್ಷಣಾ ವೆಚ್ಚ	13 ಪೈಸೆ
1996-97ರ ಬಜೆಟ್ ಅಂದಾಜು	204660
1996-97ರ ಪರಿಷ್ಕೃತ ಅಂದಾಜು	202296
1997-98ರ ಬಜೆಟ್ ಅಂದಾಜು	232176

ಕಳ್ಳರಿಗೆ ರಿಯಾಯಿತಿ: ಕಳ್ಳ ನ್ಯಾಯ

ನ್ಯಾಯವೇ ಕಳ್ಳನಾದರೆ ಏನು ಮಾಡುವುದು. ಕೇಂದ್ರ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರು ಮಂಡಿಸಿರುವ ಬಜೆಟ್ಟಿನಲ್ಲಿ ಇಂತಹದ್ದೇ ನ್ಯಾಯವಿರುವುದು. ಯಾಕೆಂದರೆ ಇದು ಶ್ರೀಮಂತರ ಪರವಾದ ಬಜೆಟ್. ಈ ಬಜೆಟ್ಟಿನಲ್ಲಿನ ಆಶಯ ಯಾವುದೇ ತಳಹದಿ ಇಲ್ಲದ್ದು.

ಶ್ರೀಮಂತರ ಮೇಲಿನ ತೆರಿಗೆಯನ್ನು ತೀವ್ರವಾಗಿ ಕಡಿಮೆ ಮಾಡಲಾಗಿದೆ. ಇದರ ಹಿಂದಿನ ಉದ್ದೇಶವೆಂದರೆ ತೆರಿಗೆ ಕಡಿಮೆ ಮಾಡುವುದರಿಂದ ಹೆಚ್ಚೆಚ್ಚು ಜನ ತೆರಿಗೆ ತೆರುತ್ತಾರೆ, ಆದ್ದರಿಂದ ತೆರಿಗೆ ಸಂಗ್ರಹಣೆ ಹೆಚ್ಚಾಗುತ್ತದೆ ಎಂಬುದು. ಆದರೆ ಇದು ನಿಜವಾಗಿ ಆಗುತ್ತದೆಯೇ?

ಖ್ಯಾತ ತೆರಿಗೆ ಸಲಹೆಗಾರರಾದ ರಾಮ್ ನಿವಾಸ್ ಲಖೋಟಿಯಾರ ಪ್ರಕಾರ ತೆರಿಗೆ ಕಡಿಮೆ ಮಾಡಿದಾಗ ತೆರಿಗೆ ತೆರುವುದು ಹೆಚ್ಚು ವಿಧೇಯವಾಗಿ ತೆರಿಗೆ ತೆರಬಹುದು. ಆದರೆ ಅದಕ್ಕೆ ಸರಿಯಾದ ನಿಗಾ ವ್ಯವಸ್ಥೆ ಆಗಬೇಕು. ತೆರಿಗೆ ಉಲ್ಲಂಘನೆಗೆ ನಿಷ್ಠುರ ಶಿಕ್ಷೆಯಾಗಬೇಕು. ಆಗ ಮಾತ್ರ ಹೆಚ್ಚು ತೆರಿಗೆ ಸಂಗ್ರಹಣೆ ಸಾಧ್ಯ.

ದೆಹಲಿಯ ಜವಹರ್‌ಲಾಲ್ ನೆಹರು ವಿಶ್ವವಿದ್ಯಾಲಯದ ಪ್ರೊ. ದೀಪಕ್ ನಯ್ಯಾರ್ ಅವರ ಪ್ರಕಾರ ಹಿಂದಿನ ಅನುಭವದಿಂದ ತೆರಿಗೆ ದರ ಕಡಿಮೆಯಾದರೆ ಕಪ್ಪು ಹಣ ಕಡಿಮೆ ಆಗುತ್ತದೆಂಬುದೇನೂ ಸಿದ್ಧವಾಗಿಲ್ಲ.

ದೆಹಲಿಯ ಆದಾಯ ತೆರಿಗೆ ಕಮಿಷನರ್ ಎ.ಕೆ.ಬಟಾಬ್ಯಾಲರ ಪ್ರಕಾರ ಇಂತಹ ತೆರಿಗೆ ಕಡಿತದಿಂದ ಕಪ್ಪುಹಣದ ಬೆಳವಣಿಗೆ ತಡೆಯಬಹುದೆಂಬ ಬಗ್ಗೆ ಯಾವುದೇ ಅಧ್ಯಯನವಿಲ್ಲ. ಅವರು ಭಾರತದ ಉದಾಹರಣೆಯನ್ನೇ ನೀಡುತ್ತಾರೆ. ಕಳೆದ ಮೂರು ದಶಕಗಳಲ್ಲಿ ಭಾರತದಲ್ಲಿ ತೆರಿಗೆ ಶೇ97 ರಿಂದ ಶೇ40 ಕ್ಕೆ ಇಳಿದಿದೆ. ಆದರೂ ಕಪ್ಪುಹಣ ಹೆಚ್ಚುತ್ತಲೇ ಇದೆಯೇ ಹೊರತು ಕಡಿಮೆಯಾಗಿಲ್ಲ.

ಕೇಂದ್ರ ಹಣಕಾಸು ಮಂತ್ರಿಗಳು ಯಾರಿಗೆ ಮೋಸ ಮಾಡಬಯಸುತ್ತಾರೆ?

ವಾರದ ಆರ್ಥಿಕ ಟಿಪ್ಪಣಿಗಳು

ಬಜೆಟ್ 1997-98

ಡಿ.ಎಸ್.ಮಣಿ

ಬಜೆಟ್ 1997-98ರ ಮುಖ್ಯ ಪ್ರಸ್ತಾವಗಳು

ನೇರ ತೆರಿಗೆಗಳು

- ☐ ಆದಾಯ ಕರವನ್ನು ಬೇರೆ ಬೇರೆ ಆದಾಯ ಹಂತಗಳಿಗೆ ಈಗಿನ ಶೇ 15, 30 ಮತ್ತು 40 ರಿಂದ ಶೇ 10, 20, ಮತ್ತು 30ಕ್ಕೆ ಇಳಿಸಲಾಗಿದೆ.
- ☐ ಸಂಬಳದಾರರಿಗೆ ಸ್ಟಾಂಡರ್ಡ್ ಡಿಡಕ್ಷನ್ ಅನ್ನು 18,000ದಿಂದ 20,000ರೂಗಳಿಗೆ ಏರಿಸಲಾಗಿದೆ. ಅಂದರೆ ವರ್ಷಕ್ಕೆ 75,000 ರೂಪಾಯಿಗಳವರೆಗೆ ಆದಾಯವಿರುವವರಿಗೆ ತೆರಿಗೆ ಇರುವುದಿಲ್ಲ.
- ☐ ನಗರ ಪ್ರದೇಶಗಳಲ್ಲಿ ಫೋನ್, ಕಾರು, ಮನೆಗಳ ಮಾಲಿಕತ್ವ ಹೊಂದಿರುವವರು ಯಾ ವಿದೇಶ ಪ್ರಯಾಣ ಕೈಗೊಂಡವರು ತೆರಿಗೆ ಬಲೆಗೆ ಬೀಳಲಿದ್ದಾರೆ.(ಈಗ ತೆರಿಗೆ ತೆರದೇ ಇದ್ದರೆ)
- ☐ ಸ್ವಯಂ ಘೋಷಣಾ ಯೋಜನೆಯಿಂದ ಕಪ್ಪು ಹಣದ ಬಳಕೆಗೆ ಯತ್ನ.
- ☐ ಕಂಪನಿ ತೆರಿಗೆಗಳ ಮೇಲೆ ಸರ್ಚಾರ್ಜ್ ತೆಗೆದುಹಾಕಲಾಗಿದೆ.
- ☐ ಕನಿಷ್ಟ ಪರ್ಯಾಯ ತೆರಿಗೆ ಮುಂದುವರಿಯುತ್ತದೆ. ಆದರೆ ರಫ್ತಿನಿಂದ ಬರುವ ಲಾಭಕ್ಕೆ ಇದು ಅನ್ವಯವಾಗುವುದಿಲ್ಲ.
- ☐ ದೇಶೀ ಮತ್ತು ವಿದೇಶಿ ಕಂಪನಿಗಳ ಮೇಲಿನ ತೆರಿಗೆ ದರದಲ್ಲಿ ಕಡಿತ.

ಪರೋಕ್ಷ ತೆರಿಗೆಗಳು

- ☐ ಆಮದು ಸುಂಕದ ಗರಿಷ್ಟ ದರವನ್ನು ಈಗಿನ ಶೇ 50 ರಿಂದ ಶೇ 40 ಕ್ಕೆ ಇಳಿಸಲಾಗಿದೆ.
- ☐ ಬಂಡವಾಳ ಸರಕುಗಳು ಮತ್ತು ಉಕ್ಕು ಹೂಡುವಳಿಯ ಮೇಲಿನ ಆಮದು ಸುಂಕ ಕಡಿತ. ಜವಳಿ ಯಂತ್ರಗಳ ಮೇಲಿನ ಆಮದು ಸುಂಕ ಕಡಿತ.
- ☐ ಕಂಪ್ಯೂಟರ್, ಟೆಲಿವಿಷನ್, ಟೆಲಿಕಾಂ ಯಂತ್ರೋಪಕರಣಗಳ ಮೇಲೆ ಕಡಿಮೆ ಸುಂಕ.
- ☐ ಸಿಗರೇಟು, ಬೀಡಿಗಳ ಮೇಲೆ ಹೆಚ್ಚಿನ ಸುಂಕ.
- ☐ ಅಬ್ಕಾರಿ ದರದ ನಿಷ್ಕರ್ಷೆ.
- ☐ ರಪ್ತೆಸಾರಿಗೆ ಸರಕುಗಳ ಮೇಲೆ ಸೇವಾ ತೆರಿಗೆ
- ☐ ಪ್ರಸಾಧನ, ಕೋಕೋ, ಕಾಫಿ, ಪೇಯಗಳು ಮತ್ತು ವಾಚುಗಳ ಮೇಲಿನ ಸುಂಕ ಕಡಿತ.
- ☐ ಸಣ್ಣ ಕೈಗಾರಿಕೆಗಳಿಗೆಸರಳೀಕೃತ ಅಬ್ಕಾರಿ ಸುಂಕ.
- ☐ ಅಂತರ್ರಚನಾ ಸೌಕರ್ಯಗಳಿಗೆ ಸಂಪನ್ಮೂಲ ಸಂಗ್ರಹಿಸುವ ನವೀನ ಯೋಜನೆಗಳು.
- ☐ ತೈಲ ಶೋಧನೆ ಮತ್ತು ಔದ್ಯಮಿಕ ಉದ್ಯಮಗಳನ್ನು ಅಂತರ್ರಚನಾ ಸೌಕರ್ಯಗಳೆಂದು ಪರಿಗಣನೆ.
- ☐ ಕಂಪ್ಯೂಟರ್ ಸಾಫ್ಟ್‌ವೇರ್‌ಗಳಿಗೆ ಪೂರ್ಣ ಅಬ್ಕಾರಿ ಸುಂಕ ವಿನಾಯ್ತಿ.
- ☐ ಟೆಲಿಕಾಂ ಯಂತ್ರೋಪಕರಣಗಳ ಮೇಲಿನ ಸುಂಕ ಶೇ40 ರಿಂದ ಶೇ30ಕ್ಕೆ ಕಡಿತ.
- ☐ ವೈದ್ಯಕೀಯ ಯಂತ್ರೋಪಕರಣಗಳ ಮೇಲೆ ಶೇ 20 ರಷ್ಟು ಸುಂಕ ಕಡಿತ, ಹೊಮಿಯೊಪತಿ ಔಷಧಗಳ ಮೇಲಿನ ಸುಂಕ ಶೇ25 ರಿಂದ ಶೇ20 ಕ್ಕೆ ಕಡಿತ.
- ☐ ವಿದೇಶಿ ಪ್ರವಾಸಿಗರು ಉಪಯೋಗಿಸಬಹುದಾದ ವಿಶೇಷ ಆಹಾರಗಳ ಮೇಲಿನ ಆಮದು ಸುಂಕ ಕಡಿತ.
- ☐ ಸಿನಿಮಾ ಫಿಲ್ಮಿನ ಮೇಲೆ ಶೇ25 ರಷ್ಟು ಸುಂಕ ಕಡಿತ.
- ☐ ಜವಳಿ ಯಂತ್ರೋಪಕರಣ ಮತ್ತು ಬಿಡಿ ಭಾಗಗಳ ಮೇಲೆ ರಿಯಾಯಿತಿ ಸುಂಕ.
- ☐ ಬಣ್ಣ, ಪೇಂಟ್, ವಾರ್ನಿಷ್‌ಗಳ ಮೇಲಿನ ಸುಂಕ ಕಡಿತ.
- ☐ ವಾಚ್ ಬಿಡಿಭಾಗಗಳ ಮೇಲಿನ ಸುಂಕ ಕಡಿತ.
- ☐ ಬಿಸ್ಕಟ್, ಸಕ್ಕರೆ ಮಿಠಾಯಿ, ಸಾಬೂನು, ಪೇಸ್ಟ್ ಇತ್ಯಾದಿಗಳ ಮೇಲೆ ಸುಂಕ ಕಡಿತ.
- ☐ ಪಾಲಿಯಸ್ಟರ್ ಫಿಲಾಮೆಂಟ್, ಹವಾನಿಯಂತ್ರಣ ಯಂತ್ರ, ಸೌಂದರ್ಯ ಪ್ರಸಾಧನಗಳ ಮೇಲೆ ಸುಂಕ ಕಡಿತ

ಈ ಆಮದು ಸುಂಕಗಳ ಕಡಿತದಿಂದ ಆಗುವ ಒಟ್ಟು ನಷ್ಟ 2625 ಕೋಟಿ ರೂಪಾಯಿಗಳು.

ದೇಶದೊಳಗೆ ವಿಶ್ವ

ವಿದ್ಯುತ್ತಿಗಾಗಿ ರೈತರ ಧೀಮಂತ ಹೋರಾಟ

ಕುರುಕ್ಷೇತ್ರವಾಗಿರುವ ರಾಜಸ್ಥಾನ ರಾಜಧಾನಿ

ಮರಳುಗಾಡಿನ ನಾಡಿನಿಂದ ಸ್ಫೂರ್ತಿದಾಯಕ ಸಂಘರ್ಷದ ಸುದ್ದಿಯಿದು.

ರಾಜಸ್ಥಾನದ ಬಿಜೆಪಿ ಸರಕಾರದಿಂದ ದೇಶದ ಬೆನ್ನೆಲುಬು ಆದ ರೈತಾಪಿ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಿ ಅಲ್ಲಿನ ರೈತರು ತೀಕ್ಷ್ಣವಾದ ಹೋರಾಟದ ಕಣಕ್ಕೆ ಇಳಿದಿದ್ದಾರೆ.

ತೆಲಂಗಾಣ, ತೇಭಾಗ, ಪುನ್ನಪ್ರ-ಸಮಬಾದ್ ಕಯ್ಯೂರು ನಂಥ ಧೀಮಂತ ಕರ್ಷಕ ಸಂಘರ್ಷದ ಪರಂಪರೆಯಲ್ಲಿ ಬೆಳದ ಅಖಿಲಭಾರತ ಕಿಸಾನ್ ಸಭಾ(ಎಐಕೆಎಸ್) ರಾಜ್ಯ ಘಟಕದ ನೇತೃತ್ವದಲ್ಲಿ ಈ ಸಮರ ನಡೆದಿದೆ.

ಎಐಕೆಎಸ್ ರಾಜಸ್ಥಾನ ರಾಜ್ಯ ಸಮಿತಿಯ ಕರೆಯ ಮೇರೆಗೆ ಸುಮಾರು 30 ಸಾವಿರ ರೈತರು ರಾಜ್ಯದೆಲ್ಲೆಡೆಯಿಂದ ಫೆಬ್ರವರಿ 25 ರಂದು ರಾಜಧಾನಿ ಜಯಪುರಕ್ಕೆ ಲಗ್ಗೆ ಹಾಕಿದರು. ರಾಜ್ಯ ವಿಧಾನ ಸಭೆಯ ಮುಂದಿರುವ ಪ್ರತಿಮೆ ಚೌಕವನ್ನು ಮುತ್ತಿರುವ ಅನ್ನದಾತರು ಮುತ್ತಿಗೆಯನ್ನು ಇನ್ನೂ ತೆರವು ಮಾಡಿರಲಿಲ್ಲ ಎಂಬುದನ್ನು ಈಚೆಗೆ ಸಿಕ್ಕಿರುವ ವರದಿಗಳು ದೃಢಪಡಿಸಿವೆ.

ಸುಮಾರು 50 ಲಕ್ಷ ಎಕರೆ ಜಮೀನನಲ್ಲಿರುವ ಐದು ಲಕ್ಷ ಕೊಳವೆ ಬಾವಿಗಳು ಸಮರ್ಪಕ ವಿದ್ಯುತ್ ಪೂರೈಕೆ ಇಲ್ಲದೆ ನಲುಗುತ್ತಿವೆ. ಹೀಗಾಗಿ ಅಪಾರ ಪ್ರಮಾಣದ ರಾಬಿ ಬೆಳೆಗಳು ನಾಶದ ಅಂಚಿನಲ್ಲಿವೆ. ರೈತರು ಇಷ್ಟೊಂದು ತೀಕ್ಷ್ಣ ರೀತಿಯ ಹೋರಾಟಕ್ಕೆ ಇಳಿಯಲು ಮುಖ್ಯ ಕಾರಣ ಇದೇ ಆಗಿದೆ.

ವಿದ್ಯುತ್ ಸರಬರಾಜಿಲ್ಲದೆ ಬೆಳೆಗಳಿಗೆ ನೀರಿಲ್ಲ. ಪೈರಲ್ಲಾ ಒಣಗಿ ಹಾಳಾಗುತ್ತಿವೆ. ರೈತರ, ಕೃಷಿ ಕೂಲಿಕಾರರ ಬಾಳು ಬರಡಾಗುತ್ತಿದೆ. ಪ್ರಮುಖವಾಗಿ ಈ ಪ್ರಶ್ನೆ ಹಾಗೂ ಇನ್ನು ಹಲವಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟವನ್ನು ರೂಪಿಸಲಾಗಿದೆ.

ರೈತರ ಕೊಳವೆ ಬಾವಿಗಳನ್ನು ನಿರ್ವಹಿಸಲು ದಿನಕ್ಕೆ ಕನಿಷ್ಠ 12 ಗಂಟೆ ಕಾಲ ವಿದ್ಯುತ್ ಸರಬರಾಜು ಮಾಡಬೇಕೆನ್ನುವುದು ರೈತರ ಪ್ರಮುಖ ಬೇಡಿಕೆಯಾಗಿವೆ. 45 ಬಿಘ್‌ವರೆಗಿನ ಜಮೀನು ಹೊಂದಿರುವ ರೈತರಿಗೆ ಪುಕ್ಕಟ್ಟೆಯಾಗಿ ವಿದ್ಯುತ್ ಸರಬರಾಜು ಮಾಡಬೇಕು, ಪಟ್ಟಣದ ವಿದ್ಯಾರ್ಥಿಗಳು ಓದಲು ಹೇಗೆ ಅನುಕೂಲವಿದೆಯೋ ಅದೇ ರೀತಿ ಹಳ್ಳಿ ವಿದ್ಯಾರ್ಥಿಗಳು ಕೂಡ ಓದಲು ಅನುಕೂಲವಾಗುವಂತೆ ರಾತ್ರಿ ವೇಳೆಯಲ್ಲಿ ಸೂಕ್ತವಾಗಿ ವಿದ್ಯುತ್ ಸರಬರಾಜು ಮಾಡಬೇಕು ಎಂಬುದು ಇನ್ನಿತರ ಕೆಲವು ಬೇಡಿಕೆಗಳು.

ರಾಜ್ಯ ವಿದ್ಯುತ್ ಮಂಡಲಿಯನ್ನು ಭ್ರಷ್ಟ ಮುಕ್ತಗೊಳಿಸಿ ಭ್ರಷ್ಟ ಅಧಿಕಾರಿಗಳಿಂದ ರೈತರನ್ನು ಪಾರು ಮಾಡಬೇಕು ಎಂದು ರೈತಸಂಘ ಆಗ್ರಹಿಸಿದೆ.

ಸುದೀರ್ಘ ಹೋರಾಟದ ಮೊದಲ ದಿನದಂದು ಬೃಹತ್‌ರ‍್ಯಾಲಿಯೊಂದು ನಡೆಯಿತು. ಜೀವಂತ ದಂತಕತೆ ಆಗಿರುವ ಸಿಕಾರ್‌ನ ರೈತ ಧುರೀಣ, ಎಐಕೆಎಸ್ ರಾಜ್ಯ ಅಧ್ಯಕ್ಷ ತ್ರಿಲೋಕ್‌ಸಿಂಗ್ ರ‍್ಯಾಲಿಯ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜಂಟಿ ಕಾರ್ಯದರ್ಶಿ ಸುನೀತ್ ಚೋಪ್ರಾ, ರಾಜ್ಯ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಛವೋಪತ್ ಸಿಂಗ್, ಉಪಾಧ್ಯಕ್ಷ ಹಾಗೂ ಶಾಸಕ ಅಮ್ರರಾವಲ್, ರಾಜ್ಯ ಸರಕಾರಿ ನೌಕರರ ಸಂಘದ ಮುಖಂಡ ಉದಯ ಸಿಂಗ್ ರಾಥೋಡ್, ದುಲಿಚಾಂದ್ ಮೀನಾ ಮತ್ತಿತರ ಮುಖಂಡರು ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು.

ಪೊಳ್ಳು ಆಶ್ವಾಸನೆಗಳಿಗೆ ಮರುಳಾಗಬೇಡಿ - ಚೋಪ್ರಾ

ಭಾರತೀಯ ಜನತಾ ಪಕ್ಷದ ಪೊಳ್ಳು ಆಶ್ವಾಸನೆಗಳಿಗೆ ಮರುಳಾಗಬೇಡಿ ಎಂದು ಕಾ|| ಸುನೀತ್ ಚೋಪ್ರಾ ರೈತರಿಗೆ ಕರೆ ನೀಡಿದರು. ರಾಜ್ಯದ ಬಿಜೆಪಿ ಸರಕಾರ ವಿದ್ಯುತ್ ದರವನ್ನು ಸಿಕ್ಕಾಪಟ್ಟೆ ಏರಿಸಿದೆ. ತೀರಾ ಅಗತ್ಯವಿರುವ ರೈತರಿಗೆ ವಿದ್ಯುತ್ ಸರಬರಾಜು ಮಾಡಲು ಅದು ವಿಫಲವಾಗಿದೆ. ಪಂಜಾಬಿನಲ್ಲಿ ಉಚಿತವಾಗಿ ವಿದ್ಯುತ್ ಪೂರೈಕೆ ಮಾಡುವುದಾಗಿ ಅಲ್ಲಿನ ಅಕಾಲಿದಳ-ಬಿಜೆಪಿ ಆಶ್ವಾಸನೆ ನೀಡಿದೆ. ಇದು ವಂಚನೆಯಲ್ಲದೆ ಇನ್ನೇನೂ ಅಲ್ಲ ಎಂದು ಅವರು ಹೇಳಿದರು.

ರಾಬಿ ಬೆಳೆಯೇ ರೈತರ ಜೀವಾಳ ಆಗಿರುವುದರಿಂದ 12 ತಾಸು ವಿದ್ಯುತ್ ಸರಬರಾಜು ಮಾಡಲು ಸರಕಾರ ವಿಫಲವಾಗಿದೆ. ಈ ಸ್ಥಳವನ್ನು ಕುರುಕ್ಷೇತ್ರದ ರಣರಂಗವನ್ನಾಗಿ ಮಾಡುತ್ತೇವೆ ಎಂದು ಛವೋಪತ್ ಸಿಂಗ್ ಘೋಷಿಸಿದರು.

ಮಾತುಕತೆ ವಿಫಲ

'ಐಕ್ಯರಂಗ'ಕ್ಕೆ ಲಭ್ಯವಾಗಿರುವ ಮಾಹಿತಿಯ ಪ್ರಕಾರ ಕೆಂಬಾವುಟ ನೇತೃತ್ವದ ಸಂಘರ್ಷ ಸಂಘಪರಿವಾರ ಸರಕಾರದಲ್ಲಿ ನಡುಕ ಹುಟ್ಟಿಸಿದೆ. ಅದು ರೈತ ಸಂಘದ ನಾಯಕರೊಂದಿಗೆ ಮಾತುಕತೆಯನ್ನು ಆರಂಭಿಸಿದೆ.

ಸಾಮೂಹಿಕ ಧರಣಿ, ಮುತ್ತಿಗೆಯ ಆರನೇ ದಿನ ಅಧಿಕಾರಿಗಳು ನಡೆಸಿದ ಮಾತುಕತೆಯು ವಿಫಲವಾಗಿದೆ.

ಅಪಪ್ರಚಾರ

ನಗರವಾಸಿಗಳ ವಿರುದ್ಧ ರೈತರು ಹೋರಾಟ ನಡೆಸುತ್ತಿದ್ದಾರೆ ಎಂಬ ರೀತಿಯ ಅಭಿಪ್ರಾಯವನ್ನು ಹುಟ್ಟಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ಕಾ|| ಛವೋಪತ್ ಸಿಂಗ್ ಮತ್ತು ಅಮ್ರರಾವಲ್ ಆಪಾದಿಸಿದ್ದಾರೆ. ನಗರವಾಸಿಗಳು ಕೂಡಾ ಹಳ್ಳಿಗಾಡಿನಲ್ಲಿ ರೈತರು ಬೆಳೆಯುವ ಫಸಲನ್ನೇ ಅವಲಂಬಿಸಿದ್ದಾರೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳ ಬೇಕಾಗಿದೆ.

ರಾಜಸ್ಥಾನ ಮುಖ್ಯಮಂತ್ರಿ ಭೈರನ್ ಸಿಂಗ್ ಶೆಖಾವತ್ ಪಂಜಾಬ್ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್‌ರೊಂದಿಗಿನ ಗೆಳತನವನ್ನು ಬಳಸಿಕೊಂಡು ಪಂಜಾಬಿನ ಹೆಚ್ಚುವರಿ ನೀರು ಹಾಗೂ ವಿದ್ಯುತ್ ರಾಜಸ್ಥಾನಕ್ಕೆ ದೊರೆಯುವಂತೆ ಮಾಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಒಂದೆಡೆ ಪಂಜಾಬಿನಲ್ಲಿ ಬೆಳೆದು ನಿಂತ ಗೋಧಿ ಪೈರಿಗೆ ಸತ್ಲೆಜಾ, ರಾವಿ ಮತ್ತು ಬಿಯಾಸ್ ನದಿಗಳಿಂದ ಸಾಕಷ್ಟು ನೀರು ಸಿಗುತ್ತಿದೆ. ಆದರೆ ಇನ್ನೊಂದೆಡೆ ಇಂದಿರಾಗಾಂಧಿ ಕಾಲುವೆ, ಗಂಗಾ ಕಾಲುವೆ ಮತ್ತು ಭಾಕ್ರಾಗಳಿಂದ ರಾಜಸ್ಥಾನಕ್ಕೆ ಬಿಡುವ ನೀರಿನ ಪ್ರಮಾಣವನ್ನು ಪಂಜಾಬ್ ಕಡಿಮೆ ಮಾಡಿದೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಕೆಂಪುಕಲ್ಲಿನ ಸುಂದರ ಕಟ್ಟಡಗಳ ನಗರದಲ್ಲಿ ಕೆಂಬಾವುಟದ ಸಾಗರ ಹೊಸ ಸ್ಫೂರ್ತಿಯನ್ನು ಹುಟ್ಟಿಸಿದೆ. ಅದು ಇಡೀ ರಾಜ್ಯದಲ್ಲಿ ಹೋರಾಟದ ಕಿಚ್ಚನ್ನು ಹಚ್ಚಲಿದೆ.

ಕೇರಳ ಸುದ್ದಿಗಳು

ಕೃಷಿ ಕಾರ್ಮಿಕರಿಗೆ ಬೋನಸ್

ಕೇರಳದ ಎಲ್.ಡಿ.ಎಫ್. ಸರಕಾರ ಕೃಷಿ ಕಾರ್ಮಿಕರಿಗೆ ಬೋನಸ್ ನೀಡುವ ಒಂದು ಹೊಸ ಯೋಜನೆಯನ್ನು ಆರಂಭಿಸುವ ಯೋಜನೆ ಹಾಕಿಕೊಂಡಿದೆ ಎಂದು ರಾಜ್ಯ ಕೃಷಿ ಮಂತ್ರಿಗಳು ಹೇಳಿದರು. ರಾಜ್ಯಾದ್ಯಂತ 1000 ಕೃಷಿ ಯಂತ್ರ ಸೇವಾ ಕೇಂದ್ರಗಳ ಒಂದು ಯೋಜನೆಯನ್ನು ಉದ್ಘಾಟಿಸುತ್ತಾ ಅವರು ಇದನ್ನು ಪ್ರಕಟಿಸಿದರು. ಕೃಷಿ ಭವನಗಳಲ್ಲಿ ದಾಖಲು ಮಾಡಿಕೊಂಡು ದಿನಗೂಲಿಯ ಮೇಲೆ ನಿಯಮಿತವಾಗಿ ಕೃಷಿ ಕೆಲಸ ಮಾಡುವ ಕೃಷಿ ಕಾರ್ಮಿಕರಿಗೆ ಸರಕಾರೀ ನಿಧಿಯಿಂದ ಬೋನಸ್ ನೀಡಲಾಗುವುದು ಎಂದು ಅವರು ಹೇಳಿದರು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಮಿಕರ ಅಭಾವವನ್ನು ನಿವಾರಿಸಲು ಈ ಯೋಜನೆ ನೆರವಾಗುವ ನಿರೀಕ್ಷೆಯಿದೆ.

ಕೇಂದ್ರದ ಅಭಿವೃದ್ಧಿ ಯೋಜನೆಗಳ ಜ್ಯಾರಿ ರಾಜ್ಯಗಳಿಗೆ

ಕೇರಳದ ಸೂಚನೆಗೆ ಸ್ವೀಕೃತಿ

ಕೇಂದ್ರ ಸರಕಾರದಿಂದ ಪ್ರಾಯೋಜಿತ ಸ್ಕೀಮುಗಳ ಹಣ ಮತ್ತು ಅದರ ಅನುಷ್ಠಾನವನ್ನು ರಾಜ್ಯಗಳಿಗೆ ಕೊಡಬೇಕು ಎಂದು ಕೇರಳದ ಮುಖ್ಯಮಂತ್ರಿ ಇ.ಕೆ.ನಾಯನಾರ್ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಯೋಜನಾ ಆಯೋಗಕ್ಕೆ ಸೂಚಿಸಿದ್ದರು. ಈ ಸೂಚನೆಯನ್ನು ಅಂಗೀಕರಿಸಲಾಗಿದೆ ಎಂದು ಯೋಜನಾ ಆಯೋಗ ಕೇರಳ ಸರಕಾರಕ್ಕೆ ತಿಳಿಸಿದೆ. ಈ ಬಗ್ಗೆ ವಿವರಗಳನ್ನು ಮುಂದಿನ ಮುಖ್ಯಮಂತ್ರಿಗಳ ಸಭೆಯಲ್ಲಿ ತಿಳಿಸಲಾಗುವುದು ಎಂದು ಆಯೋಗ ತಿಳಿಸಿದೆ.

ಒ.ಬಿ.ಸಿ. ವರ್ಗಗಳಲ್ಲಿ 'ಕೆನೆ ಪದರ' ಕಾಂಗ್ರೆಸ್(ಐ)ನ ಇಬ್ಬಂದಿತನ

ಕೇರಳದಲ್ಲಿ "ಕೆನೆ ಪದರ"ವನ್ನು ಗುರುತಿಸಲೆಂದು ಒಂದು ಆಯೋಗವನ್ನು ಸುಪ್ರೀಂ ಕೋರ್ಟ್ ನೇಮಿಸಿದೆ. ಈ ಬಗ್ಗೆ ಎ.ಕೆ.ಆಂಟನಿ ಮತ್ತು ಕೆ.ಪಿ.ಸಿ.ಸಿ.(ಐ) ಅಲ್ಪಸಂಖ್ಯಾತ ಕೋಮುಗಳ ಮುಖಂಡರನ್ನು ತಪ್ಪುದಾರಿಗೆಳೆಯುವ ಪ್ರಯತ್ನ ನಡೆಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ವಿ.ಎಸ್.ಅಚ್ಯುತಾನಂದನ್ ಹೇಳಿದ್ದಾರೆ.

ಇದೇ ಎ.ಕೆ.ಆಂಟನಿ 1995ರಲ್ಲಿ ಕೇರಳದಲ್ಲಿ ಇತರ ಹಿಂದುಳಿತ ವರ್ಗಗಳಲ್ಲಿ(ಒ.ಬಿ.ಸಿ) "ಕೆನೆ ಪದರ" ಇಲ್ಲ ಎಂದು ಒಂದು ಕಾನೂನು ರೂಪಿಸಿದ್ದರು. ಆದರೆ ನಂತರ ಅವರು ಕೇಂದ್ರ ಮಂತ್ರಿಗಳಾದರೂ ಕೇಂದ್ರ ಸರಕಾರ ಇದನ್ನು ಅನುಮೋದಿಸುವಂತೆ ಮಾಡಲಿಲ್ಲ.

ಸುಪ್ರೀಂ ಕೋರ್ಟಿನ ನಿರ್ದೇಶನ ಕೇರಳದಲ್ಲಿ "ಕೆನೆ ಪದರ"ವನ್ನು ಗುರುತಿಸಲು ನಿಯಮಾವಳಿಗಳನ್ನು ರೂಪಿಸಬೇಕು ಎಂದು ಹೇಳಿದೆ. ಅಂದರೆ ಕೇರಳದಲ್ಲಿ "ಕೆನೆ ಪದರ" ಇದೆ ಎಂದು ಅದು ಒಪ್ಪಿಕೊಂಡಂತಾಯಿತು. ಅಂದರೆ ಆಂಟನಿಯವರ ಮಾತನ್ನೇ ಅಲ್ಲಗಳೆದಂತಾಯಿತು. 50 ವರ್ಷಗಳ ಕಾಂಗ್ರೆಸ್‌ಆಳ್ವಿಕೆ ಬಹುಪಾಲು ಜನರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ದುರ್ಬಲಗೊಳಿಸಿದೆ. ಕೆಲವರನ್ನು ಮಾತ್ರ ಶ್ರೀಮಂತರನ್ನಾಗಿಸಿದೆ. ಜಾತಿ ಮತ್ತು ಕೋಮು ಗುರುತುಗಳ ಗೀಳು ಹಚ್ಚಿಕೊಂಡವರು ಮಾತ್ರ ಈ ಸಾಮಾಜಿಕ ವಾಸ್ತವತೆಯನ್ನು ನಿರ್ಲಕ್ಷಿಸುತ್ತಾರೆ ಎಂದು ಅಚ್ಯುತಾನಂದನ್ ಹೇಳಿದ್ದಾರೆ.

ಕೇರಳ ಸರಕಾರೀ ನೌಕರರಿಗೆ ವೇತನ ಪರಿಷ್ಕರಣೆ ಸಮಿತಿ

ಮೂವರು ಸದಸ್ಯರುಗಳ ಒಂದು ವೇತನ ಪರಿಷ್ಕರಣ ಸಮಿತಿಯನ್ನು ಕೇರಳ ಸರಕಾರ ರಚಿಸಿದ್ದು ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.

ಡಿವೈಎಫ್ಐ ತಾಲ್ಲೂಕು ಸಮ್ಮೇಳನಗಳು

ಬೆಳ್ತಂಗಡಿ: ದ.ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ಡಿವೈಎಫ್ಐ ಸಮಾವೇಶವು ಇತ್ತೀಚೆಗೆ ಬೆಳ್ತಂಗಡಿಯ ಎನ್‌ಜಿಓ ಭವನದಲ್ಲಿ ನಡೆಯಿತು. ಸಮಾವೇಶವು ನೂತನ ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಿತು. ಅಧ್ಯಕ್ಷರಾಗಿ-ಬಿ.ಎಂ.ಭಟ್, ಉಪಾಧ್ಯಕ್ಷರಾಗಿ-ಸೋಮಣ್ಣಗೌಡ, ಕಾರ್ಯದರ್ಶಿ-ಬಾಲಕೃಷ್ಣ ಆಡೆಂಜ, ಸಹಕಾರ್ಯದರ್ಶಿ-ಶ್ಯಾಮರಾಜ್, ಖಜಾಂಚಿ-ಸುಕನ್ಯ ಹರಿದಾಸ್ ಅಲ್ಲದೆ 20 ಸದಸ್ಯರ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿತು.

ದೊಡ್ಡಬಳ್ಳಾಪುರ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದ ಡಿವೈಎಫ್ಐನ 4ನೇ ಸಮ್ಮೇಳನವು ಫೆಬ್ರವರಿ 24ರಂದು ಯಶಸ್ವಿಯಾಗಿ ನಡೆಯಿತು. ಸಮ್ಮೇಳನದ ಉದ್ಘಾಟನೆಯನ್ನು ಎಸ್.ವೈ. ಗುರುಶಾಂತ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಚಲನ ಚಿತ್ರ ನಟರಾದ ಮೈಕೊ ಚಂದ್ರುರವರು ಹಾಗೂ ಕಾಂ. ಗೊಪಾಲ ಕೃಷ್ಣರವರು ಪಾಲ್ಗೊಂಡು ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ಕಾಂ.ಚಂದ್ರು ತೆಜಸ್ವಿ ಶುಭಕೋರಿ ಮಾತನಾಡಿದರು. ವರದಿಯನ್ನು ವೆಂಕಟರೆಡ್ಡಿ ಮಂಡಿಸಿದರು. ವರದಿಯ ಮೇಲಿನ ಚರ್ಚೆಯಲ್ಲಿ ಎಲ್ಲಾ ಘಟಕಗಳ ಪ್ರತಿನಿಧಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕೊನೆಯಲ್ಲಿ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮೈಕೊ ಚಂದ್ರುರವರು ಬಹುಮಾನ ವಿತರಿಸಿದರು. ಕೊನೆಯಲ್ಲಿ ವಿದ್ಯುತ್ ಸಮಸ್ಯೆಯ ವಿರುದ್ಧ, ಕ್ರೀಡಾಂಗಣಕ್ಕಾಗಿ ಒತ್ತಾಯ, ನೀರಿನ ಪೂರೈಕೆಗಾಗಿ ಒತ್ತಾಯಿಸುವ ಕೆಲವು ನಿರ್ಣಯಗಳನ್ನು ಸಮ್ಮೇಳನವು ಕೈಗೊಂಡಿತು.

ನೂತನ ಸಮಿತಿ: ಅಧ್ಯಕ್ಷರು: ಸಂಜೀವಪ್ಪ, ಉಪಾಧ್ಯಕ್ಷರು-ಸನಾತನ ಮೂರ್ತಿ. ಆರ್.ಎಸ್, ಶ್ರೀನಿವಾಸ ಮೂರ್ತಿ ಮತ್ತು ಶಾಂತಮ್ಮ, ಕಾರ್ಯದರ್ಶಿ-ವೆಂಕಟರೆಡ್ಡಿ, ಸಹಕಾರ್ಯದರ್ಶಿಗಳು-ವೆಂಕಟೇಶ್, ಖಜಾಂಚಿ-ಸುರೇಶ್‌ರವರು ನೂತನ ತಾಲ್ಲೂಕು ಸಮಿತಿಗೆ ಆಯ್ಕೆಗೊಂಡಿದ್ದಾರೆ.

ಸಿಂಧನೂರು ಅಂಗನವಾಡಿ ತಾಲ್ಲೂಕು ಸಮ್ಮೇಳನ

ಕಡಿಮೆ ಸಂಬಳದಲ್ಲೇ ಸರಕಾರದ ಎಲ್ಲಾ ಕೆಲಸಗಳನ್ನು ಚಾಚು ತಪ್ಪದೇ ಮಾಡುವ ಅಂಗನವಾಡಿ ನೌಕರರನ್ನು ಸರಕಾರ ಅಂಗನವಾಡಿ ನೌಕರರೆಂದು ಕರೆಯದೇ ಅಂಗನವಾಡಿ ಕಾರ್ಯಕರ್ತೆಯರೆಂದು ಕರೆಯುತ್ತಿದೆ. ಅಂಗನವಾಡಿ ನೌಕರರು ಹಾಗೂ ಕಾರ್ಯಕರ್ತೆ ಎಂಬ ಶಬ್ದಕ್ಕೂ ಬಹಳ ವ್ಯತ್ಯಾಸವಿದೆ. ಬೇರೆ ರಾಜ್ಯಗಳಲ್ಲಿ ಕೊಡುವ ಹೆಚ್ಚಿನ ವೇತನ, ರಜೆ, ಇನ್ನಿತರ ಸೌಲಭ್ಯಗಳನ್ನು ಸರಕಾರ ಒದಗಿಸುವ ತನಕ ಅಂಗನವಾಡಿ ನೌಕರರು ಹೋರಾಟ ಮಾಡಬೇಕೆಂದು ಸಿಪಿಐ(ಎಂ) ಪಕ್ಷದ ಪುರಸಭಾ ಸದಸ್ಯರಾದ ಕಾಂ|| ಶೇಕ್ಷಾ ಬಾವಿ ಸಮ್ಮೇಳನ ಉದ್ಘಾಟಿಸುತ್ತಾ ಮಾತನಾಡಿದರು. ಅಂಗನವಾಡಿ ಕಾರ್ಯಕರ್ತೆಯರನ್ನು ಸರಕಾರ ನೌಕರರೆಂದು ಪರಿಗಣಿಸಿ ಅವರಿಗೆ ಇತರ ರಾಜ್ಯಗಳಂತೆ ಸೌಲಭ್ಯಕೊಡುವ ತನಕ ನೌಕರರು ಹೆಣ್ಣುಮಕ್ಕಳೆನ್ನದೆ ಬೀದಿಗಿಳಿದು ಹೋರಾಟ ಮಾಡಬೇಕೆಂದು ಪುರಸಭಾ ಅಧ್ಯಕ್ಷೆಯಾದ ಜೆ.ಜೆ.ದೇವೀರಮ್ಮ ಮಾತನಾಡಿದರು. ಡಿವೈಎಫ್ಐ ರಾಯಚೂರು ಜಿಲ್ಲಾಧ್ಯಕ್ಷರಾದ ಶರಬಣ್ಣ ನಾಗ್ಲಾಪುರ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಲಿಂಗಪ್ಪ ಮಾತನಾಡಿದರು. ವೇದಿಕೆ ಮೇಲೆ ಅಂಗನವಾಡಿ ನೌಕರರ ಜಿಲ್ಲಾ ಸಂಚಾಲಕ ಎಂ.ಬಿ. ನಾಡಗೌಡ, ಸಿಪಿಐ(ಎಂ) ಪಕ್ಷದ ಪುರಸಭಾ ಸದಸ್ಯರಾದ ಗಂಗೂಬಾಯಿ ಉಪಸ್ಥಿತರಿದ್ದರು. ಅಂಗನವಾಡಿ ನೌಕರರ ತಾಲ್ಲೂಕು ಸಂಚಾಲಕ ಸಿ.ಚಿದಾನಂದದೊರೆ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕು.ವಿದ್ಯಾವತಿ ಸ್ವಾಗತ ಮಾಡಿ, ವಂದನಾರ್ಪಣೆಯನ್ನು ಎಲ್‌ಐಸಿ ಮುಖಂಡ ಚನ್ನಬಸವಯ್ಯ ಮಾಡಿದರು.

ಸಮ್ಮೇಳನದಲ್ಲಿ ನೂತನ ತಾಲ್ಲೂಕು ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ-ವಿದ್ಯಾವತಿ ತುರ್ವಿಹಾಳ, ಗೌರವ ಕಾರ್ಯದರ್ಶಿಯಾಗಿ- ಗೋಪಾಲ ಕೃಷ್ಣ, ಉಪಾಧ್ಯಕ್ಷರಾಗಿ-ದೇವಮ್ಮ, ಸುಶೀಲಾ ಕೆಂಗಲ್, ಕಾರ್ಯದರ್ಶಿಯಾಗಿ-ಸಿ. ಚಿದಾನಂದ ದೊರೆ, ಸಹಕಾರ್ಯದರ್ಶಿಯಾಗಿ-ಜಯಲಕ್ಷ್ಮಿ ತುರ್ವಿಹಾಳ, ಗಂಗೂಬಾಯಿ ನೀಲಗುಂದ, ಖಜಾಂಚಿಯಾಗಿ-ಸುಧಾ ವಗರನಾಳ ಆಯ್ಕೆಯಾದರು.

ಎಸ್‌ಎಫ್ಐ ದ.ಕ. ಜಿಲ್ಲಾ ಸಮ್ಮೇಳನ

ಮಂಗಳೂರು: ದ.ಕನ್ನಡ ಜಿಲ್ಲಾ ಎಸ್‌ಎಫ್ಐ ಜಿಲ್ಲಾ ಸಮ್ಮೇಳನವು ಫೆಬ್ರವರಿ 8ರಂದು ನಗರದ ಎನ್‌ಜಿಓ ಸಭಾ ಭವನದಲ್ಲಿ ಎಸ್‌ಎಫ್ಐನ ರಾಮದಾಸ್.ಕೆ.ಯವರ ಅಧ್ಯಕ್ಷತೆಯಲ್ಲಿ ಖ್ಯಾತ ಸಾಹಿತಿ ಜಿ.ಕೆ. ಗೋವಿಂದರಾವ್ ರವರ ಉದ್ಘಾಟನೆಯೊಂದಿಗೆ ನೆರವೇರಿತು.

ಉಳ್ಳವರಿಗೆ ಶಿಕ್ಷಣ ನೀತಿಯಡಿಯಲ್ಲಿ ಇಂದು ಹೆತ್ತವರನ್ನು ಹಾಗೂ ವಿದ್ಯಾರ್ಥಿಗಳನ್ನು ತೀವ್ರವಾಗಿ ಶೋಷಿಸಲಾಗುತ್ತಿದೆ. ಆದ್ದರಿಂದ ಪ್ರಗತಿ ಪರ ವಿದ್ಯಾರ್ಥಿ ಸಂಘಟನೆಗಳು ಇದರ ವಿರುದ್ಧ ಉಗ್ರ ಪ್ರತಿಭಟನೆ ಹಾಗೂ ಹೋರಾಟವನ್ನು ರೂಪಿಸಬೇಕಾಗಿದೆ ಎಂದು ಉದ್ಘಾಟನಾ ಭಾಷಣ ಮಾಡಿದ ಜಿ.ಕೆ.ಗೋವಿಂದರಾವ್ ತಿಳಿಸಿದರು.

ನೇತಾಜಿ, ಗಾಂಧಿ, ಬಸವಣ್ಣನವರ ಬಗ್ಗೆ ಮಾತನಾಡುವ ಇಂದಿನ ರಾಜಕಾರಣಿಗಳು ತಾವು ಅವರ ಆದರ್ಶಗಳನ್ನು ಒಂದು ಚೂರು ಅನುಸರಿಸುವುದಿಲ್ಲ ಎಂದ ಅವರು ಜಾತಿವಾದಿಗಳ ವಿರುದ್ಧ ಕಟು ಟೀಕಾಪ್ರಹಾರ ಮಾಡಿದರು.

ಮುಖ್ಯ ಅತಿಥಿಯಾಗಿದ್ದ ಕಾಸರಗೋಡು ಕ್ಷೇತ್ರದ ಸಂಸದ ಟಿ.ಗೋವಿಂದನ್‌ನವರು ಮಾತನಾಡಿ ಇಂದು ಕಾಂಗ್ರೆಸ್ ಎಷ್ಟು ಭ್ರಷ್ಟಾಚಾರದಲ್ಲಿ ಮುಳುಗಿದೆಯೋ ಬಿಜೆಪಿಯು ಕೂಡಾ ಅಷ್ಟೇ ಭ್ರಷ್ಟಾಚಾರದಿಂದ ಕೂಡಿದೆ ಎಂದು ಟೀಕಿಸಿದರು. ಶೋಷಣೆ, ಭ್ರಷ್ಟಾಚಾರ, ಕೋಮುವಾದದ ವಿರುದ್ಧ ವಿದ್ಯಾರ್ಥಿ-ಯುವಜನರು ಹೋರಾಡಬೇಕೆಂದರು.

ಸಭೆಯಲ್ಲಿ ಜಿಲ್ಲಾ ಜನತಾದಳ ಮುಖಂಡ ಸುರೇಶ್ ಬಳ್ಳಾಲ್, ಕಾರ್ಮಿಕ ಮುಖಂಡರಾದ ಬಿ.ಮಾಧವ, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರೀಯಾನ್, ಭಾಸ್ಕರ ಕುಂಬಳೆ, ಕೃಷ್ಣಪ್ಪ ಕೊಂಚಾಡಿ ಮುಂತಾದವರು ಭಾಗವಹಿಸಿದ್ದರು.

ಸಮ್ಮೇಳನವು ಕೈಗೊಂಡ ಪ್ರಮುಖ ನಿರ್ಣಯಗಳು

1. ಜಿಲ್ಲೆಯ ಖಾಸಗಿ ಬಸ್‌ಗಳಲ್ಲಿ ವಿದ್ಯಾರ್ಥಿಗಳಿಗೆ ರಿಯಾಯ್ತಿ ಹೆಚ್ಚಿಸಲು ಆಗ್ರಹ.
2. ಮಂಗಳೂರು ವಿ.ವಿ. ಸಮಗ್ರ ಸುವ್ಯವಸ್ಥೆಗೆ ಆಗ್ರಹ.
3. ವಿದ್ಯುತ್ ಕಡಿತ ರದ್ದುಗೊಳಿಸಲು ಆಗ್ರಹ.
4. ಖಾಸಗಿ ವಿ.ವಿ. ಮಸೂದೆಗೆ ವಿರೋಧ.
5. ಮಂಗಳೂರು ಸರಕಾರಿ ಕಾಲೇಜನ್ನು ಪುನರಾರಂಭಿಸಲು ಒತ್ತಾಯ.

ಇನ್ನೂ ಮುಂತಾದ ನಿರ್ಣಯಗಳನ್ನು ಕೈಗೊಂಡಿತು.

ನೂತನ ಸಮಿತಿ: ಅಧ್ಯಕ್ಷರು-ಹರಿಪ್ರಸಾದ್ ರೈ, ಉಪಾಧ್ಯಕ್ಷರು-ಜಿ.ಪಿ.ಹಿದಾಯುತ್ತುಲ್ಲಾ, ಚಂದ್ರಶೇಖರ್ ಕುಂದಾಪುರ, ಜೂಡಿ ವಿವಿಯನ್ ಮೆನೇಜಸ್, ಕುಮಾರಿ ಪ್ರಮಿಳಾ. ಕಾರ್ಯದರ್ಶಿ-ಸುನೀಲ್ ಕುಮಾರ್ ಬಜಾಲ್, ಸಹ ಕಾರ್ಯದರ್ಶಿಗಳಾಗಿ-ಮಹಮ್ಮದ್ ಇಕ್ಬಾಲ್, ದೀಪಕ್ ಬಜಾಲ್, ಅಭಿಮ್ಯಾಥ್ಯೂ ಪುತ್ತೂರು, ರೂಪಶೆಟ್ಟಿಯಲ್ಲದೆ 15 ಜನರ ಸಮಿತಿ ಆಯ್ಕೆಯಾಯಿತು.

ವಸಾಹತುಶಾಹಿಯ ವಿರುದ್ಧ ಹೋರಾಟ ಇಂದಿನ ಅಗತ್ಯ

- ಸುನೀತ್ ಛೋಪ್ರಾ

ಬ್ರಿಟಿಶ್ ವಸಾಹತುವಾದದ ವಿರುದ್ಧ 1757 ರಿಂದ ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಡೆಸಲಾಯಿತು. ಸ್ವಾತಂತ್ರ್ಯಾನಂತರ ಭಾರತದಲ್ಲಿ ನವವಸಾಹತುವಾದ ಮುಂದುವರಿದಿರುವುದರಿಂದ ಅದರ ವಿರುದ್ಧವೂ ಹೋರಾಟ ಈಗಲೂ ಮುಂದುವರಿಯಬೇಕು" ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ರಾಷ್ಟ್ರೀಯ ಮುಂದಾಳು ಸುನೀತ್‌ಛೋಪ್ರಾ ಹೇಳಿದರು. ಅವರು ಇತ್ತೀಚೆಗೆ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ಶಿರಸಿ ಘಟಕ ಏರ್ಪಡಿಸಿದ್ದ 'ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಮತ್ತು ಸಮುದಾಯದ ಆಶೋತ್ತರಗಳು" ಎನ್ನುವ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

"ನಮ್ಮ ದೇಶದ ಎಲ್ಲಾ ಉತ್ಪಾದನೆಗಳ ಜಾಗತೀಕರಣ ಆಗುತ್ತಿದೆ. ಆದರೆ ಕೂಲಿಕಾರರ ಜಾಗತೀಕರಣ ಆಗುತ್ತಿಲ್ಲ. ಈ ದೇಶದ ದೊಡ್ಡ ಸಂಪತ್ತು ಕೂಲಿಕಾರರು. ಅವರ ಸ್ಥಿತಿ ಇನ್ನೂ ಸುಧಾರಿಸಿಲ್ಲ. ಜಾಗತೀಕರಣದ ಹೆಸರಿನಲ್ಲಿ ಈ ದೇಶದ ನವ ವಸಾಹತುವಾದ ಮುಂದುವರಿದಿದೆ. ದೇಶದ ಶೋಷಣೆ ನಡೆಯುತ್ತಿದೆ. ಇಡೀ ಸಮುದಾಯದ ಪಾಲ್ಗೊಳ್ಳುವಿಕೆಯಿಂದ ಸ್ವಾತಂತ್ರ್ಯ ಪಡೆಯಲು ಯಶಸ್ವಿಯಾಗಿದ್ದೇವೆ. ಆದರೆ 50 ವರ್ಷಗಳ ನಂತರ ಕೂಡ ನಮ್ಮ ಗುರಿಯತ್ತ ಸಾಗಲು ನಮಗೆ ಸಾಧ್ಯ ಆಗಲಿಲ್ಲ. ಎಲ್ಲ ಕ್ಷೇತ್ರದಲ್ಲಿಯೂ ನಾವು ಅನುಸರಿಸುತ್ತಿರುವ ರಾಜಿಮನೋಭಾವ ನಮ್ಮಗೆ ಮುಳುವಾಗಿದೆ ಎಂದು ಹೇಳಿದರು. ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಇತಿಹಾಸವನ್ನು, ಸ್ವರೂಪವನ್ನು ಎಳೆಎಳೆಯಾಗಿ, ಸೈದ್ಧಾಂತಿಕವಾಗಿ ವಿವರಿಸಿದ ಛೋಪ್ರಾರವರು ಈ ದೇಶದಲ್ಲಿ ಕೂಲಿಕಾರರ ಉತ್ತಮ ಭವಿಷ್ಯದ ಬಗ್ಗೆ, ಸ್ವಾತಂತ್ರ್ಯ ರಕ್ಷಣೆಗಾಗಿ ಕೋಮುವಾದದ ವಿರುದ್ಧ, ಜಾಗತೀಕರಣ, ಖಾಸಗೀಕರಣದ ವಿರುದ್ಧ ಸಮರ ಹೂಡಬೇಕಾದ ಅಗತ್ಯತೆಯನ್ನು ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ಶಾಸಕರಾದ ಕಾಂ|| ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ "ಒಂದುದೇಶದ, ಸಮಾಜದ ಮಿದುಳಿನಂತಿರುವ ಶಿಕ್ಷಣ ಇಂದು ರೋಗಗ್ರಸ್ತವಾಗಿದೆ. ಇಂದಿನ ಶಿಕ್ಷಣಕ್ಕೆ ಹೊಸ ಚಿಂತನೆಯನ್ನು ಹುಟ್ಟುಹಾಕಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ವಿದ್ಯಾರ್ಥಿಗಳ ಆಸಕ್ತಿಯೆಲ್ಲ 3ನೇ ದರ್ಜೆಯ ಸಿನೆಮಾ, 4ನೇ ದರ್ಜೆಯ ನಟರಲ್ಲಿ ಮಾತ್ರ" ಎಂದು ವಿಷಾದ ವ್ಯಕ್ತಪಡಿಸಿದರು. ಮುಂದುವರಿದು "ವಿದ್ಯಾರ್ಥಿ ಸಮುದಾಯಕ್ಕೆ ಸ್ವಾತಂತ್ರ್ಯದ ಬಗ್ಗೆ ವೈಜ್ಞಾನಿಕ ಮತ್ತು ವಾಸ್ತವಿಕ ದೃಷ್ಟಿಕೋನ ಕೊಡುವ ವಿದ್ಯಾಭ್ಯಾಸ ಕ್ರಮ ಇನ್ನೂ ಇಲ್ಲ. ಹಾಗಾಗಿ ಸ್ವಾತಂತ್ರ್ಯ ಸಂಗ್ರಾಮದ ತ್ಯಾಗ ಬಲಿದಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಏನೂ ಅರಿವಿಲ್ಲ. ಬ್ರಿಟಿಷ್ ವಸಾಹತು ಶಾಹಿಯನ್ನು ವೈಭವೀಕರಿಸುವ ವಸ್ತು, ಧೋರಣೆ ಇನ್ನೂ ಇದೆ" ಎಂದರು.

"ಸ್ವಾತಂತ್ರ್ಯ ಚಳುವಳಿ ಒಂದು ವ್ಯಕ್ತಿಯ ಚಳುವಳಿಯಲ್ಲ. ಒಂದು ಸಮುದಾಯದ ಚಳುವಳಿ. ಇಲ್ಲಿ ವಿಚಾರ ಧಾರೆಗಳ ಭಿನ್ನತೆ ಇತ್ತು. ಈ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಬಿಟ್ಟೂ ಹೋರಾಡಿದರು. ಇಂದು ಸಹ ಕೋಮುವಾದ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಬೇಕಿದೆ. ನಮ್ಮ ನಾಯಕರಿಗೆ ಬ್ರಿಟಿಷರನ್ನು ಓಡಿಸುವ ಬಗ್ಗೆ ಏಕಾಭಿಪ್ರಾಯವಿತ್ತು-ಆದರೆ ನಮ್ಮ ದೇಶದ ಭವಿಷ್ಯದ ಬಗ್ಗೆ ಏಕಾಭಿಪ್ರಾಯವಿರಲಿಲ್ಲ. ಭಗತ್ ಸಿಂಗ್‌ನಂತಹ ಕ್ರಾಂತಿಕಾರಿ ಯುವಕರು ವಸ್ತುನಿಷ್ಠ ಕನಸನ್ನು ಕಂಡಿದ್ದರು. ಆದರೆ ಅಂದರೆ ಅಂದಿನ ನಾಯಕತ್ವ ಜನತೆಯ ಸಮರಶೀಲ ಹೋರಾಟವನ್ನು ಸಂಪೂರ್ಣವಾಗಿ ತಿರಸ್ಕರಿಸಬಯಸಿತ್ತು" ಎಂದರು.

ಅಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖವಾಗಿದ್ದ ಬಂಡವಾಳಶಾಹಿ ವರ್ಗ ಹಿತಾಸಕ್ತಿ 50ನೇ ವರ್ಷದಲ್ಲಿ ಕೂಡ ಮುಂದುವರಿಯುತ್ತಿದೆ. ಹಾಗಾಗಿಯೇ ದೇಶದ ಮೂಲಭೂತ ಸಮಸ್ಯೆಗಳಾದ ಹಸಿವು, ಬಡತನ, ನಿರುದ್ಯೋಗ, ಅನಕ್ಷರತೆಗಳು ಪರಿಹಾರ ಕಾಣಲು ಸಾಧ್ಯ ಆಗುತ್ತಿಲ್ಲ, ಈ ದೇಶದ ಧೋರಣೆಗಳು ಒಂದು ವರ್ಗದ ಪರವಾಗಿವೆ. ಹಾಗಾಗಿ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆಯನ್ನು ಹುಟ್ಟುಹಾಕಬಲ್ಲ ಧೋರಣೆ ಇನ್ನೂ ಬಂದಿಲ್ಲ. ವ್ಯಕ್ತಿಗಳು ಇಂದು ಪ್ರಧಾನ ಆಗುತ್ತಿದ್ದಾರೆ ಹೊರತು ಒಂದು ತತ್ವಪ್ರಧಾನ ಆಗುತ್ತಿಲ್ಲ. ಈ ವ್ಯವಸ್ಥೆ ಇಡೀ ಜನಸಮುದಾಯವನ್ನು ಅಧಃಪತನದ ಅಂಚಿಗೆ ಒಯ್ದು, ಅರಾಜಕತೆಗೆ ತಳ್ಳಿ ತನ ವರ್ಗ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತದೆ.

"ಸ್ವಾತಂತ್ರ್ಯವನ್ನು ಇಂದು ಲಘುವಾಗಿ ಕಾಣುತ್ತಿದ್ದೇವೆ. ಇದರ ಹಿಂದಿನ ಚರಿತ್ರೆ ನಮಗೆ ಸರಿಯಾಗಿ ಗೊತ್ತಿಲ್ಲ. ಇತಿಹಾಸದ ವಸ್ತುನಿಷ್ಠ ವಿಶ್ಲೇಷಣೆ ಸಾಧ್ಯ ಆಗದಿದ್ದರೆ ಅದರಿಂದ ಪಾಠ ಕಲಿಯದಿದ್ದರೆ, ದೇಶದ ಭವಿಷ್ಯ ರೂಪಿಸಲು ಸಾಧ್ಯವಿಲ್ಲ. ಹಾಗಾಗಿ ಸ್ವಾತಂತ್ರ್ಯ 50ನೇ ವರ್ಷವಾದರೂ ಭಾವನಾತ್ಮಕವಾಗಿ ಆಗದೆ ವೈಜ್ಞಾನಿಕವಾಗಿಯಾದರೂ ಸ್ವಾತಂತ್ರ್ಯ ಹೋರಾಟ, ಆಶಯಗಳ ಬಗ್ಗೆ ಅಧ್ಯಯನ ನಡೆಯಬೇಕು" ಎಂದು ಶ್ರೀರಾಮರೆಡ್ಡಿ ಹೇಳಿದರು.

ಸಭೆಯ ಇನ್ನೋರ್ವ ಮುಖ್ಯ ಅತಿಥಿಯಾಗಿ ಮಾತನಾಡಿದ ಶಾಸಕ ಪ್ರೇಮಾನಂದ ಜೈವಂತ "ಬಿಡಿಸಲಾರದ ಸಮಸ್ಯೆಯಲ್ಲಿ ನಾವು ಸಿಕ್ಕಿಕೊಂಡಿದ್ದೇವೆ. ಲೋಪದೋಷಗಳಿಂದ ಕೂಡಿದ ಆಡಳಿತ ವ್ಯವಸ್ಥೆಯಿಂದ ಎಲ್ಲಾ ರಂಗದಲ್ಲೂ ಮೌಲ್ಯ ಕಳೆದುಕೊಂಡಿದ್ದೇವೆ. ಸ್ವಾತಂತ್ರ್ಯ ಸಿಕ್ಕಿ 50 ವರ್ಷವಾದರೂ ಇನ್ನೂ ಶಿಕ್ಷಣದ ಬಗ್ಗೆ ರಾಷ್ಟ್ರೀಯ ನೀತಿ ರೂಪಿಸಲು ಸಾಧ್ಯ ಆಗಲಿಲ್ಲ. ಸ್ವಾರ್ಥ, ಭ್ರಷ್ಟಾಚಾರ ಮಿತಿಮೀರಿದೆ. ಹಾಗಾಗಿ ಯುವಜನತೆ ಕ್ರಿಯಾಶೀಲ ಆಗಬೇಕು" ಎಂದರು.

ವರದಿ: ವಿಠಲ



ಮಾಜಿ ಸಚಿವ ಪ್ರಭಾಕರ ರಾಣೆಯವರು ಮಾತನಾಡಿ "ಆದರ್ಶದ ಬಗ್ಗೆ ಮಾತನಾಡುವವರು ಅವನ್ನು ಕ್ರಿಯೆಗೆ ಇಳಿಸಬೇಕು. ಎಲ್ಲಾ ಪಕ್ಷದಲ್ಲೂ ಒಳ್ಳೆಯವರು, ಕೆಟ್ಟವರೂ ಇದ್ದಾರೆ. ಸ್ವಲ್ಪ ಹೆಚ್ಚು ಕಡಿಮೆ ಇರಬಹುದು" ಎಂದು ಹೇಳುತ್ತಾ "ಇಂದಿನ ದೋಷಪೂರ್ಣ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಪರಿವರ್ತನೆ ಆಗದೆ ಸಮಾಜ ದೋಷ ಮುಕ್ತ ಆಗಲು ಸಾಧ್ಯವಿಲ್ಲ" ಎಂದು ಹೇಳಿ ಇಂಥ ರಾಜ್ಯಮಟ್ಟದ ವಿಚಾರ ಸಂಕಿರಣ ಏರ್ಪಡಿಸಿದ ಎಸ್‌ಎಫ್‌ಐನ್ನು ಅಭಿನಂದಿಸಿದರು.

ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್ ಮಾತನಾಡಿ ಸ್ವಾತಂತ್ರ್ಯಚಳುವಳಿಯ ಸಂದರ್ಭದಲ್ಲಿ ವಿದ್ಯಾರ್ಥಿಗಳ ಕ್ರಾಂತಿಕಾರಕ ಪಾತ್ರವನ್ನು ವಿವರಿಸಿದರು. ಮತ್ತು ಇಂದು ವ್ಯವಸ್ಥೆಯ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರವೇನೆಂದು ವಿವರಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ರಾಜ್ಯೋತ್ಸವ ಪ್ರಶಸ್ತಿ ವಿಜೇತ ವಿ.ಎಸ್.ಗೊಂದೆ ಮಾತನಾಡಿ "ಇಂದಿನ ವಿದ್ಯಾರ್ಥಿಗಳ ಮುಂದೆ ದೊಡ್ಡ ನಿರಾಸೆ ಇದೆ. ಇಂದಿನ ಶಿಕ್ಷಣ ನೀತಿಯಿಂದಾಗಿ ನಿರುದ್ಯೋಗಿಪಡೆ ನಿರ್ಮಾಣವಾಗುತ್ತಿದೆ. ಇದು ಯುವಕರ ಸಾಮರ್ಥ್ಯವನ್ನು ಕುಂಠಿತಗೊಳಿಸುತ್ತದೆ. ಇದನ್ನು ಸರಿಪಡಿಸಲು ವೃತ್ತಿಪರ ಶಿಕ್ಷಣ ಆಗಬೇಕು" ಎಂದರು.

'ಸ್ವಾತಂತ್ರ್ಯದ ಸುವರ್ಣಮಹೋತ್ಸವ ಮತ್ತು ಸಮುದಾಯದ ಆಶೋತ್ತರಗಳು' ವಿಚಾರಸಂಕಿರಣದ ಉದ್ದೇಶವನ್ನು ವಿವರಿಸಿ ಸ್ವಾಗತಿಸಿದವರು ಎಸ್‌ಎಫ್‌ಐ ಮಾಜಿ ರಾಜ್ಯಾಧ್ಯಕ್ಷ ಶಾಂತಾರಾಮ, ವಂದಿಸಿದವರು ಯುವರಾಜ ಕಂಬಾಳಿಮಠ,ಕಾರ್ಯಕ್ರಮ ನಿರೂಪಿಸಿದವರು ವಿಠಲ ಭಂಡಾರಿ. □

ಸ್ವಾತಂತ್ರ್ಯದ ಸುವರ್ಣೋತ್ಸವ ಮತ್ತು ಸಮುದಾಯದ ಆಶಯಗಳು

ಮಧ್ಯಾಹ್ನ ನಡೆದ 'ಸ್ವಾತಂತ್ರ್ಯ ಸುವರ್ಣಮಹೋತ್ಸವ ಮತ್ತು ಸಮುದಾಯದ ಆಶಯಗಳು' ವಿಚಾರ ಸಂಕಿರಣದಲ್ಲಿ ಕಾಂ|| ಸಿ.ಆರ್.ಭಟ್, ಕಾಂ|| ಜಿ.ವಿ.ಶ್ರೀರಾಮರೆಡ್ಡಿ ಮತ್ತು ಎಸ್.ವೈ.ಗುರುಶಾಂತ್ ಮಾತನಾಡಿದರು.

'ಶಿಕ್ಷಣಃ ಕನಸು ಮತ್ತು ವಾಸ್ತವ' ಎನ್ನುವ ವಿಷಯದ ಬಗ್ಗೆ ಮಾತನಾಡಿದ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ "ಸ್ವಾತಂತ್ರ್ಯ ಪಡೆದು 50 ವರ್ಷದ ನಂತರ ಕೂಡ ಶಿಕ್ಷಣ ನನಸಾಗದೆ ಕನಸಾಗಿಯೇ ಉಳಿದಿರುವ ವಾಸ್ತವ ಸ್ಥಿತಿ ಈ ದೇಶದ್ದು. ತೀರಾ ಕಳಪೆಯಾದ ಶಿಕ್ಷಣ ಕ್ರಮ ಇನ್ನೂ ರೂಢಿಯಲ್ಲಿದೆ. ವಿದ್ಯಾರ್ಥಿ ಯುವಜನರಲ್ಲಿ ದೇಶ ಪ್ರೇಮದ ಭಾವನೆಯನ್ನು ಮತ್ತೆ ತರಬೇಕಾಗಿದೆ. ದೇಶದ ಪ್ರಗತಿಯಲ್ಲಿ ವಿದ್ಯಾರ್ಥಿ-ಯುವಜನರನ್ನು ತೊಡಗಿಸಬೇಕಾಗಿದೆ" ಎಂದರು. "ಜನತೆಯ ಕಣ್ಣಿನ ಮೂಲಕವೇ ಸ್ವಾತಂತ್ರ್ಯದ ಫಲವನ್ನು ವಿಶ್ಲೇಷಿಸಬೇಕಾಗಿದೆ. ಜನರನ್ನು ಪ್ರೀತಿಸಲಾರದವ ದೇಶವನ್ನು ಪ್ರೀತಿಸಲಾರ" ಎಂದು ಗುರುಶಾಂತ್ ಹೇಳಿದರು.

ಸ್ವಾತಂತ್ರ್ಯ ಪೂರ್ವದ ದೇಶವನ್ನು ಸ್ಥೂಲವಾಗಿ ಪ್ರಸ್ತಾಪಿಸಿದ ಅವರು "ಭಾರತದಲ್ಲಿ ಚಾಲ್ತಿಯಲ್ಲಿರುವ ಊಳಿಗಮಾನ್ಯ ವ್ಯವಸ್ಥೆಯ ಕ್ರೌರ್ಯ, ಅನ್ಯಾಯ, ದೌರ್ಜನ್ಯ, ಶೋಷಣೆಯೇ ಮೊದಲಾದ ದೌರ್ಬಲ್ಯವನ್ನು ಬ್ರಿಟಿಶರು ಸಮರ್ಥವಾಗಿ ಬಳಸಿಕೊಂಡು ತಮ್ಮ ಕಂಪನಿಯನ್ನು ಸ್ಥಾಪಿಸಿದರು. ರಾಜಕೀಯ ಪ್ರಭುತ್ವನ್ನು ಹೇರಲಾರಂಭಿಸಿದರು. ಮತ್ತು ಆಡಳಿತ ವ್ಯವಸ್ಥೆಯ ಶಕ್ತಿಯನ್ನು ಕ್ರೋಢೀಕರಿಸುವ ಸಂದರ್ಭದಲ್ಲಿ ಶಿಕ್ಷಣ ಎನ್ನವುದೂ ತೀರ ಮುಖ್ಯವಾದ ಅನಿವಾರ್ಯವಾದ ಅಂಗವಾಯಿತು. ಅಂದರೆ ವಸಾಹತು ಶಾಹಿಗಳು ಭಾರತದಲ್ಲಿ ತಮ್ಮ ಆಡಳಿತವನ್ನು ಪರಿಣಾಮಕಾರಿಯಾಗಿ ಚಾಲ್ತಿಗೆ ತರುವ ವ್ಯವಸ್ಥೆಯನ್ನು ಶಿಕ್ಷಣದ ಮೂಲಕ ತಂದರು. ಈ ಶಿಕ್ಷಣದ ಮೂಲಕ ನಮ್ಮ ಆಡಳಿತಕ್ಕೊಳಪಟ್ಟ ಭಾರತೀಯರ ನಡುವೆ ಒಂದು ಸಂವಾದ ಸಾಧ್ಯ ಎಂದು ತಿಳಿದರು. ಅವರಿಗೆ ಬೇಕಾದ ಸುಶಿಕ್ಷಿತ ವರ್ಗವೆಂದರೆ ರಕ್ತ ಮತ್ತು ವರ್ಣದಲ್ಲಿ ಭಾರತೀಯರೂ ಮತ್ತು ಬೌದ್ಧಿಕವಾಗಿ ಅಭಿರುಚಿಯಲ್ಲಿ ಬ್ರಿಟಿಷ್‌ರಾಗಿಯೊ ಇರುವವರು" ಎಂದು ಹೇಳಿ ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ಬೆಳೆದ ರೀತಿಯನ್ನು ವಿವರಿಸಿದರು. ಈ ಬೆಳವಣಿಗೆಯ ಒಳಗಿರುವ ವರ್ಗ ಹಿತಾಸಕ್ತಿಯನ್ನು ವಿಶ್ಲೇಷಿಸಿದರು.

ಆನಂತರದ ಘಟ್ಟದಲ್ಲಿ ಬಂಡವಾಳ ಶಾಹಿ ಶಿಕ್ಷಣ ವ್ಯವಸ್ಥೆಗೆ ಪರ್ಯಾಯವಾಗಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳು ಪ್ರಾರಂಭ ಆದವು. ಸಮುದಾಯದಲ್ಲಿ ಕೂಡ ಶಿಕ್ಷಣದ ಬಗೆಗಿನ ಆಸಕ್ತಿ, ಕುತೂಹಲ ಹೆಚ್ಚಾಯಿತು. ಇದೇ ಮುಂದೆ ದೇಶದಲ್ಲಿ ಶಿಕ್ಷಣದ ಬಗ್ಗೆ ಒಂದು ಆಂದೋಲನ ಹುಟ್ಟುಹಾಕುವಲ್ಲಿ ಪಾತ್ರವಹಿಸಿತು.

ಆದರೆ ಇಂದೂ ಕೂಡಾ ಸಾಮೂಹಿಕ ಶಿಕ್ಷಣ ಸಾಧ್ಯ ಆಗಿಲ್ಲ. ಸಂವಿಧಾನದಲ್ಲಿ ಹೇಳಿದಂತೆ 14 ವರ್ಷದವರೆಗಿನ ಮಕ್ಕಳಿಗೆ ಉಚಿತ, ಕಡ್ಡಾಯ, ಶಿಕ್ಷಣ ಕೊಡಲುಸಾಧ್ಯ ಆಗಿಲ್ಲ. ಮಕ್ಕಳ ಅನಕ್ಷರತೆ, ಶಾಲೆ ಬಿಡುವ ಪ್ರಮಾಣ, ಬಾಲ ಕಾರ್ಮಿಕರ ಪಮಾಣದ ಅಂಕಿ-ಅಂಶ ಯಾರನ್ನೂಬೆಚ್ಚಿ ಬೀಳಿಸುತ್ತದೆ. ಈ ಸಾರ್ವತ್ರಿಕ ಶಿಕ್ಷಣಕ್ಕೆ ಬದಲಾಗಿ ಇಂದು ಜಾರಿಗೆ ಬಂದ ಹೊಸ ಶಿಕ್ಷಣ ನೀತಿ 'ದುಡ್ಡಿದ್ದವರಿಗೆ ಶಿಕ್ಷಣ ' ಎಂಬ ನೀತಿಯನ್ನು ಪ್ರತಿಪಾದಿಸಿದೆ. 10 ಕೋಟಿ ಡಿಪಾಸಿಟ್ ಇಟ್ಟವರು ಒಂದು ವಿ.ವಿ. ನಡೆಸಬಹುದು. ಅನೇಕ ಉನ್ನತ ಶಿಕ್ಷಣ ಇಂದು ಮಠದ ಸ್ವಾಮಿಗಳ, ಪಾದ್ರಿಗಳ, ಮುಲ್ಲಾಗಳ ಸ್ವತ್ತಾಗಿವೆ"

"ಆರ್ಥಿಕ ಉದಾರೀಕರಣದ ಪ್ರಕ್ರಿಯೆಗೆ ಸಿಕ್ಕ ಶಿಕ್ಷಣ ಕೂಡ ಕೇವಲ ವ್ಯಾಪಾರಿ ಸ್ವತ್ತಾಗಿ ಪರಿಣಮಿಸಿದೆ. ಮಾನವೀಯತೆ ನಿರ್ನಾಮ ಆಗುತ್ತಿದೆ. ಆಧುನಿಕತೆ, ವಿಜ್ಞಾನ, ತಂತ್ರಜ್ಞಾನ ಸಮೂಹಕ್ಕೆ ಸಿಗಬೇಕಾಗಿಲ್ಲ, ಕೇವಲ ಲಾಭ ಗಳಿಕೆಯ ಮಾಧ್ಯಮ ಆದರೆ ಸಾಕು ಸ್ಥಿತಿ ಬಂದಿದೆ. ಅಂದರೆ ಮತ್ತೆ ಶಿಕ್ಷಣ(ವಸಾಹತು ಶಾಹಿ) ಸ್ವಾತಂತ್ರ್ಯ ಪೂರ್ವದ ಸ್ಥಿತಿಗೆ ಮರಳುತ್ತಿದೆ. ಪಠ್ಯಪುಸ್ತಕದ ತುಂಬಾ ವಸಾಹತುಶಾಹಿ ಯೋಚನಾ ಕ್ರಮವೇ ತುಂಬಿದೆ. ನಮ್ಮ ದೇಶದ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ಹಿತಾಸಕ್ತಿಗಾಗಿ ಇದು ರೂಪಿತ ಆಗುತ್ತಿಲ್ಲ" ಎಂದು ಗುರುಶಾಂತ್ ಹೇಳಿದರು. ಸ್ವಾತಂತ್ರ್ಯ ಚಳುವಳಿಯ ಕನಸನ್ನು ನನಸಾಗಿಸಬೇಕಾದರೆ ದೇಶದ ಅಭಿವೃದ್ಧಿಯಲ್ಲಿ ಸಕ್ರಿಯವಾಗಬಲ್ಲ ಪರ್ಯಾಯ ಯೋಜನೆಯನ್ನು ತರಬೇಕೆಂದು ಹೇಳಿ ಕೇರಳ, ಪ.ಬಂಗಾಳದ ಶಿಕ್ಷಣ ಪದ್ಧತಿಯನ್ನು ವಿವರಿಸಿದರು.

ಸ್ವಾತಂತ್ರ್ಯ: ಕೋಮುವಾದಿ ಸವಾಲು ಎಂಬ ವಿಷಯದ ಬಗ್ಗೆ ಕಾಂ|| ಸಿ.ಆರ್. ಭಟ್ ಮಾತನಾಡಿದರು. ಸಂಘರ್ಷದ ಮೂಲಕವೇ ಸ್ವಾತಂತ್ರ್ಯ ರೂಪುತಳೆದಿದೆ. ಬೇರೆ ಬೇರೆ ವರ್ಗಗಳ ನಡುವಿನ ಸಂಘರ್ಷ, ಸಾಮ್ರಾಜ್ಯಶಾಹಿ ಮತ್ತು ತೃತೀಯ ರಾಷ್ಟ್ರಗಳ ಸಂಘರ್ಷ, ರೈತ-ಭೂಮಾಲಕರ ನಡುವಿನ ಸಂಘರ್ಷ, ಬಡವ ಶ್ರೀಮಂತರ ನಡುವಿನ ಸಂಘರ್ಷಗಳ ಮೂಲಕವೇ ನಾವು ವ್ಯವಸ್ಥೆಯನ್ನು ಪರಿವರ್ತನೆ ಮಾಡಿ ಒಂದು ಸಮಾಜವಾದಿ, ಸ್ವತಂತ್ರ, ಪ್ರಜಾಪ್ರಭುತ್ವ ಸಾರ್ವಭೌಮ ರಾಷ್ಟ್ರ ಆಗಬೇಕೆನ್ನುವ ಆಸೆಯನ್ನು ಇಟ್ಟುಕೊಂಡಿದ್ದೆವು. ಇದನ್ನು ಭಾರತದ ಸಂವಿಧಾನದಲ್ಲೂ ಹೇಳಿದೆ. ಜಾತಿ, ಮತ, ಧರ್ಮ, ಲಿಂಗ, ಭಾಷೆಗಳ ಯಾವುದೇ ಬೇಧಗಳಿಲ್ಲದಂತೆ, ವೈಜ್ಞಾನಿಕ ವರ್ಗೀಕರಣ ಮಾತ್ರ ಇದೆ. ಧರ್ಮ ನಿರಪೇಕ್ಷತೆಯನ್ನು ಒಳಗೊಂಡಿದೆ. ಆದರೆ ಇಂಥ ಸಂವಿಧಾನಕ್ಕೆ ಪ್ರತಿಯಾಗಿ ನಮ್ಮಲ್ಲಿ ಕೋಮುವಾದಿಗಳು ಧರ್ಮ ಸಂಸತ್ತನ್ನು ರಚಿಸಿಕೊಂಡಿದ್ದಾರೆ. ಇದರಲ್ಲಿ ಸಂವಿಧಾನ ವಿರೋಧಿ ತತ್ವ ಮತ್ತು ಮುಸಿಂ ವಿರೋಧಿತನ ಇದೆ. ಫ್ಯಾಸಿಸ್ಟ್ ತತ್ವದ ಆಧಾರದಲ್ಲಿ ರಚಿತವಾದ ಈ ಧರ್ಮ ಸಂಸತ್ತು ಸಂಘಪರಿವಾರಗಳನ್ನು ಅಧಿಕಾರಕ್ಕೆ ತರುವ ಹುಮ್ಮಸ್ಸಿನಲ್ಲಿದೆ. ಬ್ರಿಟಿಷರು ಒಡೆದಾಳುವ ನೀತಿಗಾಗಿ ಹುಟ್ಟುಹಾಕಿದ ಹಿಂದೂ ಮಹಾಸಭೆ, ಮುಸ್ಲಿಂ ಲೀಗ್ ಇಂದು ದೇಶವನ್ನು ಮುಂದೊಯ್ಯುವ ಬದಲು ಹಿಂದೊಯ್ಯುತ್ತಿವೆ. ಕೋಮುವಾದ ಅದು ಹಿಂದೂ ಕೋಮುವಾದವಾಗಿರಲಿ, ಮುಸ್ಲಿಂ ಕೋಮುವಾದ ಆಗಿರಲಿ ಎರಡೂ, ದೇಶಕ್ಕೆ ಅಪಾಯವೇ ಆಗಿದೆ" ಎಂದು ಹೇಳಿ ಬಿಜೆಪಿ ಆಡಳಿತಕ್ಕೆ ಬಂದಾಗ ಉತ್ತರ ಪ್ರದೇಶದ ಪಠ್ಯಪುಸ್ತಕದಲ್ಲಾದ ಬದಲಾವಣೆಯನ್ನು ಮತ್ತು ಧರ್ಮ ಸಂಸತ್ತಿನ 64 ಪುಟದ ಟಿಪ್ಪಣಿಯ ಮುಖ್ಯಾಂಶವನ್ನು ವಿವರಿಸಿದರು. ಹಿಂದುತ್ವದ ಕಲ್ಪನೆಯನ್ನು ಮುಂದಿಟ್ಟು ಅಧಿಕಾರ ಹಿಡಿಯಲುಪ್ರಯತ್ನಿಸುತ್ತಿರುವ ಸಂಘ ಪರಿವಾರವನ್ನು ಲೇವಡಿ ಮಾಡಿದರು. "1857 ರಂದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, 1947 ರಂದು ಎರಡನೇ ಸಂಗ್ರಾಮ ನಡೆದರೆ ಇದು ಈ ಕೋಮುವಾದದ ವಿರುದ್ಧ ಮೂರನೇ ಸಂಗ್ರಾಮ ನಡೆಯಬೇಕಿದೆ" ಎಂದರು.

'ಉದ್ಯೋಗಃ ಅಭಿವೃದ್ಧಿಯ ಸಮಸ್ಯೆ' ಎನ್ನುವ ವಿಷಯದ ಬಗ್ಗೆ ಜಿ.ವಿ. ಶ್ರೀರಾಮರೆಡ್ಡಿ ಅವರು ಮಾತನಾಡಿದರು. "ಶಿಕ್ಷಣ-ಉದ್ಯೋಗ ಮತ್ತು ಅಭಿವೃದ್ಧಿಗೆ ನೇರ ಸಂಬಂಧ ಇದೆ.ಇದು ಒಂದನ್ನೊಂದು ಅವಲಂಬಿಸದೆ ಕೂಡ. ಆದರೆ ಈ ದೇಶದಲ್ಲಿ 50 ವರ್ಷಗಳಲ್ಲಿ ಏನೂ ಅಭಿವೃದ್ಧಿ ಆಗಿಲ್ಲ ಎಂಬ ನಕಾರಾತ್ಮಕ ಭಾವನೆ ಸರಿಯಲ್ಲ. ಆದರೆ ಅಭಿವೃದ್ಧಿ ಯಾವ ತೆರನದ್ದು? ಈ ಹಿನ್ನಡೆ ಮುನ್ನಡೆಗೆ ಯಾರು ಕಾರಣ ಎಂಬುದರ ಮುಕ್ತ ಚರ್ಚೆಯಾಗಬೇಕಾಗಿದೆ" ಎಂದರು.

ಯಾವುದೇ ದೇಶದ ಉತ್ಪಾದಿತ ಸರಕನ್ನು ಆ ದೇಶದಲ್ಲಿ ಕೊಳ್ಳುವವರಿಲ್ಲದಿದ್ದರೆ ಆರ್ಥಿಕ ಮುಗ್ಗಟ್ಟು ಉಂಟಾಗುತ್ತದೆ. ಈ ಮುಗಟ್ಟಿನಿಂದ ಪಾರಾಗಲು ಅದು ಜಗತ್ತಿನ ಬೇರೆಲ್ಲಾದರೂ ಹೊಸ ಮಾರ್ಕೆಟ್‌ನ್ನು ಕಂಡುಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಆರ್ಥಿಕ ಸ್ಥಿತಿಗತಿ ನಾಶ ಆಗುತ್ತದೆ. ಹಾಗಾಗಿ ಬ್ರಿಟಿಶರು ಸೆರಕುಗಳನ್ನು ಮಾರಲು ನಮ್ಮ ದೇಶವನ್ನು ಪ್ರವೇಶಿಸಿದರು. ರಾಜಕೀಯ ಅಧಿಕಾರ ಇಲ್ಲದೆ ಹೆಚ್ಚು ಸರಕನ್ನು ಮಾರಲು ಸಾಧ್ಯವಿಲ್ಲ ಎನ್ನುವುದನ್ನು ಅರಿತು ಅಧಿಕಾರ ಚುಕ್ಕಾಣಿಯನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಳ್ಳಲು ಹೊರಟರು. ಹಾಗಾಗಿಯೇ ಈ ವಸಾಹತು ಮತ್ತು ದೇಶೀಯ ಬಂಡವಾಳಗಾರರ ತಿಕ್ಕಾಟ ಸ್ವಾತಂತ್ರ್ಯ ಚಳುವಳಿಯನ್ನು ಹುಟ್ಟುಹಾಕುವಲ್ಲಿ ಅವನ್ನು ಮುಂದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಿತು ಎಂದು ಶ್ರೀರಾಮರೆಡ್ಡಿ ಯವರು ಸ್ವಾತಂತ್ರ್ಯ ಚಳುವಳಿಯ ಮೊದಲ ಘಟ್ಟವನ್ನು ವಿವರಿಸಿದರು.

"ಆದರೆ ಭಾರತದಲ್ಲಿ ಬಂಡವಾಳಶಾಹಿಯ ವ್ಯವಸ್ಥೆ ಪೂರ್ಣವಾಗಿ ಬೆಳೆಯಲಿಲ್ಲ. ಯಾಕೆಂದರೆ ಇಲ್ಲಿ ಪಾಳೇಗಾರಿ ವ್ಯವಸ್ಥೆ ನೆಲೆಗೊಂಡಿತು. ಸ್ವಾತಂತ್ರ್ಯ ನಂತರ ಕೂಡಾ ಭೂಮಾಲಿಕ ವ್ಯವಸ್ಥೆಯ ಲಕ್ಷಣಗಳು ಕಾಣಬರುತ್ತಿವೆ. ದೇಶದಲ್ಲಿ ಭೂಮಾಲಿಕ ವ್ಯವಸ್ಥೆ ನಾಶ ಆಗದೇ, ದೇಶ, ಸಮಾಜದ ಅಭಿವೃದ್ಧಿ ಆಗಲು ಸಾಧ್ಯವಿಲ್ಲ. ಹಾಗಾಗಿ ಈ ದೇಶದ ಅಭಿವೃದ್ಧಿ ಕೂಡಾ ಸೀಮಿತ ಆಗಿದೆ ಎಂದು ದೇಶದ ಅಭಿವೃದ್ಧಿ ಕುಂಠಿತ ಆಗಲು ಮೂಲ ಕಾರಣ ಏನು ಎಂದು ವಿವರಿಸಿದರು.

"ಅಭಿವೃದ್ಧಿಯ ಮೂಲ ಅಂಶ ಎಂದರೆ ಆ ದೇಶದಲ್ಲಿ ಮೊಟ್ಟ ಮೊದಲಿಗೆ ಅನಕ್ಷರತೆ ಹೋಗಬೇಕು, ಬಡತನ, ಆರ್ಥಿಕ ಸಮಾನತೆ ನೀಗಬೇಕು. ಆದರೆ ಭಾರತದ ಸ್ವಾತಂತ್ರ್ಯದ 50 ವರ್ಷದ ನಂತರ ಕೂಡಾ ಅಕ್ಷರವಿಲ್ಲದ, ಎರಡು ಹೊತ್ತು ಊಟವಿಲ್ಲದವರ ಸಂಖ್ಯೆ ಬೆರಗು ಹುಟ್ಟಿಸುವಷ್ಟಿದೆ" ಎಂದು ಹೇಳಿ ಅದಕ್ಕೆ ಕಾರಣವನ್ನು ಹೇಳುತ್ತಾ "ಒಬ್ಬ ಮನುಷ್ಯನ ಶ್ರಮದ ಫಲವನ್ನು ಕಡಿಮೆ ದರಕ್ಕೆ ದುಡಿಸಿಕೊಳ್ಳುವ ವ್ಯವಸ್ಥೆ ಯಾವ ದೇಶದಲ್ಲಿ ಇರುತ್ತದೋ ಅಲ್ಲಿ ಬಡತನ ಇದ್ದೇ ಇರುತ್ತದೆ. ಒಂದು ದೇಶದಲ್ಲಿ ಉತ್ಪಾದನೆ ಆದ ಸರಕು ಎಲ್ಲಿಯವರೆಗೆ ಸಮಾನ ಹಂಚಿಕೆ ಆಗುವುದಿಲ್ಲವೋ ಅಲ್ಲಿಯವರೆಗೆ ಬಡತನ ಹೋಗಲು ಸಾಧ್ಯವಿಲ್ಲ" ಎಂದು ಹೇಳಿದರು.

"ನಿರುದ್ಯೋಗ ಕೂಡ ದೇಶದ ಅಭಿವೃದ್ಧಿಯನ್ನು ಸೀಮಿತಗೊಳಿಸುತ್ತಿದೆ. ನಿರುದ್ಯೋಗಕ್ಕೆ ಕಾರಣ ಜನಸಂಖ್ಯೆ ಎನ್ನುತ್ತಾರೆ, ಆದರೆ ನಮಗಿಂತ ಹೆಚ್ಚು ಜನಸಂಖ್ಯೆಯಿರುವ ನಾಡಲ್ಲಿ ನಿರುದ್ಯೋಗ ಸಮಸ್ಯೆ ಯಾಕಿಲ್ಲ? ಯಾವುದೇ ಬಂಡವಾಳ ಶಾಹಿ ದೇಶದಲ್ಲಿ ನಿರುದ್ಯೋಗ ಅನಿವಾರ್ಯ. ಒಂದು ವೇಳೆ ನಿರುದ್ಯೋಗಿಗಳಿಲ್ಲದಿದ್ದರೆ ಅವರಿಗೆ ಲಾಭ ಬರಲಾರದು. ಕೇವಲ ಲಾಭಗಳಿಕೆ ಮಾತ್ರ ಗುರಿಯಾಗಿರುವ ಈ ವ್ಯವಸ್ಥೆ ಇರುವವರೆಗೆ ನಿರುದ್ಯೋಗ ಹೋಗಲು ಸಾಧ್ಯವಿಲ್ಲ" ಎಂದರು.

"ಎರಡನೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನಂತರ ಸಂಘಟನೆಗಳು ತಯಾರಾಗಬೇಕಿದೆ. ಮೊದಲ ಸ್ವಾತಂತ್ರ್ಯ ಸಂಗ್ರಾಮ ಬ್ರಿಟಿಶ್ ವಸಾಹತು ಶಾಹಿಯ ವಿರುದ್ಧ ಇತ್ತು. ಇಂದು ಇಡೀ ಶೋಷಕ ವರ್ಗದ ವಿರುದ್ಧ ಸಮರ ಸಾರಬೇಕಾಗಿದೆ. ಇಷ್ಟಲ್ಲದಿದ್ದರೆ ನಮ್ಮ ದೇಶದ ಮೂಲಭೂತ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ" ಎಂದು ಉದ್ಯೋಗ-ಅಭಿವೃದ್ಧಿಯ ನಡುವಿನ ಸಂಬಂಧವನ್ನು ವಿವರಿಸಿದರು.

ಚರ್ಚೆಗೆ ಆಹ್ವಾನಿತರಲ್ಲೊಬ್ಬರಾದ ಡಾ||.ಆರ್.ವಿ.ಭಂಡಾರಿಯವರು ಮಾತನಾಡಿ ಬ್ರಿಟಿಶ್ ಶಿಕ್ಷಣ ನೀತಿ ಇಂದು ಮುಂದುವರಿದ್ದನ್ನು ಹೇಳಿ ಉತ್ತರ ಪ್ರದೇಶದಲ್ಲಿ ಹಿಂದೆ ಇತಿಹಾಸ ಪಠ್ಯವನ್ನೇ ತಿರುಚಿದ ರೀತಿಯನ್ನು ವಿವರಿಸಿದರು. ಮತ್ತು ಶಿಕ್ಷಣ ಹೇಗಿರಬೇಕು ಎಂದು ವಿವರಿಸಿದರು. ಪತ್ರಕರ್ತ ಕಶ್ಯಪ ಪರ್ಣಕುಟಿ ಅವರು ಮಾತನಾಡಿ ಇಂದು ರಾಜಕೀಯದಲ್ಲಿ ಭ್ರಷ್ಟಾಚಾರ ತುಂಬಿರುವ ಬಗ್ಗೆ ಖೇದ ವ್ಯಕ್ತಪಡಿಸಿದರು. ಅನೇಕ ಪ್ರತಿನಿಧಿ ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಂಡರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ರಾಜ್ಯಾಧ್ಯಕ್ಷ ಕೆ.ಎನ್.ಉಮೇಶ್ ಅವರು ಮಾತನಾಡಿ ಇಂತಹ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಎಸ್‌ಎಫ್‌ಐ ನಿರ್ವಹಿಸಿದ ಪಾತ್ರವನ್ನು ವಿವರಿಸಿ ಭಗತ್ ಸಿಂಗ್‌ರಂತಹವರ ಆಶಯವನ್ನು ಪೂರ್ಣಗೊಳಿಸುವತ್ತ ಜನರನ್ನು ಪ್ರೇರೇಪಿಸಲು ಹೊಸ ಚರ್ಚೆಯನ್ನು ಹುಟ್ಟುಹಾಕಲು ಕರೆ ಕೊಟ್ಟರು.

ಎಸ್‌ಎಫ್‌ಐ ರಾಜ್ಯ ಸಮಿತಿಯ ಸದಸ್ಯೆ ಯಮುನಾ ಗಾಂವಕರ ಸ್ವಾಗತಿಸಿದರು, ಶರಾವತಿ ವಂದಿಸಿದರು. ಶಿರಸಿ ತಾಲ್ಲೂಕು ಸಮಿತಿಯ ಸದಸ್ಯರು ಆಹ್ವಾನಿತರಿಗೆ ನೆನಪಿನ ಕಾಣಿಕೆ ಕೊಟ್ಟರು. □



1983ರಲ್ಲಿ ಸಿಪಿಐ(ಎಂ) ನಿಯೋಗವೊಂದು ಬೀಜಿಂಗ್‌ಗೆ ಭೇಟಿ ನೀಡಿದಾಗ ಆಗಿನ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಡೆಂಗ್‌ರವರೊಂದಿಗೆ

ಡೆಂಗ್‌ರವರ ಕೊಡುಗೆಗಳು ಅವಿಸ್ಮರಣೀಯ

ಪುಟ 4ರಿಂದ

ಸಂಬಂಧಪಟ್ಟಂತೆ ವಿಶೇಷ ಸರಿಪಡಿಕೆ ಚಳುವಳಿಗಳನ್ನು ಪಕ್ಷ ನಡೆಸಿತು. ಈಗಲೂ ಚೀನಾ ಕಮ್ಯುನಿಸ್ಟ್ ಪಕ್ಷದ ಹದಿನಾಲ್ಕನೇ ಮಹಾಧಿವೇಶನದ ನಿರ್ಣಯಕ್ಕನುಗುಣವಾಗಿ ಇಂತಹ ಒಂದು ಸರಿಪಡಿಕೆ ಚಳವಳಿ ನಡೆಯುತ್ತಿದೆ. ಅದೇ ವೇಳೆಗೆ ಡೆಂಗ್‌ರವರು ಅಗತ್ಯವಿದ್ದ ಸುಧಾರಣೆಗಳನ್ನೆಲ್ಲಾ ಒಟ್ಟಾರೆಯಾಗಿ ಸಮಾಜವಾದೀ ವ್ಯವಸ್ಥೆಯೊಳಗೆ, ಪ್ರಭುತ್ವದ ಮತ್ತು ಸಾಮೂಹಿಕ ಆಸ್ತಿ ವ್ಯವಸ್ಥೆಗೆ ಪ್ರಧಾನ ಸ್ಥಾನಮಾನ ಇರುವಂತೆಯೇ ನಡೆಯಬೇಕು ಎಂದೂ ಮತ್ತೆ-ಮತ್ತೆ ಒತ್ತಿ ಹೇಳಿದರು.

ಸೋದರ ಸಂಬಂಧಗಳ ಬಗ್ಗೆ ಸರಿಯಾದ ನಿಲುವು

ಡೆಂಗ್‌ರವರ ನೇತೃತ್ವದಲ್ಲಿ ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲದ ಬಗ್ಗೆ ಪಕ್ಷದ ನಿಲುವಿನಲ್ಲೂ, 'ಸಾಂಸ್ಕೃತಿಕ ಕ್ರಾಂತಿ'ಯ ಕಾಲದ ನಿಲುವಿಗಿಂತ ಒಂದು ಮೂಲಭೂತ ಬದಲಾವಣೆ ಕಂಡು ಬಂತು. ಸಾಂಸ್ಕೃತಿಕ ಕ್ರಾಂತಿ ಚೀನಾದ ಆರ್ಥಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ - ಶೈಕ್ಷಣಿಕ ಅಭಿವೃದ್ಧಿಯ ಮೇಲಷ್ಟೇ ಭಾರೀ ಹಾನಿ ತಂದಿತಷ್ಟೇ ಅಲ್ಲ ಚೀನಾ ಕಮ್ಯುನಿಸ್ಟ್ ಪಕ್ಷ ಇತರ ಕಮ್ಯುನಿಸ್ಟ್ ಪಕ್ಷಗಳ ವ್ಯವಹಾರಗಳಲ್ಲಿ ಬಹಿರಂಗವಾಗಿಯೇ ಮೂಗುತೂರಿಸಿ ಅದಕ್ಕೆ ಆದೇಶ ನೀಡುವಂತೆಯೂ ಕುಮ್ಮಕ್ಕು ನೀಡಿತು. ನಮ್ಮ ಪಕ್ಷ(ಸಿಪಿಎಂ) ಚೀನಾ ಕಮ್ಯುನಿಸ್ಟ್ ಪಕ್ಷದ ಈ ರೀತಿಯ ಮಧ್ಯಪ್ರವೇಶದಒಂದು ಪ್ರಮುಖ ಗುರಿಯಾಗಿತ್ತು. ಸಿಪಿಐ(ಎಂ) ಆ ಪಕ್ಷದ ಭಾರೀ ಟೀಕೆಯನ್ನು ಎದುರಿಸಬೇಕಾಗಿ ಬಂದಿತ್ತು.

ಡೆಂಗ್ ಇಂತಹ ಒಂದು ನಿಲುವಿನಲ್ಲಿರುವ ದೋಷವನ್ನು ಅರಿತರು. ಸೋದರ ಪಕ್ಷಗಳ ನಡುವಿನ ಸಂಬಂಧದ ಬಗ್ಗೆ ಚೀನಾ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಕೆಲವು ಹಿರಿಯ ಸಿಬ್ಬಂದಿಯೊಡನೆ ಮಾತನಾಡುತ್ತಾ ಮೇ 31, 1980 ರಲ್ಲಿ ಡೆಂಗ್ ಹೇಳಿದ ಮಾತುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಒಂದು ಕಮ್ಯುನಿಸ್ಟ್ ಪಕ್ಷ ಒಂದು ವಿದೇಶೀ ಸೋದರ ಪಕ್ಷದ ಕಾರ್ಯಗಳ ಬಗ್ಗೆ ಟಿಪ್ಪಣಿ ಮಾಡುವಾಗ ಒಂದು ಬಿರುಸಾದ ಸೂತ್ರದ ಪ್ರಕಾರ ಅಥವಾ ಒಂದು ಆಗಲೇ ಸ್ಥಾಪನೆಗೊಂಡ ನಿರ್ದಿಷ್ಟ ವಿಧಾನದ ಆಧಾರದ ಮೇಲೆ ಆ ಕಾರ್ಯಗಳ ಬಗ್ಗೆ ತೀರ್ಮಾನ ಮಾಡಬಹುದು. ಇಂತಹ ನಿಲುವಿನಿಂದ ಏನೇನೂ ಪ್ರಯೋಜನ ಇಲ್ಲ ಎಂಬುದನ್ನು ವಾಸ್ತವಿಕ ಸಂಗತಿಗಳೇ ತೋರಿಸಿ ಕೊಟ್ಟಿವೆ. ಪರಿಸ್ಥಿತಿಗಳು ದೇಶದಿಂದ ದೇಶಕ್ಕೆ ಬಹಳ ಭಿನ್ನವಾಗಿರುತ್ತವೆ. ಅದೇ ರೀತಿ ರಾಜಕೀಯ ಪ್ರಜ್ಞೆಯ ಮಟ್ಟವೂ ಜನಗಳಿಂದ ಜನಗಳಿಗೆ ಬೇರೆಯಾಗಿರುತ್ತವೆ. ಒಂದು ದೇಶದ ವರ್ಗ ಸಂಬಂಧಗಳು ಇನ್ನೊಂದು ದೇಶದ ವರ್ಗ ಸಂಬಂಧಗಳಿಗಿಂತ ಬಹಳ ಭಿನ್ನವಾಗಿರುತ್ತವೆ. ಇಷ್ಟೆಲ್ಲಾ ಭಿನ್ನತೆಗಳಿರುವಾಗ ಒಂದೇ ಸೂತ್ರವನ್ನು ಎಲ್ಲಕ್ಕೂ ಯಾಂತ್ರಿಕವಾಗಿ ಅನುಸರಿಸಲು ಹೇಗೆ ಸಾಧ್ಯ? ನಾವೊಂದು ಮಾರ್ಕ್ಸ್‌ವಾದಿ ಸೂತ್ರವನ್ನೇ ಅನ್ವಯಿಸುತ್ತಿದ್ದರೂ ಆ ಸೂತ್ರವನ್ನು ಸಂಬಂಧಪಟ್ಟ ದೇಶದ ವಾಸ್ತವತೆಯೊಂದಿಗೆ ಬೆಸೆಯದಿದ್ದರೆ ತಪ್ಪುಗಳನ್ನು ತಡೆಯುವುದು ಸಾಧ್ಯವಾಗದು. ಚೀನೀ ಕ್ರಾಂತಿಯನ್ನು ನಡೆಸಿದ್ದು ರಶ್ಯನ್ ಅಕ್ಟೋಬರ್ ಕ್ರಾಂತಿಯ ಮಾದರಿಯನ್ನು ಅನುಸರಿಸಿದ್ದರಿಂದಲ್ಲ, ಚೀನಾದ ವಾಸ್ತವತೆಗಳಿಗೆ ಅನುಗುಣವಾಗಿ ಸಾಗಿ ಗ್ರಾಮೀಣ ಪ್ರದೇಶಗಳಿಂದ ನಗರಗಳನ್ನು ಸುತ್ತುವರಿದು ಸಶಸ್ತ್ರ ಬಲದಿಂದ ಅಧಿಕಾರ ಕೈವಶಪಡಿಸಿಕೊಂಡಿದ್ದರಿಂದ. ಮಾರ್ಕ್ಸ್‌ವಾದ-ಲೆನಿನ್‌ವಾದದ ಸಾರ್ವತ್ರಿಕ ನೀತಿಗಳನ್ನು ಚೀನಾದ ಮೂರ್ತ ಆಚರಣೆಯೊಂದಿಗೆ ಬೆಸೆದದ್ದರಿಂದಲೇ ಚೀನೀ ಕ್ರಾಂತಿ ಯಶಸ್ವಿಯಾಗಿರುವಾಗ, ಬೇರೆ ಅಭಿವೃದ್ಧಿ ಹೊಂದಿದ ದೇಶಗಳಂತೂ ಒತ್ತಟ್ಟಿಗಿರಲಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕೂಡಾ ಕ್ರಾಂತಿ ನಡೆಸುವಲ್ಲಿ ನಮ್ಮ ಮಾದರಿಯನ್ನು ಅನುಸರಿಸಬೇಕು ಎಂದು ನಾವು ಒತ್ತಾಯಿಸುವುದು ಸರಿಯಲ್ಲ. ನಿಜ, ಅವರೆಲ್ಲಾ ಸೋವಿಯತ್ ಮಾದರಿ ಅನುಸರಿಸಬೇಕು ಎಂದು ಒತ್ತಾಯಿಸುವುದು ಕೂಡಾ ಸರಿಯಲ್ಲ"

ಮುಂದುವರಿದು ಡೆಂಗ್ ಇದರ ಸಾರಾಂಶವನ್ನು ಹೀಗೆ ಮುಂದಿಟ್ಟರು.

"ಇವೆಲ್ಲದರ ಸಾರಾಂಶವೆಂದರೆ ವಿಭಿನ್ನ ದೇಶಗಳ ಪಕ್ಷಗಳು ಮತ್ತು ಜನಗಳು ತಮ್ಮ ವ್ಯವಹಾರಗಳನ್ನು ನಿಭಾಯಿಸುವ ರೀತಿಯನ್ನು ನಾವು ಗೌರವಿಸಬೇಕು. ಅವರು ತಾವಾಗಿಯೇ ತಮ್ಮದೇ ದಾರಿಗಳನ್ನು ಕಂಡುಕೊಳ್ಳಲು, ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ಹಾದಿಗಳನ್ನು ಕಂಡುಕೊಳ್ಳಲು ಬಿಡಬೇಕು. ಬೇರೆಯವರು ಆಜ್ಞಾಪಿಸುವುದಕ್ಕೆ ನಮ್ಮ ಆಕ್ಷೇಪವಿದೆ. ಅದೇ ರೀತಿ ನಾವು ಕೂಡಾ ಎಂದೂ ಬೇರೆಯವರನ್ನು ಆಜ್ಞಾಪಿಸುವುದಿಲ್ಲ, ಇದೊಂದು ಮಹತ್ವಪೂರ್ಣ ನೀತಿ ಎಂದು ಪರಿಗಣಿಸಬೇಕು".

ಈ ನೀತಿಯ ಪ್ರಕಾರವೇ ಚೀನಾ ಕಮ್ಯುನಿಸ್ಟ್ ಪಕ್ಷ ಹಲವು ಭಿನ್ನಾಭಿಪ್ರಾಯಗಳಿದ್ದಾಗ್ಯೂ ಎಂದೂ ತನ್ನನ್ನು ಟೀಕಿಸದ ಸಿಪಿಐ(ಎಂ)ನ್ನು ಸೋದರ ಮಾತುಕತೆಗಳಿಗೆ ಕರೆಯಿತು. ಈ ವಿಷಯದಲ್ಲಿ ಸಿಪಿಐ(ಎಂ) ನ ಹಲವು ನಿಯೋಗಗಳು ಬೈಜಿಂಗ್ ಹೋದವು. ಕೊನೆಗೆ 1983ರಲ್ಲಿ ಇಎಂಎಸ್ ನಂಬೂದರಿಪಾಡ್, ದಿವಂಗತ ಬಸವಪುನ್ನಯ್ಯ ಮತ್ತು ನಾನು ಇದ್ದ ನಿಯೋಗವೊಂದು ಚೀನಾ ಕಮ್ಯುನಿಸ್ಟ್ ಪಕ್ಷದ ಮುಖಂಡರೊಂದಿಗೆ (ಇದರಲ್ಲಿ ಡೆಂಗ್ ಕೂಡ ಒಬ್ಬರು) ಒಂದು ಮುಕ್ತ ಮತ್ತು ಬಿಚ್ಚು ಮನಸ್ಸಿನ ಮಾತುಕತೆ ನಡೆಸಿದ ನಂತರ ಚೀನಾ ಕಮ್ಯುನಿಸ್ಟ್ ಪಕ್ಷ ಮತ್ತು ಸಿಪಿಐ(ಎಂ) ನಡುವಿನ ಸೋದರ ಸಂಬಂಧಗಳು ಮತ್ತೆ ನೆಲೆಗೊಂಡವು. ಚೀನಾ ಕಮ್ಯುನಿಸ್ಟ್ ಪಕ್ಷದ ಮುಖಂಡರು ಯಾವುದೇ ಹಿಂಜರಿಕೆಯಿಲ್ಲದೆ ಹಿಂದಿನ ತಪ್ಪುಗಳನ್ನು ಒಪ್ಪಿಕೊಂಡರು. ಭಾರತ-ಚೀನಾ ನಡುವಿನ ಸಂಬಂಧಗಳಲ್ಲಿ ವಿರಸ ಬಂದರೂ, ಭಾರತದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಚೀನಾ-ವಿರೋಧಿ ಉನ್ಮಾದವನ್ನು ಎಬ್ಬಿಸಿದರೂ ಸಿಪಿಐ(ಎಂ) ನಮ್ಮೆರಡು ದೇಶಗಳ ನಡುವಿನ ಸಂಬಂಧಗಳನ್ನು ಮತ್ತೆ ಸ್ಥಾಪಿಸಿ ಅದನ್ನು ಬಲಪಡಿಸಬೇಕು ಎಂದು ದೃಢವಾದ ನಿಲುವು ತಳೆದ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಆ ನಂತರ ನಮ್ಮೆರಡು ಪಕ್ಷಗಳ ನಡುವಿನ ಸಂಬಂಧಗಳು ಇನ್ನಷ್ಟು ಬಲಗೊಂಡಿವೆ. ಅಲ್ಲಿಯ ಹಲವು ನಿಯೋಗಗಳು ಇಲ್ಲಿಗೆ ಬಂದಿವೆ. ಇಲ್ಲಿಯ ನಿಯೋಗಗಳು ಅಲ್ಲಿಗೆ ಹೋಗಿವೆ.

ಹೀಗಿತ್ತು ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಆಂದೋಲನದ ಐಕ್ಯತೆಯನ್ನು ಮತ್ತೆ ಸ್ಥಾಪಿಸುವ ಪ್ರಕ್ರಿಯೆಗೆ ಡೆಂಗ್‌ರವರ ಕೊಡುಗೆ. ಈ ಕೊಡುಗೆ ಹಾಗೂ ವಿಶ್ವದ ಜನಸಂಖ್ಯೆಯ ಐದನೇ ಒಂದರಷ್ಟಿರುವ ವಿಶಾಲ ದೇಶದಲ್ಲಿ ಚೀನೀ ಗುಣಲಕ್ಷಣಗಳುಳ್ಳ ಸಮಾಜವಾದವನ್ನು ಕಟ್ಟುವಲ್ಲಿ ಅವರ ಮುಖಂಡತ್ವ ಹಾಗೂ ಮಾರ್ಗದರ್ಶನದಿಂದ ನಾವು ನಮ್ಮ ಹೋರಾಟಗಳ ಸಂದರ್ಭದಲ್ಲೂ ಹಲವು ಅಮೂಲ್ಯ ಮಾರ್ಗದರ್ಶನಗಳನ್ನು ಪಡೆಯಲು ಸಾಧ್ಯ. □

ಇದು ನಿಮಗೆ ಗೊತ್ತೆ?

● ಭಾರತದ ಕಂಪನಿಗಳು ಜಗತ್ತಿನಲ್ಲಿಯೇ ಅತೀ ಕಮ್ಮಿ ಆದಾಯ ತೆರಿಗೆ ನೀಡುವ ಕಂಪನಿಗಳು. 200 ದೊಡ್ಡ ಕಂಪನಿಗಳು ನೀಡುವ ಆದಾಯ ತೆರಿಗೆ ಸರಾಸರಿ ಶೇ. 20ಕ್ಕಿಂತಲೂ ಕಮ್ಮಿ. ಅಮೇರಿಕಾದಲ್ಲಿ ಇದು ಶೇ. 30ಕ್ಕಿಂತ ಹೆಚ್ಚು. ಯುರೋಪಿನಲ್ಲಿ ಶೇ. 40ಕ್ಕಿಂತ ಹೆಚ್ಚು. ಫಿಲಿಪ್ಪೈನ್ಸ್‌ನಲ್ಲೂ ಶೇ. 30ಕ್ಕಿಂತ ಹೆಚ್ಚು.

● ಭಾರತದಲ್ಲಿಕಂಪೆನಿಗಳ ಒಟ್ಟು ವಾರ್ಷಿಕ ಲಾಭ 1 ಲಕ್ಷ ಕೋಟಿ ರೂ. ಇದರ ಮೇಲೆ ಮುಂದುವರಿದ ದೇಶಗಳಲ್ಲಿ ಇದ್ದಂತೆ ಶೇ. 30 ತೆರಿಗೆ ಹಾಕಿದರೆ ಸರಕಾರಕ್ಕೆ ಸಿಗಬೇಕಾದ ತೆರಿಗೆ ಆದಾಯ 30000 ಕೋಟಿ. ಆದರೆ 1997-98ರ ಬಜೆಟ್ಟಿನಲ್ಲಿಅಂದಾಜು ಮಾಡಿರುವುದು ಕೇವಲ 18600 ಕೋಟಿ ರೂ.!

● ಇತ್ತೀಚೆಗೆ ಕೇಂದ್ರ ಸರಕಾರ ಮೀನ-ಮೇಷ ಎಣಿಸಿ ಕೊನೆಗೂ ಎಡಪಕ್ಷಗಳ ಒತ್ತಾಯದಿಂದ ಪ್ರಕಟಿಸಿದ ಪುನರ್ರಚಿತ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಂದರೆ ಬಡತನದ ರೇಖೆಯ ಕೆಳಗಿರುವ 32 ಕೋಟಿ ಜನರಿಗೆ ಅರ್ಧ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸುವ ಯೋಜನೆಯಿಂದಾಗಿ 1996-97ರ ಬಜೆಟ್ಟಿನಲ್ಲಿ ಆಹಾರಕ್ಕೊಂದು ನೀಡಿದ್ದ 5774 ಕೋಟಿ ರೂ. ಸಾಲದೆ ಅದನ್ನು 8283 ಕೋಟಿ ರೂ.ಗೆ ಏರಿಸಬೇಕಾಗಿ ಬಂದಿದೆ ಎಂದು ಹಲವು ಆರ್ಥಿಕ ತಜ್ಞರು, ದೊಡ್ಡ ಪತ್ರಿಕೆಗಳು ಬೊಬ್ಬಿಡುತ್ತಿದ್ದಾರೆ.

● 1989-90ರಲ್ಲಿ 'ಹೊಸ ಆರ್ಥಿಕ ನೀತಿ'ಗಳು ಆರಂಭವಾಗುವ ಮೊದಲು ತೆರಿಗೆ ಆದಾಯಕ್ಕೂ ಒಟ್ಟು ಆಂತರಿಕ ಉತ್ಪನ್ನದ ಮೌಲ್ಯ(ಜಿ.ಡಿ.ಪಿ.)ಕ್ಕೂ ಇದ್ದ ಅನುಪಾತ ಶೇ. 11.3. ಇದು 1995-96ರಲ್ಲಿಶೇ. 10.2ಕ್ಕೆ ಇಳಿಯಿತು. ಈ ಇಳಿತಕ್ಕೆ ಕಾರಣ ಖಾಸಗೀ ಉದ್ಯಮಿಗಳಿಗೆ ನೀಡಿದ ವಿವಿಧ ರಿಯಾಯಿತಿಗಳು. ಇವುಗಳ ಮೊತ್ತ ಜಿ.ಡಿ.ಪಿ.ಯ ಶೇ.1.1 ಅಂದರೆ ಸುಮಾರು 11935 ಕೋಟಿ ರೂ. 1995-96ರ ಒಂದೇ ವರ್ಷದಲ್ಲಿ ಖಾಸಗೀ ಉದ್ಯಮಿಗಳಿಗೆ ನೀಡಿದ ಈ ಅಪಾರ 'ಸಬ್ಸಿಡಿ'ಯ ಬಗ್ಗೆ ಈ [illegible] ಮಹಾನುಭಾವರೂ ಚಕಾರವೆತ್ತಿಲ್ಲ!

● 1990ರಿಂದ 1994ರ ನಡುವೆ 210 ದೊಡ್ಡ ಕಂಪನಿಗಳು ಶೇ. 100 ಡಿಪ್ರಿಸಿಯೇಶನ್‌ನ ಅವಕಾಶವನ್ನು ದುರುಪಯೋಗ ಮಾಡಿದ್ದರಿಂದ ಸರಕಾರಕ್ಕೆ 4400 ಕೋಟಿರೂ. ನಷ್ಟವಾಗಿದೆ ಎಂದು ಕೇಂದ್ರ ನೇರ ತೆರಿಗೆ ಮಂಡಳಿ ಅಂದಾಜು ಮಾಡಿದೆ.

● ಭಾರತದಲ್ಲಿನ ತೆರಿಗೆ ವ್ಯವಸ್ಥೆಯ ಅಧ್ಯಯನ ನಡೆಸಿರುವ ಡಾ.ರಾಜಾ ಚೆಲ್ಲಯ್ಯನವರ ಪ್ರಕಾರ ಕೂಡಾ 1993-94ರಲ್ಲಿಕಂಡು ಬಂದ ತೆರಿಗೆ ದರಗಳು ಹೀಗಿವೆ.

ಕಂಪನಿಯ ಒಟ್ಟು ಆಸ್ತಿ ಮೌಲ್ಯ (ಕೋಟಿ ರೂ.ಗಳಲ್ಲಿ)	ಸರಾಸರಿ ತೆರಿಗೆ ದರ(ಶೇ.)
65.4 ಗಿಂತ ಕಮ್ಮಿ	34.73
65.4-125.1	27.82
125.1-258.7	18.95
258.7 ಗಿಂತ ಹೆಚ್ಚು	13.93

ಅಂದರೆ ಆಸ್ತಿ ಹೆಚ್ಚಿದಂತೆ ತೆರಿಗೆ ದರ ಕಮ್ಮಿ!

● 1994-95ರಲ್ಲಿ 500 ಕೋಟಿ ರೂ.ಗಳಿಗಿಂತ ಹೆಚ್ಚು ವಹಿವಾಟು ನಡೆಸಿದ 56 ದೊಡ್ಡ ಕಂಪನಿಗಳು ಗಳಿಸಿದ ಒಟ್ಟುಲಾಭ 13050 ಕೋಟಿ ರೂ. ಆದರೆ ಅವು ತೆತ್ತ ತೆರಿಗೆ ಕೇವಲ 145 ಕೋಟಿ ರೂ. ಅಂದರೆ ಕೇವಲ ಶೇ. 1.11.


● ತೆರಿಗೆ ಆದಾಯಕ್ಕೂ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿ.ಎನ್.ಪಿ.)ಕ್ಕೂ ಇರುವ ಅನುಪಾತ ಭಾರತದಲ್ಲಿ ಶೇ. 18, ಮುಂದುವರಿದ ಕೈಗಾರಿಕಾ ದೇಶಗಳಲ್ಲಿ ಇದು ಶೇ. 30ಕ್ಕೂ ಹೆಚ್ಚು. ಆದರೂ ಭಾರತದಲ್ಲಿ ತೆರಿಗೆಗಳು ಹೆಚ್ಚಿರುವುದರಿಂದ ಉದ್ಯಮಿಗಳಿಗೆ ಪ್ರೋತ್ಸಾಹದ ವಾತಾವರಣವಿಲ್ಲ ಎಂಬ ಕೂಗು!

● ತೆರಿಗೆ ಬಾಕಿ ಬರಬೇಕಾದ್ದು ಕೂಡಾ 23611 ಕೋಟಿ ರೂ.

● ಬಹುರಾಷ್ಟ್ರ ಕಂಪನಿಗಳು ವಿವಿಧ ವಿಧಾನಗಳಿಂದ ವಂಚಿಸುವ ವಿದೇಶಿ ವಿನಿಮಯದ ಮೊತ್ತವೇ ವಾರ್ಷಿಕವಾಗಿ 30000 ಕೋಟಿ ರೂ.

ಸ್ವಯಂಘೋಷಣಾ ಸ್ಕೀಮೋ ಅಥವಾ ಸ್ಕ್ಯಾಮೋ?

ಈ ವರ್ಷದ ಬಜೆಟ್ಟಿನಲ್ಲಿ ಕಪ್ಪು ಹಣ ಸಂಗ್ರಹಿಟ್ಟವರಿಗೆ ನೀಡಿದ ಅವಕಾಶದ ಬಗ್ಗೆ 'ಇಕನಾಮಿಕ್ ಟೈಮ್ಸ್'ನಲ್ಲಿ ಪೊನ್ನಪ್ಪನವರ ವ್ಯಂಗ್ಯ



ಮಾತಿನ ಮಂಟಪ ಸಾಕು-ಕೃತಿ ಬೇಕು

ಪುಟ 10ರಿಂದ

ಇಲ್ಲ ಎಂದಂತಾಗುತ್ತದೆ" ಎಂದು ಮಹಿಳಾ ಸಂಘಟನೆಗಳು ಬೇಸರ ವ್ಯಕ್ತಪಡಿಸಿದವು.

ಸಂಸತ್ತಿನ ಪ್ರಸಕ್ತ ಅಧಿವೇಶನದ ಅಜೆಂಡಾದಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಹೆಸರಿಲ್ಲ. ಆದ್ದರಿಂದ ಸರಕಾರದ ಉದ್ದೇಶಗಳ ಬಗ್ಗೆ ತಮಗೆ ಸಂದೇಹವಿದೆ ಎಂದು ಈ ಸಂಘಟನೆಗಳು ರಾಷ್ಟ್ರಪತಿಗಳಿಗೆ ತಿಳಿಸಿವೆ.

ಎಲ್ಲಾಪ್ರಮುಖ ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ಸಾರ್ವಜನಿಕವಾಗಿ ಭರವಸೆ ನೀಡಿರುವಾಗ ಸರಕಾರ ಇದರಲ್ಲಿ ಈಗೇನಾದರೂ ಬದಲಾವಣೆ ತರುವ ಪ್ರಯತ್ನ ನಡೆಸಿದರೆ ಅದು ವಿಶ್ವಾಸಘಾತುಕತನವಾಗುತ್ತದೆ. ಇದರಿಂದ ಮಹಿಳೆಯರಿಗೆ ಈಗಿರುವ ವ್ಯವಸ್ಥೆಯಲ್ಲಿ ವಿಶ್ವಾಸಾರ್ಹತೆ ಕಮ್ಮಿಯಾಗುತ್ತದೆ ಎಂದು ಈ ಸಂಘಟನೆಗಳ ಮುಂದಾಳುಗಳು ಎಚ್ಚರಿಸಿದ್ದಾರೆ.

ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಮನವಿ ಪತ್ರ ಅರ್ಪಿಸಿದ ಈ ಏಳು ರಾಷ್ಟ್ರೀಯ ಸಂಘಟನೆಗಳೆಂದರೆ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ, ಅಖಿಲ ಭಾರತ ಮಹಿಳಾ ಸಮ್ಮೇಳನ, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಜಂಟಿ ಮಹಿಳಾ ಕಾರ್ಯಕ್ರಮ, ಮಹಿಳಾ ದಕ್ಷತಾ ಸಮಿತಿ, ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ ಹಾಗೂ ಡಬ್ಲ್ಯುವೈಸಿಎ.



KRNM/BGS-405 MAG(2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು